ಜೆಎಸ್‌ಎಸ್ ಮಹಾವಿದ್ಯಾಪೀಠ, ಮೈಸೂರು
JSS MAHAVIDYAPEETHA, MYSURU

# ಜೆಎಸ್‌ಎಸ್ ವಾರ್ತಾಪತ್ರ

ಮಾಸಪತ್ರಿಕೆ

# JSS VARTHAPATHRA

Monthly Magazine

ಸಂಪುಟ 11 ಸಂಚಿಕೆ 2 ಫೆಬ್ರವರಿ 2026



ಸುತ್ತೂರು ಶ್ರೀಕ್ಷೇತ್ರದಲ್ಲಿ ವಿಜೃಂಭಣೆಯಿಂದ ಜರುಗಿದ ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ರಥೋತ್ಸವ (17 ಜನವರಿ 2026)



ಜಾತ್ರಾ ಮಹೋತ್ಸವದಲ್ಲಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ವಸ್ತುಪ್ರದರ್ಶನವು ಉದ್ಘಾಟನೆಯಾಯಿತು. ಉಪ್ಪಿನಬೆಟಗೇರಿ ಹಾಗೂ ಅಥಣಿ ಗಚ್ಚಿನಮಠದ ಶ್ರೀಗಳು, ಶ್ರೀ ಹೆಚ್.ಡಿ. ತಮ್ಮಯ್ಯ, ಶ್ರೀ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಶ್ರೀ ಜಗದೀಶ್ ಎಸ್. ಶೆಟ್ಟರ್, ಶ್ರೀಮತಿ ಶಿಲ್ಪಾ ಜಗದೀಶ್ ಶೆಟ್ಟರ್, ಶ್ರೀ ಎ. ಬಣ್ಣಾರಿರವರುಗಳಿದ್ದಾರೆ. (15 ಜನವರಿ 2026)



ಜಾತ್ರಾ ಮಹೋತ್ಸವದಲ್ಲಿ ದೇಸಿ ಆಟಗಳ ಸ್ಪರ್ಧೆಯನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಕು. ಶೋಭಾ ಕರಂದ್ಲಾಜೆಯವರು ಉದ್ಘಾಟಿಸಿದರು. ಡಾ. ಗಿರಿಧರ್ ಪರ್ವತಂ, ಶ್ರೀ ಆರ್. ಗಣೇಶ್, ಶ್ರೀ ಸೋದೆ ಮಠದ ಶ್ರೀಪಾದಂಗಳು ಹಾಗೂ ಶ್ರೀ ತೇಜಸ್ವಿ ಸೂರ್ಯರವರುಗಳಿದ್ದಾರೆ. (16 ಜನವರಿ 2026)

## ಶ್ರೀ ಜಯರಾಜೇಂದ್ರರವರಿಗೆ ಪಿಎಚ್.ಡಿ. ಪದವಿ



ಸುತ್ತೂರು ಶ್ರೀಮಠದ ಶ್ರೀ ಜಯರಾಜೇಂದ್ರರವರು **‘ಎಥಿಕ್ಸ್ ಇನ್ ದ ಭಕ್ತಿ ಮೂವ್‌ಮೆಂಟ್ಸ್ ಆಫ್ ಸೌತ್ ಇಂಡಿಯಾ – ಎ ಸ್ಟಡಿ’** ಎಂಬ ವಿಷಯವಾಗಿ ನಡೆಸಿದ ಸಂಶೋಧನಾ ಮಹಾಪ್ರಬಂಧಕ್ಕೆ ಮೈಸೂರು ವಿಶ್ವವಿದ್ಯಾನಿಲಯವು ತತ್ತ್ವಶಾಸ್ತ್ರ ವಿಷಯದಲ್ಲಿ ಪಿಎಚ್.ಡಿ. ಪದವಿ ನೀಡಿದೆ. ಪ್ರೊ. ಎಂ. ಡೇನಿಯಲ್‌ರವರು (ಬಲಗಡೆಯಿಂದ ಎರಡನೆಯವರು) ಮಾರ್ಗದರ್ಶಕರಾಗಿದ್ದರು.



**ಮಾಸಿಕ ಸಾಮೂಹಿಕ ವಿವಾಹ 2026**
**ಸುತ್ತೂರು ಶ್ರೀಕ್ಷೇತ್ರ**

**ಏಪ್ರಿಲ್ 23 ಗುರುವಾರ**

**ವಿವರಗಳಿಗೆ ಸಂಪರ್ಕಿಸಿ**
**ಆಡಳಿತಾಧಿಕಾರಿಗಳು, ಜೆಎಸ್ಎಸ್ ಸಂಸ್ಥೆಗಳು ಸುತ್ತೂರು**
**ದೂರವಾಣಿ : 08221–232223, 232224**

## ಸುತ್ತೂರು ಜಾತ್ರಾ ಮಹೋತ್ಸವ 2026

ಸುತ್ತೂರು ಶ್ರೀಕ್ಷೇತ್ರದಲ್ಲಿ ಜನವರಿ 15ರಿಂದ 20ರವರೆಗೆ ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಜಾತ್ರಾ ಮಹೋತ್ಸವವು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ವಿಜೃಂಭಣೆಯಿಂದ ಜರುಗಿತು.

### ಜಾತ್ರೆಗಳಿಂದ ಸಂಸ್ಕೃತಿ–ಪರಂಪರೆ ಜೀವಂತ




ಸುತ್ತೂರು ಜಾತ್ರಾ ಮಹೋತ್ಸವದಲ್ಲಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯಸಾನ್ನಿಧ್ಯದಲ್ಲಿ ವಸ್ತುಪ್ರದರ್ಶನ, ಕೃಷಿಮೇಳ, ಸಾಂಸ್ಕೃತಿಕ ಮೇಳಗಳ ಉದ್ಘಾಟನೆಯನ್ನು ಮಾಜಿ ಮುಖ್ಯಮಂತ್ರಿಗಳು ಮತ್ತು ಸಂಸದರಾದ ಶ್ರೀ ಜಗದೀಶ್ ಎಸ್. ಶೆಟ್ಟರ್‌ರವರು ನೆರವೇರಿಸಿದರು. (15 ಜನವರಿ 2026)

ಜಾತ್ರೆಗಳು ದೇಶದ ಪರಂಪರೆಯ ಪ್ರತೀಕ, ಆಧುನಿಕ ಜಗತ್ತಿನಲ್ಲಿ ವೈಜ್ಞಾನಿಕವಾದ ಬದಲಾವಣೆಗಳು ಆದಾಗ್ಯೂ ಸಹ ಜಾತ್ರೆಗಳಿಂದ ನಮ್ಮ ಸಂಸ್ಕೃತಿ, ಪರಂಪರೆಗಳು ಜೀವಂತವಾಗಿವೆ ಎಂದು ಮಾಜಿ ಮುಖ್ಯಮಂತ್ರಿಗಳು ಮತ್ತು ಸಂಸದರಾದ ಶ್ರೀ ಜಗದೀಶ್ ಎಸ್. ಶೆಟ್ಟರ್‌ರವರು ಹೇಳಿದರು.

ಸುತ್ತೂರು ಜಾತ್ರಾ ಮಹೋತ್ಸವದಲ್ಲಿ ದಿನಾಂಕ 15.1.2026 ರಂದು ನೆರವೇರಿದ ವಸ್ತುಪ್ರದರ್ಶನ, ಕೃಷಿಮೇಳ, ಸಾಂಸ್ಕೃತಿಕ ಮೇಳಗಳ ಉದ್ಘಾಟನೆಯ ಅಧ್ಯಕ್ಷತೆ ವಹಿಸಿ ಮಾತನಾಡುತ್ತಾ ಅವರು ತಿಳಿಸಿದರು. ಆಧುನಿಕ, ವೈಜ್ಞಾನಿಕ ಭರಾಟೆಯ ನಡುವೆಯೂ ಸಹ ನಮ್ಮ ದೇಶದ ಸಂಸ್ಕೃತಿ ಪರಂಪರೆಯನ್ನು ಬಿಡದೆ ನಮ್ಮ ಹಿರಿಯರು ಮತ್ತು ಯುವಕರು ಇಂತಹ ಉತ್ಸವಗಳಲ್ಲಿ ಭಾಗಿಯಾಗುತ್ತಿದ್ದಾರೆ. ಮನುಷ್ಯನಿಗೆ ಜೀವನದಲ್ಲಿ ಶಾಂತಿ ಮುಖ್ಯ. ಧಾರ್ಮಿಕ ನಂಬಿಕೆ ಆಧ್ಯಾತ್ಮಿಕ ಶಕ್ತಿಯ ಮೂಲಕ ಮಾನಸಿಕ ನೆಮ್ಮದಿಯನ್ನು ಪಡೆಯಲು ಸಾಧ್ಯ. ಸುತ್ತೂರು ಶ್ರೀಮಠವು ಧಾರ್ಮಿಕ ಜಾಗೃತಿಯ ಜೊತೆಗೆ ಶೈಕ್ಷಣಿಕ ಮತ್ತು ಆರೋಗ್ಯ ಕ್ಷೇತ್ರಗಳಲ್ಲಿ ದೇಶ ವಿದೇಶಗಳಲ್ಲಿ ಗಣನೀಯ ಸೇವೆ ಸಲ್ಲಿಸುತ್ತಿದೆ. ಇತ್ತೀಚಿನ ದಿನಗಳಲ್ಲಿ ಟಿವಿ ಮತ್ತು ಮೊಬೈಲ್ ಬಳಕೆಯಿಂದಾಗಿ ಜನರು ಮಾನಸಿಕ ಖಿನ್ನತೆಗೆ ಒಳಗಾಗುತ್ತಿದ್ದಾರೆ. ಜಾತ್ರಾ ಮಹೋತ್ಸವದ ಮೂಲಕ ಮೊಬೈಲ್ ಗೀಳಿನ ಬಗ್ಗೆ ಜಾಗೃತಿ ಮೂಡಿಸುವ ಕೆಲಸವಾಗುತ್ತಿದೆ. ಸುತ್ತೂರು ಜಾತ್ರೆ ಆಧ್ಯಾತ್ಮಿಕ ಪರಂಪರೆ, ಸಾಮಾಜಿಕ ಸೌಹಾರ್ದತೆ ಮತ್ತು ಸಾಂಸ್ಕೃತಿಕ ಚೈತನ್ಯವನ್ನು ಜೀವಂತವಾಗಿರಿಸಿದೆ, ಆಧುನಿಕ ಭಾರತದ ವಿಜ್ಞಾನ, ತಂತ್ರಜ್ಞಾನ ಕ್ಷೇತ್ರದಲ್ಲಿ ಬದಲಾವಣೆಯಾಗುತ್ತಿದೆ, ಅದಕ್ಕೆ ತಕ್ಕಂತೆ ಜೆಎಸ್‌ಎಸ್ ಶ್ರೀಮಠವು ನಮ್ಮ

ಪರಂಪರೆಯನ್ನೂ ರಕ್ಷಣೆ ಮಾಡುತ್ತಿದೆ. ಎಲ್ಲ ಕ್ಷೇತ್ರಗಳಲ್ಲೂ ಜನರಿಗೆ ತಿಳುವಳಿಕೆ ಮೂಡಿಸುವ ಕೆಲಸ ಮಾಡುತ್ತಿದೆ ಎಂದರು.

ಸಂಸದರಾದ ಶ್ರೀ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್‌ರವರು ಭಾರತವು ವಿಜ್ಞಾನ–ತಂತ್ರಜ್ಞಾನದಿಂದಾಗಿ ಅತ್ಯಂತ ವೇಗವಾಗಿ ಅಭಿವೃದ್ಧಿ ಕಂಡಿದೆ. ಆದರೆ, ನಮ್ಮ ಆಧ್ಯಾತ್ಮಿಕತೆಯ ಬೇರುಗಳನ್ನು ಎಂದಿಗೂ ಮರೆಯಬಾರದು. ಅಭಿವೃದ್ಧಿಯ ಹಾದಿಯಲ್ಲೂ ಆಧ್ಯಾತ್ಮಿಕ ಚಿಂತನೆ ಅತ್ಯಂತ ಅವಶ್ಯಕ. ಭವಿಷ್ಯದ ಭಾರತ ರೂಪಿಸಲು ಆಧ್ಯಾತ್ಮಿಕ ಬೇರು ಮತ್ತು ಆಧುನಿಕ ಆಲೋಚನೆಗಳು ಜೊತೆಗೂಡಿ ಸಾಗಬೇಕು. ಅನೇಕ ಋಷಿ ಮುನಿಗಳು ತಮ್ಮ ತಪಶ್ಶಕ್ತಿಯಿಂದಾಗಿ ನಮ್ಮ ಸಂಸ್ಕೃತಿ ಪರಂಪರೆಯನ್ನು ರಕ್ಷಣೆ ಮಾಡಿದ್ದಾರೆ. ಸಂಸ್ಕೃತಿ ಸಂರಕ್ಷಣೆ ಕಾರ್ಯದ ಮೂಲಕ ಶ್ರೇಷ್ಠ ಭಾರತವನ್ನು ನಿರ್ಮಿಸಲು ಸಾಧ್ಯ ಎಂದರು.

ವಿಧಾನಪರಿಷತ್ ಸದಸ್ಯರಾದ ಶ್ರೀ ಕೆ. ಶಿವಕುಮಾರ್‌ರವರು ಸರಳ ಸಾಮೂಹಿಕ ವಿವಾಹದ ಮೂಲಕ ಬಡಜನರಿಗೆ ಶ್ರೀಮಠ ನೆರವಾಗಿದೆ. ವಚನಗಳಿಂದಾಗಿ ಜಾತ್ಯತೀತ ಸಮಾಜ ನಿರ್ಮಾಣವನ್ನು ಕಂಡಿದ್ದೇವೆ. ಈ ನಿಟ್ಟಿನಲ್ಲಿ ಶ್ರೀಮಠವು ವಚನ ಶಾಲೆಗಳನ್ನು ಪ್ರಾರಂಭಿಸಬೇಕು. ವಚನಗಳ ಅರ್ಥವನ್ನು ಜನರಿಗೆ ತಿಳಿಸುವ ಮೂಲಕ ಮುಕ್ತ ಸಮಾಜವನ್ನು ನಿರ್ಮಿಸಲು ಮುಂದಾಗಬೇಕು ಎಂದು ಹೇಳಿದರು.

ಅಥಣಿಯ ಶ್ರೀ ಗಚ್ಚಿನಮಠದ ಶ್ರೀ ಶಿವಬಸವ ಸ್ವಾಮಿಗಳು, ಉಪ್ಪಿನಬೆಟಗೇರಿ ಶ್ರೀ ವಿರಕ್ತಮಠದ ಶ್ರೀ ಕುಮಾರ ವಿರೂಪಾಕ್ಷ ಸ್ವಾಮಿಗಳು, ಅಮೀನಗಡದ ಶ್ರೀ ಪ್ರಭುಶಂಕರ ಮಠದ ಶ್ರೀ ಶಂಕರರಾಜೇಂದ್ರ ಸ್ವಾಮಿಗಳು, ಶಾಸಕರಾದ ಶ್ರೀ ಎಚ್.ಡಿ. ತಮ್ಮಯ್ಯ, ಶ್ರೀ ಹೆಚ್.ಕೆ. ಸುರೇಶ್, ಶ್ರೀ ಎ. ಬಣ್ಣಾರಿ, ಜಿಲ್ಲಾ ಪಂಚಾಯತ್ ಸಿಇಒ ಶ್ರೀ ಎಸ್. ಉಕೇಶ್‌ಕುಮಾರ್‌ರವರುಗಳು ಮಾತನಾಡಿದರು. ಶ್ರೀಮತಿ ಶಿಲ್ಪಾ ಜಗದೀಶ್ ಶೆಟ್ಟರ್ ಉಪಸ್ಥಿತರಿದ್ದರು. ಪ್ರೊ. ಡಿ.ಎಸ್. ಸದಾಶಿವಮೂರ್ತಿ ಸ್ವಾಗತಿಸಿದರು. ಶ್ರೀ ಬಿ. ನಂಜುಂಡಸ್ವಾಮಿ ವಂದಿಸಿದರು. ಶ್ರೀ ಬಿ. ನಿರಂಜನಮೂರ್ತಿ ಕಾರ್ಯಕ್ರಮ ನಿರೂಪಿಸಿದರು.




ಸುತ್ತೂರು ಜಾತ್ರಾ ಮಹೋತ್ಸವದಲ್ಲಿ ಜೆಎಸ್ಎಸ್ ಸಂಸ್ಥೆಯ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ

## ವಿವಾಹ ಒಂದು ಪವಿತ್ರ ಸಂಸ್ಕಾರ




ಜಾತ್ರಾ ಮಹೋತ್ಸವದ ಅಂಗವಾಗಿ ಏರ್ಪಡಿಸಿದ್ದ ಸಾಮೂಹಿಕ ವಿವಾಹ ಕಾರ್ಯಕ್ರಮವನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಉದ್ಘಾಟಿಸಲಾಯಿತು. ಶ್ರೀಮತಿ ವಿ. ಸುನಂದ ಅಲ್ಲಂ, ಶ್ರೀ ಅಲ್ಲಂ ವೀರಭದ್ರಪ್ಪ, ರೆ.ಫಾ. ಫ್ರಾನ್ಸಿಸ್ ಸೆರಾವ್ ಎಸ್.ಜೆ., ರೆ.ಫಾ. ಡಾ. ಗೇಬ್ರಿಯಲ್ ಮಾರ್ ಗ್ರೆಗೋರಿಯಸ್, ಪಡುಗೂರು ಶ್ರೀಗಳು, ಶ್ರೀ ರಾಮಲಿಂಗಾರೆಡ್ಡಿ ಮೊದಲಾದವರಿದ್ದಾರೆ. (16 ಜನವರಿ 2026)

"ವಿವಾಹ ಎಂಬುದು ಒಂದು ಪವಿತ್ರ ಸಂಸ್ಕಾರ" ಎಂದು ಶಾಸಕರು ಹಾಗೂ ಮಾಜಿ ಸಚಿವರಾದ ಶ್ರೀ ಆರ್.ವಿ. ದೇಶಪಾಂಡೆಯವರು ಹೇಳಿದರು.

ಸುತ್ತೂರು ಜಾತ್ರಾ ಮಹೋತ್ಸವದಲ್ಲಿ ದಿನಾಂಕ 15.1.2026 ರಂದು ನಡೆದ ಸಾಮೂಹಿಕ ವಿವಾಹ ಕಾರ್ಯಕ್ರಮದಲ್ಲಿ ಅವರು ಮಾತನಾಡುತ್ತಾ ತಿಳಿಸಿದರು.

ಗುರುಗಳ ಆಶೀರ್ವಾದದಿಂದ ದಾಂಪತ್ಯ ಜೀವನಕ್ಕೆ ಕಾಲಿಟ್ಟಿರುವವರು ಚೆನ್ನಾಗಿ ಬಾಳಬೇಕು. ಕುಟುಂಬ ಮತ್ತು ಸಮಾಜದ ದೃಷ್ಟಿಯಲ್ಲಿ ಆದರ್ಶ ಬದುಕು ನಿಮ್ಮದಾಗಬೇಕು. ಸುತ್ತೂರು ಶ್ರೀಕ್ಷೇತ್ರದಲ್ಲಿ ಗುರುಗಳ ಆಶೀರ್ವಾದದಿಂದ ಈ ಕಾರ್ಯಕ್ರಮ ನಡೆಯುತ್ತಿದೆ. ಒಂದು ಮದುವೆಗೆ ಲಕ್ಷ ಲಕ್ಷ ಹಣ ಖರ್ಚು ಮಾಡುತ್ತೇವೆ. ಸಾಮೂಹಿಕ ಮದುವೆಗಳು ದುಂದು ವೆಚ್ಚವಿಲ್ಲದೆ ನಡೆಯುತ್ತವೆ. ಗುರುಗಳ ಆಶೀರ್ವಾದ ನವದಂಪತಿಗಳ ಮೇಲಿರುತ್ತದೆ. ಇದು ನಿಜಕ್ಕೂ ಪವಿತ್ರಕಾರ್ಯ. ಇಂತಹ ಕಾರ್ಯಕ್ರಮಗಳಿಗೆ ಎಷ್ಟು ಕೃತಜ್ಞತೆ ಹೇಳಿದರೂ ಸಾಕಾಗುವುದಿಲ್ಲ. ಸಾಮೂಹಿಕ ಮದುವೆ ಎಲ್ಲೆಡೆ ಆಗಬೇಕು. ಇದರಿಂದ ದುಂದು ವೆಚ್ಚ ಕಡಿಮೆಯಾಗುತ್ತದೆ. ಹಣ ಉಳಿಯುತ್ತದೆ ಎಂದು ತಿಳಿಸಿದರು.

ಸಚಿವರಾದ ಶ್ರೀ ರಾಮಲಿಂಗಾ ರೆಡ್ಡಿಯವರು ಇಂತಹ ಸಾಮೂಹಿಕ ವಿವಾಹ ಸಾರ್ವಜನಿಕರಿಗೆ ಹತ್ತಿರವಾದ ಕಾರ್ಯಕ್ರಮ. ಲಕ್ಷಾಂತರ ಜನ ಇಲ್ಲಿ ಭಾಗಿಯಾಗಿದ್ದಾರೆ. ದಾಸೋಹದ ಜತೆಗೆ ವಿದ್ಯಾ ದಾನಕ್ಕೂ ಒತ್ತು ನೀಡಲಾಗುತ್ತಿದೆ. ರಾಜ್ಯ, ರಾಷ್ಟ್ರಮಟ್ಟದಲ್ಲಿ ವಿದ್ಯಾಸಂಸ್ಥೆಗಳು ಇವೆ. ಲಕ್ಷಾಂತರ ಜನ ಇಲ್ಲಿ ಓದಿ ಜೀವನ ಕಟ್ಟಿಕೊಂಡಿದ್ದಾರೆ. ಇಲ್ಲಿ ಹಿಂದಿನ ಮಠಾಧಿಪತಿಗಳ ಸೇವೆಯನ್ನೂ ಸ್ಮರಿಸಬೇಕು. ಸಾಮೂಹಿಕ ಮದುವೆಗೆ ಶ್ರೀಮಠ ಒತ್ತು ನೀಡುತ್ತಿದೆ. ಹೆಚ್ಚು ಸಾಮೂಹಿಕ

ಮದುವೆಗಳು ಆಗಬೇಕು. ಪೂಜ್ಯರಿಗೆ ಎಲ್ಲರ ಪರವಾಗಿ ಗೌರವಪೂರ್ವಕ ಅಭಿನಂದನೆ ಸಲ್ಲಿಸುತ್ತೇನೆ ಎಂದು ಹೇಳಿದರು.

134 ಜೋಡಿ ವಧೂವರರು ಸತಿಪತಿಗಳಾಗಿ ದಾಂಪತ್ಯ ಜೀವನಕ್ಕೆ ಕಾಲಿಟ್ಟರು. ತಿರುವನಂತಪುರಂನ ಮೆಟ್ರೋಪಾಲಿಟಿನ್ ಇಂಡಿಯನ್ ಅರ್ಥೋಡೆಕ್ಸ್ ಚರ್ಚ್‌ನ ಬಿಷಪ್‌ರವರಾದ ರೆ.ಫಾ. ಡಾ. ಗೇಬ್ರಿಯಲ್ ಮಾರ್ ಗ್ರೆಗೋರಿಯಸ್, ಪಡುಗೂರು ಶ್ರೀಗಳು ಮತ್ತು ಚಿಕಲಪರ್ವಿ ಶ್ರೀಗಳು, ಮೈಸೂರು ಬಿಷಪ್‌ರವರಾದ ರೆ.ಫಾ. ಫ್ರಾನ್ಸಿಸ್ ಸೆರಾವ್ ಎಸ್.ಜೆ., ಶಾಸಕರಾದ ಶ್ರೀ ಹಂಪನಗೌಡ ಬಾದರ್ಲಿ, ಮಾಜಿ ಸಚಿವರಾದ ಶ್ರೀ ಅಲ್ಲಂ ವೀರಭದ್ರಪ್ಪ, ಅಮೇರಿಕದ ಬಾಸ್ಟನ್ ಕನ್ಸಲ್ಟಿಂಗ್‌ನ ಹಿರಿಯ ನಿರ್ದೇಶಕರಾದ ಶ್ರೀ ರಾಜಣ್ಣ ಹೆಗ್ಗಡಳ್ಳಿ, ಸರಗೂರು ಶ್ರೀ ವೆಂಕಟೇಶ್‌ರವರುಗಳು ಮಾತನಾಡಿದರು. ಕನಕಪುರದ ಹಿರಿಯ ಶ್ರೀಗಳು, ಹೈದರಾಬಾದ್ ರಾಮೋಜಿ ಫಿಲಂ ಸಿಟಿಯ ಶ್ರೀ ವೆಂಕಟನಾಗೇಶ್ವರರಾವ್, ಶ್ರೀ ಮಲ್ಲಿಕಾರ್ಜುನ್, ಕೆಪಿಸಿಸಿ ಕಾರ್ಯದರ್ಶಿಗಳಾದ ಶ್ರೀ ಆನಂದಕುಮಾರ್, ಸಂಯೋಜಕರಾದ ಶ್ರೀ ಸಿ.ಎಸ್. ರಘು, ವಿದ್ಯಾವಿಕಾಸ ಶಿಕ್ಷಣ ಸಂಸ್ಥೆಯ ಶ್ರೀ ಕವೀಶ್ ಗೌಡ, ಶ್ರೀ ರೀತೀಶ್‌ಗೌಡ ಉಪಸ್ಥಿತರಿದ್ದರು. ಶ್ರೀ ಅಸಗೋಡು ಜಯಸಿಂಹ ಪ್ರತಿಜ್ಞಾವಿಧಿ ಬೋಧಿಸಿದರು. ಶ್ರೀ ಉಡಿಗಾಲ ಕುಮಾರಸ್ವಾಮಿ ಸ್ವಾಗತಿಸಿದರು. ಶ್ರೀ ದುಗ್ಗಹಟ್ಟಿ ಮಲ್ಲಿಕಾರ್ಜುನಸ್ವಾಮಿ ವಂದಿಸಿದರು. ಶ್ರೀಮತಿ ದಿವ್ಯ ಆಲೂರು ಕಾರ್ಯಕ್ರಮ ನಿರೂಪಿಸಿದರು.

## ದೇಶದ ಸಂಸ್ಕೃತಿಯ ಸಂರಕ್ಷಣೆ ಅಗತ್ಯ



ಜಾತ್ರಾ ಮಹೋತ್ಸವದಲ್ಲಿ ರಾಗಿ ಬೀಸುವ ಸ್ಪರ್ಧೆಯನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಶ್ರೀ ಬಸವರಾಜ ಎಸ್. ಬೊಮ್ಮಾಯಿಯವರು ಹಾಗೂ ಕು. ಶೋಭಾ ಕರಂದ್ಲಾಜೆಯವರು ಉದ್ಘಾಟಿಸಿದರು. ಶ್ರೀ ಪಿ. ಮರಿಸ್ವಾಮಿ, ಶ್ರೀ ಸೋದೆ ಮಠದ ಶ್ರೀಪಾದಂಗಳು, ಶ್ರೀ ತೇಜಸ್ವಿ ಸೂರ್ಯ ಮೊದಲಾದವರಿದ್ದಾರೆ. (16 ಜನವರಿ 2026)

ಆಧ್ಯಾತ್ಮಿಕತೆ ಭಾರತ ದೇಶದ ಆತ್ಮ, ನಮ್ಮ ದೇಶದ ಸಂಸ್ಕೃತಿ ಮತ್ತು ಧರ್ಮ ಆಚಾರ ಹಾಗೂ ವಿಚಾರವನ್ನು ಸಂರಕ್ಷಿಸುವ ಅಗತ್ಯವಿದೆ ಎಂದು ಕೇಂದ್ರದ ರಾಜ್ಯ ಸಚಿವರಾದ ಕು. ಶೋಭಾ ಕರಂದ್ಲಾಜೆಯವರು ಹೇಳಿದರು.

ಸುತ್ತೂರು ಜಾತ್ರಾ ಮಹೋತ್ಸವದಲ್ಲಿ ದಿನಾಂಕ 16.1.2026 ರಂದು ರಾಜ್ಯಮಟ್ಟದ ಭಜನಾ ಮೇಳ, ದೇಸಿ ಆಟಗಳು, ಸೋಬಾನೆ ಪದ, ರಂಗೋಲಿ ಹಾಗೂ ರಾಗಿ ಬೀಸುವ ಸ್ಪರ್ಧೆಯ ಉದ್ಘಾಟನೆಯಲ್ಲಿ ಮಾತನಾಡುತ್ತಾ ಅವರು ತಿಳಿಸಿದರು. ಭಾರತದ ಅಸ್ತಿತ್ವವಿರುವುದು ಆಧ್ಯಾತ್ಮಿಕತೆಯಲ್ಲಿ, ಆಧ್ಯಾತ್ಮಿಕತೆ ಇಲ್ಲದೆ ಭಾರತವಿಲ್ಲ. ನಮ್ಮ ಸಂಸ್ಕೃತಿ, ಧರ್ಮ, ಆಚಾರ, ವಿಚಾರ, ನಮ್ಮ ದೇವಾಲಯಗಳಲ್ಲಿದೆ. ದೇಶದಲ್ಲಿ ಶಾಂತಿ ನೆಲೆಸಲು ಆಧ್ಯಾತ್ಮಿಕತೆಯಿಂದ ಮಾತ್ರ ಸಾಧ್ಯ. ದೇಶದಲ್ಲಿ ಸಂಸ್ಕೃತಿ ಸಂಸ್ಕಾರವನ್ನು ಬೆಳೆಸುವ ದೊಡ್ಡ ಕೆಲಸವನ್ನು ಮಠಮಾನ್ಯಗಳು ನಿರ್ವಹಿಸುತ್ತಿವೆ. ಪುಸ್ತಕದ ಶಿಕ್ಷಣದ ಜೊತೆಗೆ ಜನರಿಗೆ ಮೌಲ್ಯದ ಶಿಕ್ಷಣವನ್ನು ನೀಡುತ್ತಿವೆ. ಸುತ್ತೂರು ಜಾತ್ರೆಗೆ ಬರುವುದೇ ಖುಷಿಯ ಸಂಗತಿ ಮತ್ತು ಹೆಮ್ಮೆಯಾಗಿದೆ. ಸುತ್ತೂರು ಜಾತ್ರೆ ವಸ್ತುಗಳ ಖರೀದಿಯ ಜೊತೆಗೆ ಬುದ್ಧಿಯನ್ನು ಕೊಂಡೊಯ್ಯುವ ಯಾತ್ರೆಯಾಗಿದೆ. ಶ್ರೀಮಠವು ಧಾರ್ಮಿಕ ಕೈಂಕರ್ಯದ ಜೊತೆಗೆ ಈ ಭಾಗದ ಗ್ರಾಮೀಣ ಜನರಿಗೆ ಅವಶ್ಯವಿರುವ ಜ್ಞಾನವನ್ನು ಹಂಚುವ ಕೆಲಸವನ್ನು ಮಾಡುತ್ತಿದೆ ಎಂದು ಹೇಳಿದರು.

ಸಂಸದರು ಹಾಗೂ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಬಸವರಾಜ ಎಸ್. ಬೊಮ್ಮಾಯಿಯವರು ಸುತ್ತೂರು ಶ್ರೀಮಠವು ಶಿಕ್ಷಣ ದಾಸೋಹ ಹಾಗೂ ಆಧ್ಯಾತ್ಮಿಕತೆಯನ್ನು ಮೀರಿ ದೇಶಕ್ಕೆ ಅನ್ನ ಕೊಡುವ ರೈತರಿಗೆ ನೀರು ಒದಗಿಸುವ ಕೆಲಸವನ್ನು ಮಾಡಿದೆ. ಶ್ರೀಗಳ ದೂರದೃಷ್ಟಿಯ ಫಲವಾಗಿ ನಾನು ನೀರಾವರಿ ಸಚಿವನಾಗಿದ್ದ ವೇಳೆ ಸುತ್ತೂರು ಶ್ರೀಗಳ ಸಲಹೆಯಂತೆ ಚಾಮರಾಜನಗರ ಭಾಗದ ಕೆರೆಗಳನ್ನು ತುಂಬಿಸುವ ಕೆಲಸವನ್ನು ಮಾಡಿದ್ದೇನೆ. ಅಭಿವೃದ್ಧಿ ಮತ್ತು ಪರಂಪರೆ ಒಂದೇ ಸ್ಥಳದಲ್ಲಿರುವುದು ಸುತ್ತೂರು ಮಠದಲ್ಲಿ ಮಾತ್ರ. ನಮ್ಮ ಸಂಸ್ಕೃತಿ ಮತ್ತು ಪರಂಪರೆಯನ್ನು ವರ್ಷದಿಂದ ವರ್ಷಕ್ಕೆ ಶ್ರೀಮಂತಗೊಳಿಸುವ ಕೆಲಸವನ್ನು ಪೂಜ್ಯರು ಮಾಡುತ್ತಿದ್ದಾರೆ ಎಂದರು.

ಸಂಸದರಾದ ಶ್ರೀ ತೇಜಸ್ವಿ ಸೂರ್ಯರವರು ಒಂದು ಮಠ ವಿವಿಧ ಆಯಾಮಗಳಲ್ಲಿ ಹೇಗೆ ಸೇವೆ ಸಲ್ಲಿಸಬಹುದು ಎಂಬುದಕ್ಕೆ ಸುತ್ತೂರು ಶ್ರೀಮಠ ನಿದರ್ಶನವಾಗಿದೆ. ಸುತ್ತಮುತ್ತಲ ರೈತರಿಗೆ ಅನುಕೂಲವಾಗುವಂತೆ ಕೆರೆಕಟ್ಟೆಗಳನ್ನು ತುಂಬಿಸಿದ ಕೀರ್ತಿ ಪೂಜ್ಯರಿಗೆ ಸಲ್ಲುತ್ತದೆ. ಮಠಮಾನ್ಯಗಳು ಸಾತ್ವಿಕತೆಯ ಜೊತೆಗೆ ಯಾವ ರೀತಿ ಸಂಘಟನೆ ಮಾಡಬಹುದು ಎಂಬುದಕ್ಕೆ ಶ್ರೀಮಠ ಸಾಕ್ಷಿಯಾಗಿದೆ. ಭಾರತದ ಸಂಸ್ಕೃತಿಯನ್ನು ವಿದೇಶಗಳಲ್ಲಿ ಪಸರಿಸುತ್ತಿದೆ. ನಶಿಸಿ ಹೋಗುವ ಸ್ಥಿತಿಯಲ್ಲಿರುವ ಗ್ರಾಮೀಣ ದೇಸಿ ಆಟಗಳನ್ನು ಉಳಿಸಿ ಬೆಳೆಸುವ ಸಲುವಾಗಿ ದೇಸೀಯ ಆಟಗಳಿಗೆ ಉತ್ತೇಜನ ನೀಡುತ್ತಿರುವುದು ಶ್ಲಾಘನೀಯ ಕಾರ್ಯ ಎಂದರು.

ಶ್ರೀ ಸಿದ್ಧಗಂಗಾ ಮಠದ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು, ಉಡುಪಿ ಶ್ರೀ ಸೋದೆ ಮಠದ ಶ್ರೀ ವಿಶ್ವವಲ್ಲಭತೀರ್ಥ ಶ್ರೀಪಾದಂಗಳು, ಊಟಿ ಶಾಸಕರಾದ ಶ್ರೀ ಆರ್. ಗಣೇಶ್, ಸಿಎಫ್‌ಟಿಆರ್‌ಐ ನಿರ್ದೇಶಕರಾದ ಡಾ. ಗಿರಿಧರ್ ಪರ್ವತಂ, ಎಂಸಿಸಿಐ ಅಧ್ಯಕ್ಷರಾದ ಶ್ರೀ ಕೆ.ಬಿ. ಲಿಂಗರಾಜು, ಮಂಡ್ಯ ಜಿಲ್ಲಾಧಿಕಾರಿಗಳಾದ ಡಾ. ಕುವಾರ್, ಉದ್ಯಮಿಗಳಾದ ಶ್ರೀ ಹೆಚ್.ಎಸ್. ರಾಘವೇಂದ್ರರಾವ್, ಕೆಪಿಎಸ್‌ಸಿ ಸದಸ್ಯರಾದ ಡಾ. ಪ್ರಭುದೇವ್‌ರವರು ಮಾತನಾಡಿದರು. ಶ್ರೀ ಜಿ.ಎಲ್. ತ್ರಿಪುರಾಂತಕ ಸ್ವಾಗತಿಸಿದರು. ಶ್ರೀ ನಗರ್ಲೆ ಶಿವಕುಮಾರ ವಂದಿಸಿದರು. ಶ್ರೀಮತಿ ಜ್ಯೋತಿ ಪರಮೇಶ್ ಕಾರ್ಯಕ್ರಮ ನಿರೂಪಿಸಿದರು.

## ಸುತ್ತೂರು ಶ್ರೀಮಠ ಸಾಮಾಜಿಕ ಸುಧಾರಣೆಗೆ ದಾರಿದೀಪ




ಜಾತ್ರಾ ಮಹೋತ್ಸವದಲ್ಲಿ ಧಾರ್ಮಿಕ ಸಭೆಯನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಶ್ರೀ ಕೆ.ಹೆಚ್. ಮುನಿಯಪ್ಪನವರು ಉದ್ಘಾಟಿಸಿದರು. ಶ್ರೀ ಸಾಲಿ ಸಿದ್ಧಯ್ಯಸ್ವಾಮಿ, ಶ್ರೀ ರಾಜಣ್ಣ ಕೊರವಿ, ಶ್ರೀ ಶಿವ ಆನಂದ್, ಶ್ರೀ ಕುಮಾರ್ ರಾಜಶೇಖರ್, ಸಿದ್ಧಗಂಗಾ ಮಠದ ಕಿರಿಯ ಶ್ರೀಗಳು, ಶ್ರೀ ಜಿ.ಟಿ. ದೇವೇಗೌಡ, ಶ್ರೀ ನಿತೇಶ್ ಪಾಟೀಲ್, ಡಾ. ಸಿ. ಸೋಮಶೇಖರ್, ಶ್ರೀ ರಾಚಪ್ಪ ಹೋಳುರು ಹಾಗೂ ಶ್ರೀ ಶಂಕರ ಪಿಳ್ಳೈರವರುಗಳಿದ್ದಾರೆ. (17 ಜನವರಿ 2026)

ಸುತ್ತೂರು ಶ್ರೀಮಠವು ಬುದ್ಧ, ಬಸವ, ಅಂಬೇಡ್ಕರ್ ಮತ್ತು ಗಾಂಧೀಜಿಯವರ ಚಿಂತನೆಗಳನ್ನು ನಿಜವಾಗಿಯೂ ಕಾರ್ಯರೂಪಕ್ಕೆ ತರುವ ಮೂಲಕ ಸಾಮಾಜಿಕ ಸುಧಾರಣೆಗೆ ದಾರಿದೀಪವಾಗಿ ಕೆಲಸ ಮಾಡುತ್ತಿದೆ ಎಂದು ಸಚಿವರಾದ ಶ್ರೀ ಕೆ.ಎಚ್. ಮುನಿಯಪ್ಪರವರು ಹೇಳಿದರು.

ಸುತ್ತೂರು ಜಾತ್ರಾ ಮಹೋತ್ಸವದಲ್ಲಿ ದಿನಾಂಕ 17.1.2026ರಂದು ನಡೆದ ಧಾರ್ಮಿಕ ಸಭೆಯಲ್ಲಿ ಅವರು ಮಾತನಾಡಿದರು. ಬಸವಣ್ಣನವರ ಅನುಭವ ಮಂಟಪದಂತೆ ಎಲ್ಲ ಜಾತಿ, ಧರ್ಮ ವರ್ಗದ ಜನರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಜಾತ್ರಾ ಮಹೋತ್ಸವದಲ್ಲಿ ಸಮಾನ ಅವಕಾಶ ಕಲ್ಪಿಸಿ ಒಟ್ಟಾಗಿ ಕರೆದುಕೊಂಡು ಹೋಗುವ ಮೂಲಕ ಭಾವೈಕ್ಯತೆಯನ್ನು ಸಾರುತ್ತಿದೆ. ಶ್ರೀಮಠದ ವಿದ್ಯಾಸಂಸ್ಥೆಗಳಲ್ಲಿ ಎಲ್ಲಾ ಜಾತಿ ಜನಾಂಗ, ಧರ್ಮದ ಬಡ ವಿದ್ಯಾರ್ಥಿಗಳಿಗೆ ಬಸವಣ್ಣನವರ ಮಾದರಿಯಲ್ಲಿ ಸಂಸ್ಕಾರ, ಮಾನವೀಯ ಮೌಲ್ಯ, ಸಾಮಾಜಿಕವಾಗಿ ಬದುಕು ಹೇಗೆ ಕಟ್ಟಿಕೊಳ್ಳಬೇಕು ಎಂಬ ಬಗ್ಗೆ ತಿಳಿಸಿಕೊಡಲಾಗುತ್ತಿದೆ. ಎಲ್ಲರಿಗೂ ಸಮಾನ ಅವಕಾಶ ಕಲ್ಪಿಸಿ ಸಮಾಜದ ಸುಧಾರಣೆಗೆ ದಾರಿದೀಪವಾಗಿ ಕೆಲಸ ಮಾಡುತ್ತಿದೆ ಎಂದು ಹೇಳಿದರು.

ಶಾಸಕರಾದ ಶ್ರೀ ಜಿ.ಟಿ. ದೇವೇಗೌಡರು ಬಸವಣ್ಣನವರು 12ನೇ ಶತಮಾನದಲ್ಲಿ ಅನುಭವ ಮಂಟಪದ ಮೂಲಕ ಸಮಾಜದಲ್ಲಿ ಸಮಾನತೆಯನ್ನು ತಂದುಕೊಟ್ಟ ಮಾದರಿಯಲ್ಲಿ ಎಲ್ಲಾ ಜಾತಿ, ಎಲ್ಲಾ ಧರ್ಮ, ಎಲ್ಲಾ ಪಂಥದವರನ್ನು ಒಟ್ಟಾಗಿ ಕರೆದುಕೊಂಡು ಸುತ್ತೂರು ಶ್ರೀಮಠವು ಸಾಗುತ್ತಿದೆ. ಜಾತ್ರಾ ಮಹೋತ್ಸವದ ಮೂಲಕ ದೇಶವನ್ನು ಅಭಿವೃದ್ಧಿ ಪಥದತ್ತ ನಡೆಸಿ ನಾಡನ್ನು

ಕಟ್ಟುವಂತಹ ಜ್ಞಾನವನ್ನು ಜನರಲ್ಲಿ ಹಂಚುವ ಕೆಲಸವನ್ನು ಮಾಡುತ್ತಿದೆ ಎಂದರು.

ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಡಾ. ಸಿ. ಸೋಮಶೇಖರ್‌ರವರು ಜಾತ್ರೆಗಳು ಬದುಕಿನ ಯಾತ್ರೆಯಿದ್ದಂತೆ. ಜಾತ್ರೆಯ ಮೂಲಕ ಜಾತ್ಯತೀತ, ಪಕ್ಷಾತೀತವಾಗಿ ಧಾರ್ಮಿಕ, ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುತ್ತವೆ. ಹೃದಯಗಳ ಮಿಲನದ ಸಂಸ್ಕೃತಿಯ ಹಬ್ಬವೇ ಜಾತ್ರೆ. ಎಲ್ಲರ ಹೃದಯವನ್ನು ಬೆಸುಗೆ ಹಾಕುವುದೇ ನಿಜವಾದ ಧರ್ಮದ ಆಶಯ. ಸುತ್ತೂರು ಶ್ರೀಮಠವು ಜಾತ್ರೆಯ ಆಚರಣೆಯ ಮೂಲಕ ಧರ್ಮದ ನೆಲೆಯಲ್ಲಿ ಸಾಂಸ್ಕೃತಿಕ ಸಂಸ್ಕೃತಿಯ ಸ್ಪರ್ಶವನ್ನು ನೀಡಿ ಭಾವೈಕ್ಯತೆಯ ಸಂಗಮವಾಗಿ ಕೆಲಸ ಮಾಡುತ್ತಿದೆ ಎಂದರು.

ಶ್ರೀ ಸಿದ್ದಗಂಗಾ ಮಠದ ಶ್ರೀ ಶಿವಸಿದ್ದೇಶ್ವರ ಮಹಾಸ್ವಾಮಿಗಳು, ಶಾಸಕರು ಹಾಗೂ ಮಾಜಿ ಸಚಿವರಾದ ಶ್ರೀ ಪಿ.ಎಂ. ನರೇಂದ್ರಸ್ವಾಮಿ, ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯ ಸದಸ್ಯರಾದ ಶ್ರೀ ರಾಜಣ್ಣ ಕೊರವಿ, ನಾಸಾ ವಿಜ್ಞಾನಿಗಳಾದ ಶ್ರೀ ಶಿವ್ ಆನಂದ್, ಅಮೆರಿಕದ ಮೆ. ಮಾರ್ಸ್ಲಿ ಅಧ್ಯಕ್ಷರಾದ ಶ್ರೀ ಕುಮಾರ್ ರಾಜಶೇಖರ್, ಮೈಸೂರು ಪ್ರಾದೇಶಿಕ ಆಯುಕ್ತರಾದ ಶ್ರೀ ನಿತೇಶ್ ಪಾಟೀಲ್, ಕೇರಳದ ಶ್ರೀ ಶಂಕರ ಪಿಳ್ಳೈ, ಶ್ರೀ ಸಾಲಿ ಸಿದ್ದಯ್ಯ ಸ್ವಾಮಿಯವರುಗಳು ಮಾತನಾಡಿದರು. ಶ್ರೀ ರಾಚಪ್ಪ ಹೋಳುರು ಉಪಸ್ಥಿತರಿದ್ದರು. ಪ್ರೊ. ಮೊರಬದ ಮಲ್ಲಿಕಾರ್ಜುನ ಸ್ವಾಗತಿಸಿದರು. ಶ್ರೀ ಕೆ.ಪಿ. ಬಸವರಾಜು ವಂದಿಸಿದರು. ಡಾ. ಜೆ. ಲೋಹಿತ್ ಕಾರ್ಯಕ್ರಮ ನಿರೂಪಿಸಿದರು.

## ಜನ-ಜಾನುವಾರುಗಳನ್ನು ಉಳಿಸುವ ಶ್ರೀಮಠದ ಪ್ರಯತ್ನ ಶ್ಲಾಘನೀಯ




ಜಾತ್ರಾ ಮಹೋತ್ಸವದಲ್ಲಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಐವತ್ತೈದನೆಯ ದನಗಳ ಜಾತ್ರೆ, ಚಿತ್ರಕಲೆ ಮತ್ತು ಗಾಳಿಪಟ ಸ್ಪರ್ಧೆಗಳ ಉದ್ಘಾಟನೆಯಲ್ಲಿ ಚಿತ್ರದುರ್ಗದ ಶ್ರೀ ಮಾದಾರ ಚನ್ನಯ್ಯ ಗುರುಪೀಠದ ಜಗದ್ಗುರು ಶ್ರೀ ಬಸವಮೂರ್ತಿ ಮಾದಾರ ಚನ್ನಯ್ಯ ಸ್ವಾಮಿಗಳು ಮಾತನಾಡುತ್ತಿರುವುದು. (17 ಜನವರಿ 2026)

ಜನ–ಜಾನುವಾರುಗಳನ್ನು ಉಳಿಸುವ ಸುತ್ತೂರು ಶ್ರೀಮಠದ ಪ್ರಯತ್ನ ಶ್ಲಾಘನೀಯ ಎಂದು ಚಿತ್ರದುರ್ಗದ ಶ್ರೀ ಮಾದಾರ ಚನ್ನಯ್ಯ ಗುರುಪೀಠದ ಜಗದ್ಗುರು ಶ್ರೀ ಬಸವಮೂರ್ತಿ ಮಾದಾರ ಚನ್ನಯ್ಯ ಸ್ವಾಮಿಗಳು ಹೇಳಿದರು.

ಸುತ್ತೂರು ಜಾತ್ರಾ ಮಹೋತ್ಸವದಲ್ಲಿ ದಿನಾಂಕ 17.1.2026ರಂದು ಐವತ್ತೈದನೆಯ ದನಗಳ ಜಾತ್ರೆ, ಚಿತ್ರಕಲೆ ಮತ್ತು ಗಾಳಿಪಟ ಸ್ಪರ್ಧೆಗಳ ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾತನಾಡುತ್ತಾ ಅವರು ತಿಳಿಸಿದರು. ಆಧುನಿಕ ಯುಗಕ್ಕೆ ಎಲ್ಲರೂ ಬಾಗಿಲು ತೆರೆದು ನುಗ್ಗುತ್ತಿರುವ ಈ ಕಾಲಘಟ್ಟದಲ್ಲಿ ಸುತ್ತೂರು ಶ್ರೀಗಳು ಹಳೆಯ ಪರಂಪರೆಯ ಆಹಾರ ಶೈಲಿ, ಆಟೋಟ, ಜೀವನವನ್ನು ಉಳಿಸಲು ಪ್ರಯತ್ನ ನಡೆಸಿದ್ದಾರೆ. ಐಟಿ–ಬಿಟಿಗೆ ಮಾರುಹೋದ ಯುವ ಪಡೆ ಮತ್ತೆ ಗ್ರಾಮೀಣ ಬದುಕು ಹಾಗೂ ಕೃಷಿಯತ್ತ ಮುಖ ಮಾಡುವ ಕಾಲ ಸದ್ಯದಲ್ಲೇ ಬರಲಿದೆ. ಮನೆ ಹಾಗೂ ಜೇಬಿನಲ್ಲಿ ಮಾತ್ರೆಗಳನ್ನಿಟ್ಟುಕೊಳ್ಳದೆ ಮಾತನಾಡುವ ಕಾಲ ಬಂದಾಗಲೇ ಆರೋಗ್ಯಕರ ಸಮಾಜ ನಿರ್ಮಾಣ ಸಾಧ್ಯ ಎಂದರು.

ಚಲನಚಿತ್ರ ಕಲಾವಿದರಾದ ಶ್ರೀ ಡಾಲಿ ಧನಂಜಯರವರು ಸುತ್ತೂರು ಶ್ರೀಮಠದ ಶಿಕ್ಷಣ ಮತ್ತು ಆರೋಗ್ಯದ ಸೇವೆಗೆ ಎಂದಿಗೂ ಆಭಾರಿಯಾಗಿದ್ದೇನೆ, ಸಂಸ್ಥೆಯ ಮೂಲಕ ಶಿಕ್ಷಣ ಕಲಿತು ಈ ಹಂತಕ್ಕೆ ತಲುಪಿರುವುದಕ್ಕೆ ಶ್ರೀಮಠಕ್ಕೆ ಕೃತಜ್ಞನಾಗಿರುತ್ತೇನೆ. ಎಲ್ಲರೂ ಕನ್ನಡ ಕಲಾವಿದರನ್ನು ಆಶೀರ್ವದಿಸಬೇಕು. ಬಡವರ ಮನೆ ಮಕ್ಕಳು ಬೆಳೆಯಬೇಕು ಎಂಬುದು ದೊಡ್ಡ ಆಶಯ. ಅದು ಹೇಳುವುದರಿಂದ ಆಗುವುದಿಲ್ಲ, ನಿರಂತರವಾಗಿ ಶ್ರದ್ಧೆಯಿಂದ ತ್ಯಾಗ, ಸಹನೆಯಿಂದ ಕೆಲಸ ಮಾಡುವುದರಿಂದ ಸಾಧ್ಯವಾಗುತ್ತದೆ. ನನಗೆ ದಾಸೋಹ ಅತ್ಯಂತ ಪ್ರಿಯವಾದದ್ದು. ಹಾಗಾಗಿಯೇ ನಾನು ನಮ್ಮ ವಿವಾಹ ಸಂದರ್ಭದಲ್ಲಿ ಊಟಕ್ಕೆ ಹೆಚ್ಚಿನ ಆದ್ಯತೆ ನೀಡಿದ್ದಾಗಿ ಅವರು ತಿಳಿಸಿದರು.

ಚಲನಚಿತ್ರ ಕಲಾವಿದರಾದ ಶ್ರೀ ನೀನಾಸಂ ಸತೀಶ್‌ರವರು ಬಸವಣ್ಣನವರು ಮನುಷ್ಯ ಕುಲ ಒಂದೇ ಎಂದಿದ್ದರು. ದೇವರು ನಮ್ಮಲ್ಲೇ ಇದ್ದಾನೆ. ನಾವು ಒಳ್ಳೆಯ ಕೆಲಸಗಳನ್ನು ಮಾಡುವ ಮೂಲಕ, ಗುರು ಹಿರಿಯರು ಮತ್ತು ಮಕ್ಕಳಲ್ಲಿ ದೇವರನ್ನು ಕಾಣಬೇಕು ಎಂದು ಹೇಳಿದರು.

ಶಾಸಕರು ಹಾಗೂ ಮಾಜಿ ಸಚಿವರಾದ ಶ್ರೀ ಪಿ.ಎಂ. ನರೇಂದ್ರಸ್ವಾಮಿಯವರು ಜೆಎಸ್‌ಎಸ್ ಸಂಚಾರಿ ಗ್ರಂಥಮಾಲೆಯನ್ನು ಉದ್ಘಾಟಿಸಿದರು.

ರಬಕವಿ ಶ್ರೀ ಗುರುದೇವ ಬ್ರಹ್ಮಾನಂದ ಆಶ್ರಮದ ಶ್ರೀ ಗುರುಸಿದ್ಧೇಶ್ವರ ಸ್ವಾಮಿಗಳು, ದೇವನೂರು ಶ್ರೀ ಗುರುಮಲ್ಲೇಶ್ವರ ದಾಸೋಹ ಮಹಾಸಂಸ್ಥಾನ ಮಠದ ಶ್ರೀ ಮಹಾಂತ ಸ್ವಾಮಿಗಳು, ವಿಧಾನಸಭೆಯ ಉಪಾಧ್ಯಕ್ಷರಾದ ಶ್ರೀ ರುದ್ರಪ್ಪ ಮಾನಪ್ಪ ಲಮಾಣಿ, ಶಾಸಕರಾದ ಶ್ರೀ ಸಿ.ಕೆ. ರಾಮಮೂರ್ತಿ, ಕರ್ನಾಟಕ ಲೋಕಸೇವಾ ಆಯೋಗದ ಅಧ್ಯಕ್ಷರಾದ ಶ್ರೀ ಶಿವಶಂಕರಪ್ಪ, ಸಾಹುಕಾರ್, ಸದಸ್ಯರಾದ ಡಾ. ಹೆಚ್.ಎಸ್. ನರೇಂದ್ರ, ಶ್ರೀಮತಿ ಬಿ.ವಿ. ಗೀತಾ, ರಂಗಕರ್ಮಿಗಳಾದ ಶ್ರೀ ಹೆಗ್ಗೋಡು ಪ್ರಸನ್ನ, ಕಲಾವಿದರಾದ ಶ್ರೀ ಎನ್.ಎಸ್. ನಾಗಭೂಷಣ, ಶ್ರೀ ವಾಸುಕಿ ವೈಭವ್‌ರವರುಗಳು ಮಾತನಾಡಿದರು. ಕನಕಪುರದ ಹಿರಿಯ ಶ್ರೀಗಳು, ಶ್ರೀ ಜಿ.ಎಸ್. ಜಯದೇವ್, ಶ್ರೀ ಗುಂಡಪ್ಪಗೌಡ, ಶ್ರೀ ವಿಶ್ವನಾಥ್, ಶ್ರೀ ಸೋಮಶೇಖರ್, ಉಪಸ್ಥಿತರಿದ್ದರು. ಶ್ರೀ ಎಸ್. ನಂದೀಶ್ ಸ್ವಾಗತಿಸಿದರು. ಶ್ರೀ ಆರ್.ಎಸ್. ಕುಮಾರ್ ವಂದಿಸಿದರು. ಶ್ರೀ ಬಿ.ಆರ್. ಪಂಚಾಕ್ಷರಿ ಕಾರ್ಯಕ್ರಮ ನಿರೂಪಿಸಿದರು.

## ಮನುಷ್ಯ ಧರ್ಮ ಮೇಲು




ಜಾತ್ರಾ ಮಹೋತ್ಸವದ ಅಂಗವಾಗಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ನಡೆದ ಕೃಷಿ ವಿಚಾರಸಂಕಿರಣ ಉದ್ಘಾಟನೆಯಲ್ಲಿ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರು ಮಾತನಾಡುತ್ತಿರುವುದು. ಡಾ. ಯತೀಂದ್ರ ಸಿದ್ದರಾಮಯ್ಯ, ಡಾ. ಮಂಥರ್‌ಗೌಡ, ಶ್ರೀಮತಿ ಲಕ್ಷ್ಮೀ ಆರ್. ಹೆಬ್ಬಾಳ್ಕರ್, ಡಾ. ಹೆಚ್.ಸಿ. ಮಹದೇವಪ್ಪ, ವಾಟಾಳು ಮತ್ತು ಕನಕಪುರ ಕಿರಿಯ ಶ್ರೀಗಳು, ಡಾ. ಶರಣ್‌ಪ್ರಕಾಶ್ ಆರ್. ಪಾಟೀಲ್, ಡಾ. ಎಂ.ಸಿ. ಸುಧಾಕರ್, ಶ್ರೀ ಎ.ಆರ್. ಕೃಷ್ಣಮೂರ್ತಿ ಮೊದಲಾದವರಿದ್ದಾರೆ. (18 ಜನವರಿ 2026)

ಎಲ್ಲ ಧರ್ಮಗಳಿಗಿಂತ ಮಾನವ ಧರ್ಮ ಮೇಲು. ನಾವೆಲ್ಲರೂ ಮನುಷ್ಯರು ಎಂದು ಅರ್ಥ ಮಾಡಿಕೊಂಡು ಬದುಕಬೇಕು ಎಂದು ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರು ಹೇಳಿದರು.

ಸುತ್ತೂರು ಜಾತ್ರಾ ಮಹೋತ್ಸವದಲ್ಲಿ ದಿನಾಂಕ 18.1.2026ರಂದು ಕೃಷಿ ವಿಚಾರಸಂಕಿರಣ ಉದ್ಘಾಟಿಸಿ ಅವರು ಮಾತನಾಡಿದರು. ಶಿಕ್ಷಣದಿಂದ ವ್ಯಕ್ತಿತ್ವವನ್ನು ಹಾಗೂ ಮನುಷ್ಯತ್ವವನ್ನು ರೂಪಿಸಿಕೊಳ್ಳಲು ಸಾಧ್ಯ. ದಯೆಯೇ ಧರ್ಮದ ಮೂಲವಯ್ಯ, ದಯೆಯಿಲ್ಲದ ಧರ್ಮ ಯಾವುದಯ್ಯ ಎಂದು ಬಸವಣ್ಣನವರು ಧರ್ಮದ ಕುರಿತು ವ್ಯಾಖ್ಯಾನಿಸಿದ್ದಾರೆ. ಎಲ್ಲಾ ಧರ್ಮಕ್ಕಿಂತ ಮಾನವ ಧರ್ಮ ಮೇಲು ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು. ಎಲ್ಲ ಧರ್ಮಗಳೂ ಮನುಷ್ಯರು ಪರಸ್ಪರ ಪ್ರೀತಿಸಬೇಕು ಎಂದು ಹೇಳುತ್ತವೆಯೇ ಹೊರತು ದ್ವೇಷ ಮಾಡಿ ಎಂದು ಹೇಳುವುದಿಲ್ಲ. ಹಿಂದೂ, ಇಸ್ಲಾಂ, ಕ್ರೈಸ್ತ, ಬೌದ್ಧ, ಜೈನ ಸೇರಿದಂತೆ ಯಾವುದೇ ಧರ್ಮವಾದರೂ ನಾವು ಪರಸ್ಪರ ಪ್ರೀತಿಯಿಂದ ಇರುವುದೇ ಮುಖ್ಯ. ನಾವು ಪರಸ್ಪರ ಪ್ರೀತಿಸಬೇಕೇ ಹೊರತು ದ್ವೇಷಿಸಬಾರದು. ಸುತ್ತೂರಿನಲ್ಲಿ ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳ ಜಾತ್ರಾ ಮಹೋತ್ಸವ ನಡೆಯುತ್ತಿದೆ. ಈ ಜಾತ್ರೆ ಬಹಳ ವರ್ಷಗಳಿಂದ ನಡೆಯುತ್ತಿದೆ. ನಾನು ಅನೇಕ ವರ್ಷಗಳಿಂದ ಜಾತ್ರೆಯಲ್ಲಿ ಭಾಗಿಯಾಗಿದ್ದೇನೆ. ಶ್ರೀಮಠದಲ್ಲಿ ಹಿಂದಿನಿಂದಲೂ ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡಲಾಗುತ್ತಿದೆ. ಧಾರ್ಮಿಕವಾಗಿ ತೊಡಗಿಸಿಕೊಳ್ಳುವುದರ ಜೊತೆಗೆ ಜ್ಞಾನ, ಅನ್ನದಾಸೋಹಕ್ಕೆ ಶ್ರೀಮಠ ಹೆಚ್ಚು ಮಹತ್ವ ನೀಡುತ್ತಿದೆ ಎಂದು ಹೇಳಿದರು.

ಸಚಿವರಾದ ಡಾ. ಶರಣಪ್ರಕಾಶ ಆರ್. ಪಾಟೀಲ್‌ರವರು ರೈತರ ಬದುಕಿನಲ್ಲಿ ಸುಧಾರಣೆಯಾದರೆ

ಮಾತ್ರ ದೇಶ ಅಭಿವೃದ್ಧಿಯಾಗುತ್ತದೆ. ಈ ನಿಟ್ಟಿನಲ್ಲಿ ಸುತ್ತೂರು ಶ್ರೀಮಠದ ಕಾರ್ಯ ಶ್ಲಾಘನೀಯ. ಸುತ್ತೂರು ಜಾತ್ರೆ ಜನಪ್ರಿಯವಾಗಿದ್ದು, ಎಲ್ಲೆಡೆ ಪ್ರಸಿದ್ಧವಾಗಿದೆ. ಬಸವಾದಿ ಶರಣರ ತತ್ತ್ವದ ಜೊತೆಗೆ ಭಕ್ತಿಭಾವವನ್ನು ಜನರಲ್ಲಿ ಮೂಡಿಸುತ್ತಿದೆ. ಕಾಯಕ, ದಾಸೋಹ ಪರಂಪರೆಯನ್ನು ಉಳಿಸಿದೆ. ಅನ್ನದಾಸೋಹದ ಜೊತೆಗೆ ಅಕ್ಷರ ದಾಸೋಹವೂ ಮುಖ್ಯ ಎಂದು ಅನೇಕ ವಿದ್ಯಾಸಂಸ್ಥೆಗಳನ್ನು ಸ್ಥಾಪಿಸಿ ವಿದ್ಯಾದಾನ ಮಾಡುತ್ತಿದೆ ಎಂದರು.

ಸಚಿವರಾದ ಶ್ರೀಮತಿ ಲಕ್ಷ್ಮೀ ಆರ್. ಹೆಬ್ಬಾಳ್ಕರ್‌ರವರು ಶ್ರೀಮಠದಿಂದ ನಡೆಯುತ್ತಿರುವ ಜಾತ್ರಾ ಮಹೋತ್ಸವದಲ್ಲಿ ನಾನಾ ಧಾರ್ಮಿಕ ಕಾರ್ಯಕ್ರಮಗಳ ಜೊತೆಗೆ ಕೃಷಿಕರಿಗೆ ಅಗತ್ಯ ಅರಿವು ಮೂಡಿಸಲಾಗುತ್ತಿದೆ ಎಂದರು.

ವಾಟಾಳು ಹಾಗೂ ಕನಕಪುರ ಶ್ರೀ ದೇಗುಲಮಠದ ಕಿರಿಯ ಶ್ರೀಗಳು, ಸಚಿವರಾದ ಡಾ. ಎಂ.ಸಿ. ಸುಧಾಕರ್, ಶ್ರೀ ಹೆಚ್.ಎಂ. ಗಣೇಶ್‌ಪ್ರಸಾದ್, ಅಮೆರಿಕದ ಪ್ರಿಸಿಷನ್ ಆರೋಗ್ಯ ಸಂಸ್ಥೆಯ ಸಲಹೆಗಾರರಾದ ಶ್ರೀಮತಿ ಮಮತಾ ಶೇಖರ್, ಚಾಮುಲ್ ಅಧ್ಯಕ್ಷರಾದ ಶ್ರೀ ಎಂ. ನಂಜುಂಡಸ್ವಾಮಿ, ಕೇರಳದ ಅಪರ ಮುಖ್ಯ ಕಾರ್ಯದರ್ಶಿಗಳಾದ ಶ್ರೀ ಕೆ.ಆರ್. ಜ್ಯೋತಿಲಾಲ್, ದುಬೈನ ಡಾ. ಗಿರೀಶ್‌ಚಂದ್ರ ವರ್ಮರವರುಗಳು ಮಾತನಾಡಿದರು. ಸಚಿವರಾದ ಡಾ. ಹೆಚ್.ಸಿ. ಮಹದೇವಪ್ಪ, ಶಾಸಕರಾದ ಡಾ. ಮಂಥರ್‌ಗೌಡ, ಶ್ರೀ ಡಿ. ರವಿಶಂಕರ್, ಶ್ರೀ ಎ.ಆರ್. ಕೃಷ್ಣಮೂರ್ತಿ, ಡಾ. ಯತೀಂದ್ರ ಸಿದ್ದರಾಮಯ್ಯ, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷರಾದ ಶ್ರೀ ಎಚ್.ಎಂ. ರೇವಣ್ಣ, ಉಪಾಧ್ಯಕ್ಷರಾದ ಡಾ. ಪುಷ್ಪಾ ಅಮರನಾಥ್, ಮಾಜಿ ಶಾಸಕರಾದ ಶ್ರೀ ಎಂ.ಕೆ. ಸೋಮಶೇಖರ್ ಉಪಸ್ಥಿತರಿದ್ದರು. ಪ್ರಗತಿಪರ ರೈತರಾದ ಶ್ರೀಮತಿ ಆಶಾ ಕನ್ನಂಗಿ, ಮಂಡ್ಯ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಡಾ. ಕೆ.ಎಂ. ಹರಿಣಿಕುಮಾರ ಉಪನ್ಯಾಸ ನೀಡಿದರು. ಕಾರ್ಯಕ್ರಮದಲ್ಲಿ ಪ್ರಗತಿಪರ ರೈತರು ಹಾಗೂ ರೈತ ಮಹಿಳೆಯರನ್ನು ಸನ್ಮಾನಿಸಲಾಯಿತು. 'ಕ್ರಾಪ್ ಇಂಪ್ರುಮೆಂಟ್', 'ಕ್ರಾಪ್ ಪ್ರೊಡಕ್ಷನ್' ಹಾಗೂ 'ಕ್ರಾಪ್ ಪ್ರೊಟೆಕ್ಷನ್' ಕೃತಿಗಳನ್ನು ಬಿಡುಗಡೆಗೊಳಿಸಲಾಯಿತು. ಡಾ. ಜ್ಞಾನೇಶ್ ಸ್ವಾಗತಿಸಿದರು. ಡಾ. ಎಂ.ಪಿ. ಸೋಮಶೇಖರ್ ವಂದಿಸಿದರು. ಶ್ರೀಮತಿ ಸವಿತಾ ಶಿವಕುಮಾರ್ ಕಾರ್ಯಕ್ರಮ ನಿರೂಪಿಸಿದರು.

## ಸುತ್ತೂರು ಶ್ರೀಮಠ ಕೃಷಿಗೆ ಆದ್ಯತೆ ನೀಡುತ್ತಿರುವುದು ಶ್ಲಾಘನೀಯ

ಸುತ್ತೂರು ಶ್ರೀಮಠ ಕೃಷಿಗೆ ಆದ್ಯತೆ ನೀಡುತ್ತಿರುವುದು ಶ್ಲಾಘನೀಯ ಎಂದು ಸಚಿವರಾದ ಶ್ರೀ ಎನ್. ಚಲುವರಾಯಸ್ವಾಮಿಯವರು ಹೇಳಿದರು.

ಸುತ್ತೂರು ಜಾತ್ರಾ ಮಹೋತ್ಸವದಲ್ಲಿ ದಿನಾಂಕ 18.1.2026ರಂದು ನಡೆದ ಕೃಷಿ ವಿಚಾರಸಂಕಿರಣ ಸಮಾರೋಪದಲ್ಲಿ ಅವರು ಮಾತನಾಡಿದರು. ಬೆಳೆಗಳನ್ನು ಮೌಲ್ಯವರ್ಧನೆ ಮಾಡಿ ರೈತರು ಸಹ ಉದ್ಯಮಿಗಳಾಗಬಹುದು ಎಂಬ ಬಗ್ಗೆ ತಿಳುವಳಿಕೆ ಮೂಡಿಸುತ್ತಿರುವುದು ಉತ್ತಮ ಕಾರ್ಯವಾಗಿದೆ. ಈ ಭಾಗದ ರೈತರಿಗೆ ಕೃಷಿ ಪದ್ಧತಿಗಳ ಕುರಿತು ಸಲಹೆಗಳನ್ನು ನೀಡಿ ಸಬಲೀಕರಣಗೊಳಿಸಲು ಶ್ರೀಮಠ ಶ್ರಮಿಸುತ್ತಿದೆ ಎಂದರು.

ಬಿಜೆಪಿ ರಾಜ್ಯಾಧ್ಯಕ್ಷರು ಹಾಗೂ ಶಾಸಕರಾದ ಶ್ರೀ ಬಿ.ವೈ. ವಿಜಯೇಂದ್ರರವರು, ಸುತ್ತೂರು ಜಾತ್ರೆ ಗ್ರಾಮೀಣ ಜನತೆಗೆ ಶಕ್ತಿ ತುಂಬುವ ಜಾತ್ರೆ. ಉದ್ಯಮಿಗಳು ನೆಮ್ಮದಿಯ ಜೀವನ ನಡೆಸುತ್ತಿರುವಂತೆ, ರೈತರೂ ನೆಮ್ಮದಿ ಜೀವನ ಸಾಗಿಸಿದಾಗ ಮಾತ್ರ ರಾಷ್ಟ್ರದ ಅಭಿವೃದ್ಧಿ ಸಾಧ್ಯ. ಈ ನಿಟ್ಟಿನಲ್ಲಿ ರೈತಾಪಿ ವರ್ಗಕ್ಕೆ ದಿಕ್ಕು ತೋರಿಸುವ ಕೆಲಸವನ್ನು




ಜಾತ್ರಾ ಮಹೋತ್ಸವದ ಅಂಗವಾಗಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ನಡೆದ ಕೃಷಿ ವಿಚಾರಸಂಕಿರಣ ಸಮಾರೋಪದಲ್ಲಿ ಸಚಿವರಾದ ಶ್ರೀ ಎನ್. ಚಲುವರಾಯಸ್ವಾಮಿಯವರು ಮಾತನಾಡುತ್ತಿರುವುದು. (18 ಜನವರಿ 2026)

ಜಾತ್ರೆಯ ಮೂಲಕ ಶ್ರೀಮಠವು ನಡೆಸಿ ದೇಶಕ್ಕೆ ಮಾದರಿಯಾಗಿ ಕಾರ್ಯನಿರ್ವಹಿಸುತ್ತಿರುವುದು ಶ್ಲಾಘನೀಯ ಎಂದರು.

ವಿಜಯಪುರದ ಡಾ. ಶ್ರೀ ಬಸವಕುಮಾರ ಸ್ವಾಮಿಗಳು, ಕೇರಳದ ಶ್ರೀ ಪಂಚದಾಸನಾಮ ಅವಹಾನ್ ಅಖಾಡದ ಶ್ರೀ ಸ್ವಾಮಿ ಪ್ರಭಾಕರಾನಂದ ಸರಸ್ವತಿ ಮಹಾರಾಜ್, ಮೈಸೂರು ಶ್ರೀ ಸ್ವರ್ಣನೃಸಿಂಹ ದತ್ತ ಸಾಯಿಪೀಠದ ಶ್ರೀ ಅರ್ಜುನ ಅವಧೂತ ಗುರೂಜಿ, ಶಾಸಕರಾದ ಶ್ರೀ ಕೆ. ಹರೀಶ್‌ಗೌಡ, ಕುಲಪತಿಗಳಾದ ಡಾ. ಎಂ.ಆರ್. ಗಂಗಾಧರ್, ಶ್ರೀ ಎಸ್. ಗುರುಸ್ವಾಮಿಯವರುಗಳು ಮಾತನಾಡಿದರು. ಮಾಜಿ ಶಾಸಕರಾದ ಶ್ರೀ ಎಲ್. ನಾಗೇಂದ್ರ, ಶ್ರೀ ರಘು ಕೌಟಿಲ್ಯ, ಶ್ರೀ ಎಂ. ರುದ್ರೇಶ್, ಉಪಸ್ಥಿತರಿದ್ದರು. ಹಾವೇರಿಯ ಪ್ರಗತಿಪರ ರೈತರಾದ ಶ್ರೀಮತಿ ರಾಜೇಶ್ವರಿ ಪಾಟೀಲ್ ಮತ್ತು ಸಾವಯವ ಕೃಷಿ ಉದ್ಯಮಿಗಳಾದ ಶ್ರೀ ಯೋಗಿಶ್ ಅಪ್ಪಾಜಯ್ಯ ಉಪನ್ಯಾಸ ನೀಡಿದರು. ಡಾ. ನಂದೀಶ್ ಹಂಚೆ ಸ್ವಾಗತಿಸಿದರು. ಡಾ. ಕೆ.ವಿ. ಯೋಗೀಶ್ ವಂದಿಸಿದರು. ಶ್ರೀಮತಿ ಸಂಗೀತ ಗೌಡ ಕಾರ್ಯಕ್ರಮ ನಿರೂಪಿಸಿದರು.

## ಭವ್ಯ ಭಾರತ ನಿರ್ಮಾಣದಲ್ಲಿ ಮಠಮಾನ್ಯಗಳ ಕೊಡುಗೆ ಅಪಾರ

ದೇಶದಲ್ಲಿ ಮಠಮಾನ್ಯಗಳು ಶಿಕ್ಷಣಕ್ಕೆ ಒತ್ತು ನೀಡಿ ಜವಾಬ್ದಾರಿಯನ್ನು ನಿರ್ವಹಿಸದೆ ಹೋಗಿದ್ದರೆ ಇಂದು ಭಾರತ ದೇಶ ವಿಶ್ವಮಾನವ ದೇಶವಾಗಿ ರೂಪುಗೊಳ್ಳಲು ಸಾಧ್ಯವಾಗುತ್ತಿರಲಿಲ್ಲ. ಭವ್ಯ ಭಾರತದ ಭವಿಷ್ಯ ನಿರ್ಮಿಸುವಲ್ಲಿ ಮಠಮಾನ್ಯಗಳ ಕೊಡುಗೆ ಅಪಾರವಾಗಿದೆ ಎಂದು ಮಾಜಿ ಸಚಿವರಾದ ಶ್ರೀ ಸಿ.ಎಸ್. ಪುಟ್ಟರಾಜುರವರು ಹೇಳಿದರು.

ಸುತ್ತೂರು ಜಾತ್ರಾ ಮಹೋತ್ಸವದಲ್ಲಿ ದಿನಾಂಕ 19.1.2026ರಂದು ಭಜನಾ ಮೇಳದ ಸಮಾರೋಪದಲ್ಲಿ ಮಾತನಾಡುತ್ತಾ ಅವರು ತಿಳಿಸಿದರು. ರಾಜ್ಯ ಮತ್ತು ದೇಶದಲ್ಲಿ ಮಠಮಾನ್ಯಗಳು ಶಿಕ್ಷಣಕ್ಕೆ ಆದ್ಯತೆ ನೀಡಿ ಕೆಲಸ ನಿರ್ವಹಿಸುವ ಮೂಲಕ ದೇಶದ ಅಭಿವೃದ್ಧಿಗೆ ಕಾರಣೀಭೂತವಾಗಿವೆ. ಸುತ್ತೂರು ಶ್ರೀಮಠವು ದೇಶ ಮತ್ತು ವಿದೇಶಗಳಲ್ಲಿ ಶಿಕ್ಷಣ ಸಂಸ್ಥೆಗಳನ್ನು ತೆರೆದುದಲ್ಲದೆ



ಜಾತ್ರಾ ಮಹೋತ್ಸವದ ಅಂಗವಾಗಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ನಡೆದ ಭಜನಾ ಮೇಳದ ಸಮಾರೋಪದಲ್ಲಿ ಮಾಜಿ ಸಚಿವರಾದ ಶ್ರೀ ಸಿ.ಎಸ್. ಪುಟ್ಟರಾಜುರವರು ಮಾತನಾಡುತ್ತಿರುವುದು. (19 ಜನವರಿ 2026)

ಗ್ರಾಮೀಣ ಭಾಗದ ಅಭಿವೃದ್ಧಿಗೆ ಮುನ್ನುಡಿ ಬರೆದಿದೆ. ಶ್ರೀಮಠದ ಸಂಸ್ಥೆಗಳಲ್ಲಿ ವಿದ್ಯಾಭ್ಯಾಸವನ್ನು ಪಡೆದ ಲಕ್ಷಾಂತರ ಜನರು ದೇಶವಿದೇಶಗಳಲ್ಲಿ ಪ್ರಖ್ಯಾತಿಯನ್ನು ಪಡೆದಿದ್ದಾರೆ. ಶ್ರೀಮಠವು ಆಧ್ಯಾತ್ಮಿಕ ಮತ್ತು ಶಿಕ್ಷಣಕ್ಕೆ ಮಾತ್ರ ಸೀಮಿತವಾಗದೆ ಹಳ್ಳಿಗಳು ಅಭಿವೃದ್ಧಿ ಕಂಡಲ್ಲಿ ದೇಶದ ಅಭಿವೃದ್ಧಿ ಸಾಧ್ಯ ಎಂಬ ಮಹಾತ್ಮಗಾಂಧೀಜಿಯವರ ಆಶಯದಂತೆ ಗ್ರಾಮೀಣ ಭಾಗದ ಜನರಿಗೆ ಅವಶ್ಯವಿರುವ ಎಲ್ಲ ಜ್ಞಾನವನ್ನು ಸವಲತ್ತುಗಳನ್ನು ಒದಗಿಸುವ ಮೂಲಕ ಸಮಾಜಮುಖಿಯಾಗಿ ಕೆಲಸ ಮಾಡುತ್ತಿರುವುದು ಶ್ಲಾಘನೀಯ ಎಂದು ತಿಳಿಸಿದರು.

ಶಾಸಕರಾದ ಶ್ರೀ ಜಿ.ಡಿ. ಹರೀಶ್‌ಗೌಡರವರು ಸುತ್ತೂರು ಮಠವು ಲಕ್ಷಾಂತರ ವಿದ್ಯಾರ್ಥಿಗಳಿಗೆ ಅನ್ನ ಆಶ್ರಯ ನೀಡಿ ಅವರ ಭವಿಷ್ಯ ರೂಪಿಸಿಕೊಳ್ಳುವುದರ ಜೊತೆಗೆ ಭವ್ಯ ಭಾರತ ದೇಶದ ಭವಿಷ್ಯವನ್ನೂ ರೂಪಿಸುವ ಮಹತ್ತರ ಪಾತ್ರವನ್ನು ನಿರ್ವಹಿಸುತ್ತಿದೆ. ದೇಸೀಯ ಕಲಾವಿದರನ್ನು ಪ್ರೋತ್ಸಾಹಿಸಿ ಉತ್ತೇಜನ ನೀಡುವ ಮೂಲಕ ನಮ್ಮ ಸಂಸ್ಕೃತಿ, ಪರಂಪರೆಯನ್ನೂ ಉಳಿಸಲು ಮುಂದಾಗಿದೆ ಎಂದರು.

ಮಾಜಿ ಶಾಸಕರಾದ ಡಾ. ಕೆ. ಅನ್ನದಾನಿಯವರು ರಾಜ್ಯ ಹಾಗೂ ಕೇಂದ್ರ ಸರ್ಕಾರಗಳು ಮಾಡಲಾರದ ಕೆಲಸವನ್ನು ಶ್ರೀಮಠವು ಮಾಡುತ್ತಿದೆ. ಧಾರ್ಮಿಕತೆಯನ್ನು ಹೊರತುಪಡಿಸಿ ಜನರಿಗೆ ಬೇಕಾದ ಜ್ಞಾನ ತಿಳವಳಿಕೆಯನ್ನು ಮೂಡಿಸುವ ಕೆಲಸ ಮಾಡುತ್ತಿದೆ. ಬಡವರಿಗೆ, ಅಂಧರಿಗೆ ಅಂಗವಿಕಲರಿಗೆ, ವಿಶೇಷವಾದ ಸೌಲಭ್ಯವನ್ನು ಮಠದ ಮೂಲಕ ಕಲ್ಪಿಸಿ ಸಮಾಜಮುಖಿಯಾಗಿ ಕೆಲಸ ಮಾಡುತ್ತಿರುವುದು ಅವಿಸ್ಮರಣೀಯ ಎಂದು ಹೇಳಿದರು.

ಮೈಸೂರು ಶ್ರೀ ಅವಧೂತ ದತ್ತ ಪೀಠದ ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮಿಗಳು, ಹೂವಿನಹಡಗಲಿಯ ಶ್ರೀ ಗವಿಸಿದ್ದೇಶ್ವರ ಶಾಖಾಮಠದ ಡಾ. ಶ್ರೀ ಹಿರಿಶಾಂತವೀರ ಸ್ವಾಮಿಗಳು, ಸಿಂದಗಿ ಶ್ರೀ ಸಾರಂಗಮಠದ ಶ್ರೀ ಪ್ರಭುಸಾರಂಗದೇವ ಶಿವಾಚಾರ್ಯ ಸ್ವಾಮಿಗಳು, ಡಾ. ಶ್ರೀ ಪ್ರಭು ಸ್ವಾಮಿಗಳು, ವಿಧಾನಪರಿಷತ್ ಸದಸ್ಯರಾದ ಶ್ರೀ ಕೆ. ವಿವೇಕಾನಂದ, ಶಾಸಕರು ಹಾಗೂ ಮಾಜಿ ಸಚಿವರಾದ ಶ್ರೀ ಎಂ. ಕೃಷ್ಣಪ್ಪ, ಮೈಮುಲ್ ಅಧ್ಯಕ್ಷರಾದ ಶ್ರೀ ಈರೇಗೌಡ, ಕೆಎಸ್‌ಆರ್‌ಪಿ ಡಿಐಜಿ ಶ್ರೀ ಜನಾರ್ಧನ, ಜಿಎಸ್‌ಟಿ ಆಯುಕ್ತರಾದ ಶ್ರೀ ಸಿ.ವಿ.ಎನ್. ಸುರೇಶ್‌ಬಾಬುರವರುಗಳು ಮಾತನಾಡಿದರು. ಮಾಜಿ ಶಾಸಕರಾದ ಶ್ರೀ ಬಿ. ಹರ್ಷವರ್ಧನ್, ಕೆಎಸ್‌ಸಿಎ ಶ್ರೀ ಶ್ರೀನಿವಾಸ್‌ರವರು ಉಪಸ್ಥಿತರಿದ್ದರು. ಪ್ರೊ. ಸುಬ್ಬಪ್ಪ ಸ್ವಾಗತಿಸಿದರು. ಶ್ರೀ ಎನ್. ಮಂಜುನಾಥ್ ವಂದಿಸಿದರು. ಪ್ರೊ. ಡಿ.ಎಸ್. ಸದಾಶಿವಮೂರ್ತಿ ಕಾರ್ಯಕ್ರಮ ನಿರೂಪಿಸಿದರು.

## ಸರ್ವಧರ್ಮಗಳನ್ನೂ ಒಗ್ಗೂಡಿಸುವ ಸುತ್ತೂರು ಜಾತ್ರೆ

ಸರ್ವಧರ್ಮಗಳನ್ನೂ ಸುತ್ತೂರು ಜಾತ್ರೆ ಒಗ್ಗೂಡಿಸುತ್ತಿದೆ ಎಂದು ಶಾಸಕರಾದ ಶ್ರೀ ರಿಜ್ವಾನ್ ಅರ್ಷದ್‌ರವರು ಹೇಳಿದರು.

ಸುತ್ತೂರು ಜಾತ್ರಾ ಮಹೋತ್ಸವದಲ್ಲಿ ದಿನಾಂಕ 19.1.2026ರಂದು ನಡೆದ ರಾಜ್ಯಮಟ್ಟದ ಕುಸ್ತಿ ಪಂದ್ಯಾವಳಿ ಉದ್ಘಾಟನೆಯಲ್ಲಿ ಮಾತನಾಡುತ್ತಾ ಅವರು ತಿಳಿಸಿದರು. ನಾನು ಪ್ರತಿವರ್ಷವು ಸುತ್ತೂರು ಜಾತ್ರೆಯಲ್ಲಿ ಬಹಳ ಉತ್ಸಾಹದಿಂದ ಭಾಗವಹಿಸುತ್ತಿದ್ದೇನೆ. ಸುತ್ತೂರು ಜಾತ್ರೆ ಈ ಭಾಗಕ್ಕೆ ಮಾತ್ರ ಸೀಮಿತವಾಗಿಲ್ಲ. ಇದು ರಾಜ್ಯದ ಬಹುಮುಖ್ಯ ಜಾತ್ರೆಗಳಲ್ಲಿ ಒಂದಾಗಿದೆ. ಜಾತ್ರೆಯಲ್ಲಿ ನಡೆಯುತ್ತಿರುವ ಕುಸ್ತಿ ಪಂದ್ಯಾವಳಿ ಕೇವಲ ರಾಜ್ಯಮಟ್ಟವಲ್ಲ, ರಾಷ್ಟ್ರಮಟ್ಟದ ಪಂದ್ಯಾವಳಿಯಾಗಿದೆ. ಇತ್ತೀಚೆಗೆ ಯುವಕರು ಮಾದಕ ವಸ್ತುಗಳಿಗೆ ಬಲಿಯಾಗುತ್ತಿದ್ದಾರೆ. ಕುಸ್ತಿಯಂತಹ ಕ್ರೀಡೆಗಳನ್ನು ನಡೆಸುವುದರಿಂದ ದೈಹಿಕ ಹಾಗೂ ಮಾನಸಿಕವಾಗಿ ಸದೃಢರಾಗಬಹುದು ಎಂದು ತಿಳಿಸಿದರು.

ಶಾಸಕರು ಹಾಗೂ ಮಾಜಿ ಸಚಿವರಾದ ಶ್ರೀ ತನ್ವಿರ್ ಸೇಠ್‌ರವರು, ಸುತ್ತೂರು ಜಾತ್ರೆಯಲ್ಲಿ ಕುಸ್ತಿ ಪಂದ್ಯಾವಳಿಗಳನ್ನು ಆಯೋಜನೆ ಮಾಡಿರುವುದು ಕುಸ್ತಿಪ್ರಿಯರಿಗೆ ಸಂತೋಷದ ಸಂಗತಿಯಾಗಿದೆ. ಶ್ರೀಗಳು ಜಾತ್ರೆಯನ್ನು ಧಾರ್ಮಿಕ ಹಾಗೂ ಶೈಕ್ಷಣಿಕವಾಗಿ ಮಾಹಿತಿ ನೀಡುವ ಸ್ಥಳವನ್ನಾಗಿ ಬದಲಾವಣೆ ಮಾಡಿದ್ದಾರೆ. ಮಹಾರಾಜರ ಕಾಲದಿಂದಲೂ ಕುಸ್ತಿ ಪಂದ್ಯಾವಳಿಗಳು ನಡೆದಿವೆ. ಯುವಕರು ಡ್ರಗ್ಸ್ ಜಾಲಗಳಿಗೆ ಬಲಿ ಬೀಳುತ್ತಿದ್ದು, ಎಚ್ಚೆತ್ತುಕೊಂಡು ಕ್ರೀಡೆಯತ್ತ ಗಮನಹರಿಸಬೇಕು ಎಂದರು.

ಮಲ್ಲನಮೂಲೆ ಶ್ರೀಗಳು, ಶಾಸಕರಾದ ಶ್ರೀ ದರ್ಶನ್ ಧ್ರುವನಾರಾಯಣ್, ಚಾಮರಾಜನಗರ ಜಿಲ್ಲಾ ಪೊಲೀಸ್ ಅಧೀಕ್ಷಕರಾದ ಶ್ರೀ ಎಂ. ಮುತ್ತುರಾಜ್, ಮಾಜಿ ಶಾಸಕರಾದ ಶ್ರೀ ಬಿ. ಹರ್ಷವರ್ಧನ್, ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷರಾದ ಶ್ರೀ ದೊಡ್ಡಸ್ವಾಮೇಗೌಡ. ಡಾ. ದತ್ತೇಶ್‌ಕುಮಾರ್, ಪ್ರೊ. ಶಿವರಾಜಪ್ಪನವರುಗಳು ಮಾತನಾಡಿದರು. ಮಾಜಿ ಶಾಸಕರುಗಳಾದ ಶ್ರೀಮತಿ ಪರಿಮಳ ನಾಗಪ್ಪ, ಶ್ರೀ ಕಳಲೆ ಕೇಶವಮೂರ್ತಿ, ಶ್ರೀ ಎಂ. ಪ್ರದೀಪ್‌ಕುಮಾರ್‌ರವರು ಉಪಸ್ಥಿತರಿದ್ದರು. ಡಾ. ಸಿ.ಎಸ್. ಹೊನ್ನೇಗೌಡ ಸ್ವಾಗತಿಸಿದರು. ಶ್ರೀ ದೇವರಾಜಮೂರ್ತಿ ವಂದಿಸಿದರು. ಶ್ರೀ ಬಿ.ಕೆ. ರವಿಕುಮಾರ್ ಕಾರ್ಯಕ್ರಮ ನಿರೂಪಿಸಿದರು.

## ಸಾವಯವ ಕೃಷಿಗೆ ಒತ್ತು ನೀಡಬೇಕು

ಸಾವಯವ ಕೃಷಿಗೆ ಒತ್ತು ನೀಡಬೇಕು ಎಂದು ಸಚಿವರಾದ ಶ್ರೀ ದಿನೇಶ್ ಗುಂಡೂರಾವ್‌ರವರು ಹೇಳಿದರು.

ಸುತ್ತೂರು ಜಾತ್ರಾ ಮಹೋತ್ಸವದಲ್ಲಿ ದಿನಾಂಕ 19.1.2026ರಂದು ನಡೆದ ಕೃಷಿ ಮೇಳ ಮತ್ತು ದನಗಳ ಜಾತ್ರೆ ಸಮಾರೋಪದಲ್ಲಿ ಅವರು ಮಾತನಾಡಿದರು. ದೇಶ ಸ್ವಾತಂತ್ರ್ಯಾನಂತರ ಆಹಾರೋತ್ಪಾದನೆಯಲ್ಲಿ ಸ್ವಾವಲಂಬನೆ ಸಾಧಿಸಿದ್ದರೂ ಬದಲಾದ ಸನ್ನಿವೇಶದಲ್ಲಿ ಆಹಾರೋತ್ಪಾದನೆಯಲ್ಲಿ ಹೊಸ ಸವಾಲುಗಳು ಎದುರಾಗುತ್ತಿವೆ. ಅವುಗಳನ್ನು ಸಮರ್ಥವಾಗಿ ಎದುರಿಸಲು ಕೃಷಿ ಕ್ಷೇತ್ರವನ್ನು ಬಲಗೊಳಿಸಬೇಕಿದೆ. ಬದಲಾದ ಸನ್ನಿವೇಶದಲ್ಲಿ ಮಿತಿ ಮೀರಿದ ರಾಸಾಯನಿಕಗಳ ಬಳಕೆಯಿಂದಾಗಿ ಕೃಷಿಭೂಮಿ ವಿಷಯುಕ್ತವಾಗುತ್ತಿದೆ. ಸುಸ್ಥಿರ ಕೃಷಿಯೊಂದಿಗೆ ಆರೋಗ್ಯಪೂರ್ಣ ಸಮಾಜ ನಿರ್ಮಾಣ ಮಾಡಬೇಕಿದೆ. ವಿಶ್ವಮಟ್ಟದಲ್ಲಿ ಭಾರತಕ್ಕೆ ವ್ಯಾಪಕ ಮನ್ನಣೆ ಇದ್ದು, ಜಗತ್ತಿನ ಅತ್ಯಂತ ಹೆಚ್ಚು ಜನಸಂಖ್ಯೆ ಹೊಂದಿರುವ ಭಾರತ ಭವಿಷ್ಯದಲ್ಲಿ ಬಲಿಷ್ಠ ರಾಷ್ಟ್ರವಾಗಿ ಗುರುತಿಸಿಕೊಳ್ಳಬೇಕಾದಲ್ಲಿ ದೇಶದ 140 ಕೋಟಿಗೂ ಹೆಚ್ಚು ಸಂಖ್ಯೆಯ ಜನರ ಬುದ್ಧಿಶಕ್ತಿಯನ್ನು ಬಳಸಿಕೊಂಡು ಪ್ರಗತಿಯತ್ತ ಸಾಗಬೇಕಿದೆ ಎಂದು ತಿಳಿಸಿದರು.

ದನಗಳ ಜಾತ್ರೆಯಲ್ಲಿ ವಿವಿಧ ವಿಭಾಗಗಳಲ್ಲಿ ಉತ್ತಮ ಪ್ರದರ್ಶನ ತೋರಿದ ರಾಸುಗಳಿಗೆ ಬಹುಮಾನ




ಜಾತ್ರಾ ಮಹೋತ್ಸವದ ಅಂಗವಾಗಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ನಡೆದ ಕೃಷಿಮೇಳ ಮತ್ತು ದನಗಳ ಜಾತ್ರೆ ಸಮಾರೋಪದಲ್ಲಿ ಸಚಿವರಾದ ಶ್ರೀ ದಿನೇಶ್ ಗುಂಡೂರಾವ್‌ರವರು ಮಾತನಾಡುತ್ತಿರುವುದು. (19 ಜನವರಿ 2026)

ವಿತರಿಸಲಾಯಿತು. ಬರಗೂರು ಶ್ರೀ ದ್ರೋಣಗಿರಿ ಮಠದ ಶ್ರೀ ಅಶೋಕ ರಾಜೇಂದ್ರ ಸ್ವಾಮಿಗಳು, ಶ್ರೀ ಭಾಷ್ಯಂ ಸ್ವಾಮಿಗಳು, ವಿಧಾನಪರಿಷತ್ ಸದಸ್ಯರಾದ ಡಾ. ಡಿ. ತಿಮ್ಮಯ್ಯ, ಶ್ರೀ ಸಿ.ಎನ್. ಮಂಜೇಗೌಡ, ಶಾಸಕರಾದ ಶ್ರೀ ಅನಿಲ್ ಚಿಕ್ಕಮಾದು, ಶ್ರೀಮತಿ ಲತಾ ಮಲ್ಲಿಕಾರ್ಜುನ್, ಮಾಜಿ ಸಚಿವರಾದ ಶ್ರೀ ಸಾ.ರಾ. ಮಹೇಶ್, ಅಮೆರಿಕದ ಜೆಎಸ್‌ಎಸ್ ಆಧ್ಯಾತ್ಮಿಕ ಕೇಂದ್ರದ ಸಲಹಾ ಸಮಿತಿ ಅಧ್ಯಕ್ಷರಾದ ಡಾ. ಸುಭಾಷ್ ಮಲ್ಲನ್, ಅಮೆರಿಕದ ನಿವೃತ್ತ ವಿಜ್ಞಾನಿಗಳಾದ ಶ್ರೀಮತಿ ಜಯಶ್ರೀ ಜಗದೀಶ್, ಮಂಡ್ಯ ಜಿಲ್ಲಾ ಪಂಚಾಯತ್ ಸಿಇಒ ಶ್ರೀಮತಿ ಕೆ.ಆರ್. ನಂದಿನಿ, ಮೈಲ್ಯಾಕ್ ಮಾಜಿ ಅಧ್ಯಕ್ಷರಾದ ಶ್ರೀ ವೆಂಕಟೇಶ್‌ರವರುಗಳು ಮಾತನಾಡಿದರು. ಶಾಸಕರಾದ ಶ್ರೀ ಅನಿಲ್ ಚಿಕ್ಕಮಾದು, ಶ್ರೀ ಎಂ.ಆರ್. ಮಂಜುನಾಥ್, ಮಾಜಿ ಶಾಸಕರಾದ ಶ್ರೀ ಸಿ.ಎಸ್. ನಿರಂಜನ್‌ಕುಮಾರ್, ಶ್ರೀ ಅಶ್ವಿನ್‌ಕುಮಾರ್, ಮೂಡಾ ಮಾಜಿ ಅಧ್ಯಕ್ಷರಾದ ಶ್ರೀ ಹೆಚ್.ವಿ. ರಾಜೀವ್, ಬಣ್ಣಾರಿ ಅಮ್ಮನ್ ಸಕ್ಕರೆ ಕಾರ್ಖಾನೆಯ ಕಾರ್ಯನಿರ್ವಾಹಕ ಉಪಾಧ್ಯಕ್ಷರಾದ ಶ್ರೀ ವೇಲುಸ್ವಾಮಿ, ಉಪಾಧ್ಯಕ್ಷರಾದ ಶ್ರೀ ಸತೀಶ್, ಶ್ರೀ ಶರವಣನ್, ವಕೀಲರಾದ ಶ್ರೀ ಶಂಕರಶೆಟ್ಟಿ, ಪ್ರೊ. ಎಂ. ಕೃಷ್ಣೇಗೌಡ, ಕಾಮಾಕ್ಷಿ ಆಸ್ಪತ್ರೆಯ ಶ್ರೀ ಮಹೇಶ್ ಶೆಣೈ ಉಪಸ್ಥಿತರಿದ್ದರು. ಪ್ರೊ. ಪಿ.ಎಂ. ಮಹದೇವಸ್ವಾಮಿ ಸ್ವಾಗತಿಸಿದರು. ಡಾ. ವಿನಯ್‌ಕುಮಾರ್ ಹಾಗೂ ಶ್ರೀ ಉಮಾಮಹೇಶ್ವರನ್ ಕೃಷಿಮೇಳ ಮತ್ತು ದನಗಳ ಜಾತ್ರೆಯ ವರದಿ ಮಂಡಿಸಿದರು. ಶ್ರೀ ಮಲ್ಲೇಶಪ್ಪ ವಂದಿಸಿದರು. ಶ್ರೀ ಮಂಜುನಾಥ್ ಕಾರ್ಯಕ್ರಮ ನಿರೂಪಿಸಿದರು. □

## ಧಾರ್ಮಿಕತೆಯಿಂದ ಸನಾತನ ಧರ್ಮ ಗಟ್ಟಿಯಾಗಿದೆ

ಧಾರ್ಮಿಕ ಶ್ರದ್ಧಾ ಕೇಂದ್ರಗಳು, ಮಠಮಾನ್ಯಗಳು ಲೋಕ ಕಲ್ಯಾಣಾರ್ಥವಾಗಿ ನಡೆಸುವ ಧಾರ್ಮಿಕ ಕಾರ್ಯಕ್ರಮಗಳು ಮತ್ತು ದೇವರ ಪೂಜೆಯಿಂದಾಗಿ ಸನಾತನ ಧರ್ಮ ಗಟ್ಟಿಯಾಗಿ ನೆಲೆಯೂರಲು ಸಾಧ್ಯವಾಗಿದೆ ಎಂದು ಶಾಸಕ ಟಿ.ಎಸ್. ಶ್ರೀವತ್ಸರವರು ಹೇಳಿದರು.

ಸುತ್ತೂರು ಜಾತ್ರಾ ಮಹೋತ್ಸವದಲ್ಲಿ ದಿನಾಂಕ 20.1.2026ರಂದು ನಡೆದ ಸಾಂಸ್ಕೃತಿಕ ಮೇಳ ಮತ್ತು ವಸ್ತುಪ್ರದರ್ಶನ ಸಮಾರೋಪದಲ್ಲಿ ಮಾತನಾಡುತ್ತಾ ಅವರು ತಿಳಿಸಿದರು. ಸುತ್ತೂರು ಜಾತ್ರಾ ಮಹೋತ್ಸವವು ಮೈಸೂರು ದಸರಾ ಮಾದರಿಯಲ್ಲಿಯೇ ನಾಡಿನ ಕಲೆ, ಸಂಸ್ಕೃತಿ, ಪರಂಪರೆಯನ್ನು ಬಿಂಬಿಸುವ ಜಾತ್ರೆಯಾಗಿದೆ.




ಜಾತ್ರಾ ಮಹೋತ್ಸವದ ಅಂಗವಾಗಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ನಡೆದ ಸಾಂಸ್ಕೃತಿಕ ಮೇಳ ಮತ್ತು ವಸ್ತುಪ್ರದರ್ಶನ ಸಮಾರೋಪದಲ್ಲಿ ಶಾಸಕರಾದ ಶ್ರೀ ಟಿ.ಎಸ್. ಶ್ರೀವತ್ಸರವರು ಮಾತನಾಡುತ್ತಿರುವುದು. (20 ಜನವರಿ 2026)

ಜಾತ್ರಾ ಮಹೋತ್ಸವದ ಮೂಲಕ ಈ ಭಾಗದ ಗ್ರಾಮೀಣರ ಸೊಗಡಿನ ಸಂಸ್ಕೃತಿಯನ್ನು ಉತ್ತೇಜಿಸಿ, ನಮ್ಮ ಸಂಸ್ಕೃತಿಯನ್ನು ಮುಂದಿನ ಪೀಳಿಗೆಗಾಗಿ ಉಳಿಸಿ ಬೆಳೆಸುವ ಕಾರ್ಯದಲ್ಲಿ ಶ್ರೀಮಠವು ನಿರತವಾಗಿದೆ ಎಂದು ಹೇಳಿದರು.

ಹೆಬ್ಬಾಳು ಶ್ರೀ ರುದ್ರೇಶ್ವರ ವಿರಕ್ತಮಠದ ಶ್ರೀ ಮಹಾಂತರುದ್ರೇಶ್ವರ ಸ್ವಾಮಿಗಳು ರಾಜ್ಯದಲ್ಲಿ ಮಠಮಾನ್ಯಗಳು ಸನಾತನ ಸಂಸ್ಕೃತಿಯನ್ನು ಸಂರಕ್ಷಿಸುವ ಕೆಲಸವನ್ನು ನಿರ್ವಹಿಸುತ್ತಿವೆ. ಬಡವರ್ಗದ ಜನರಿಗೆ ಧಾರ್ಮಿಕ ಶಿಕ್ಷಣದ ಜೊತೆಗೆ ಸಂಸ್ಕಾರ, ಮಾನವೀಯ ಮೌಲ್ಯ ಮತ್ತು ದೇಶದ ಸಂಸ್ಕೃತಿಯನ್ನು ಕಲಿಸುವಂತಹ ಕೆಲಸವನ್ನು ನಿರಂತರವಾಗಿ ಮಾಡುತ್ತಿರುವ ಕಾರಣ ಸನಾತನ ಸಂಸ್ಕೃತಿ ಜೀವಂತವಾಗಿ ಉಳಿದಿದೆ ಎಂದರು.

ಶಾಸಕರಾದ ಶ್ರೀ ಎ.ಆರ್. ಕೃಷ್ಣಮೂರ್ತಿಯವರು ಸುತ್ತೂರು ಶ್ರೀಮಠವು ಸಮಾಜಮುಖಿ ಸೇವಾ ಕಾರ್ಯಗಳಿಂದಾಗಿ ರಾಜ್ಯದ ಜನರ ಮನಸ್ಸಿನಲ್ಲಿ ಅಚ್ಚಳಿಯದೆ ಉಳಿದಿದೆ. ಜಾತ್ರಾ ಮಹೋತ್ಸವದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಜನರು ಭಾಗವಹಿಸಿ ಜಾತ್ರಾ ಅನುಭವವನ್ನು ಪಡೆದಿರುವುದೇ ಇದಕ್ಕೆ ಸಾಕ್ಷಿಯಾಗಿದೆ ಎಂದರು.

ನಿವೃತ್ತ ಕುಲಪತಿಗಳಾದ ಪ್ರೊ. ಜಿ ಹೇಮಂತ್‌ಕುಮಾರ್‌ರವರು ಯುವಕರಿಗೆ ಕೇವಲ ವಿದ್ಯಾಭ್ಯಾಸ ನೀಡುವುದು ಸಲ್ಲದು, ಅವರ ಭವಿಷ್ಯವನ್ನು ರೂಪಿಸಿಕೊಳ್ಳಲು ಸಂಸ್ಕಾರಯುತ ಮಾರ್ಗ ತೋರಬೇಕು. ಈ ನಿಟ್ಟಿನಲ್ಲಿ ಜೆಎಸ್‌ಎಸ್ ಸಂಸ್ಥೆಯು ನಾಲ್ಕು ವಿಶ್ವವಿದ್ಯಾನಿಲಯಗಳನ್ನು ಹಲವಾರು ಶಾಲಾ ಕಾಲೇಜುಗಳನ್ನು ತೆರೆದು, ಯುವಕರಿಗೆ ತಕ್ಕ ತರಬೇತಿ ಮತ್ತು ಉತ್ತೇಜನ ನೀಡಿ ಅವರ ಭವಿಷ್ಯವನ್ನು ರೂಪಿಸಿಕೊಳ್ಳಲು ದಾರಿಯನ್ನು ತೋರುತ್ತಿದೆ ಎಂದು ಹೇಳಿದರು.

ತಲಕಾಡು ಶ್ರೀ ಹಸ್ತಿಕೇರಿಮಠದ ಡಾ. ಶ್ರೀ ಸಿದ್ಧಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮಿಗಳವರ 'ಚೇಳಿನ ವಿಷ ಚಿಕಿತ್ಸೆ' ಕೃತಿಯನ್ನು ಬಿಡುಗಡೆಗೊಳಿಸಲಾಯಿತು. ಪಾಂಡೋಮಟ್ಟಿ ಶ್ರೀ ವಿರಕ್ತಮಠದ ಶ್ರೀ ಗುರುಬಸವ ಸ್ವಾಮಿಗಳು, ಶ್ರೀ ಸಾಲೂರು ಮಠದ ಡಾ. ಶ್ರೀ ಶಾಂತಮಲ್ಲಿಕಾರ್ಜುನ ಸ್ವಾಮಿಗಳು, ನಳಂದ ಶಿಕ್ಷಣ ಸಂಸ್ಥೆ ಅಧ್ಯಕ್ಷರಾದ ಶ್ರೀ ಎಸ್‌ಎಲ್‌ಎನ್ ಸಾತಪ್ಪನ್, ಬೆಂಗಳೂರು ಜಿಲ್ಲಾ ಪಂಚಾಯತ್ ಮಾಜಿ ಅಧ್ಯಕ್ಷರಾದ ಶ್ರೀ ಜಿ. ಮರಿಸ್ವಾಮಿ, ಮೂಡಾ ಮಾಜಿ ಅಧ್ಯಕ್ಷರಾದ ಶ್ರೀ ಹೆಚ್.ವಿ. ರಾಜೀವ್, ಕುಲಪತಿಗಳಾದ

ಪ್ರೊ. ಶರಣಪ್ಪ ವಿ. ಹಲಸೆಯವರುಗಳು ಮಾತನಾಡಿದರು.

ಮಾಜಿ ಸಚಿವರು ಹಾಗೂ ಶಾಸಕರಾದ ಶ್ರೀ ಎಸ್.ಟಿ. ಸೋಮಶೇಖರ್, ಮಾಜಿ ಶಾಸಕರಾದ ಶ್ರೀ ತೋಂಟದಾರ್ಯ, ಮಾಜಿ ಮೇಯರ್ ಶ್ರೀಮತಿ ಪುಷ್ಪಲತ ಜಗನ್ನಾಥ್, ಅರಮನೆ ಮಂಡಳಿ ಅಧ್ಯಕ್ಷರಾದ ಶ್ರೀ ಟಿ.ಡಿ. ಸುಬ್ರಹ್ಮಣ್ಯ, ಶ್ರೀ ಸಂಜಯ್ ಪಾಟೀಲ್ ಉಪಸ್ಥಿತರಿದ್ದರು. ಶ್ರೀ ಸಿದ್ಧಮಲ್ಲಿಕಾರ್ಜುನಸ್ವಾಮಿ ಸ್ವಾಗತಿಸಿದರು. ಶ್ರೀ ಮಾಲಂಗಿ ಸುರೇಶ್ ವಂದಿಸಿದರು. ಶ್ರೀ ಹೆಚ್.ಎಂ. ದಯಾನಂದಸ್ವಾಮಿ, ಶ್ರೀ ಎಸ್. ಬಸವರಾಜು, ಶ್ರೀ ಜಿ. ಮಹದೇವಸ್ವಾಮಿಯವರು ಸಾಂಸ್ಕೃತಿಕ ಮೇಳ ಹಾಗೂ ವಸ್ತುಪ್ರದರ್ಶನದ ವರದಿ ಮಂಡಿಸಿದರು. ಡಾ. ರೇಚಣ್ಣ ಕಾರ್ಯಕ್ರಮ ನಿರೂಪಿಸಿದರು.

## ಸಿವಿಲ್ ನ್ಯಾಯಾಧೀಶರ ಹುದ್ದೆಗೆ ಆಯ್ಕೆ



ಕೆ.ಬಿ. ರೋಶಿನಿ



ರಾಹುಲ್ ಆದಿನಾಥ್ ನ್ಯಾಮಗೌಡ್



ಮಹದೇವ್ ಕೆ. ಗೌಡ



ಕೆ.ಸಿ. ಸುಹಾಸ್



ಮೂಡಲಗಿ ರಶ್ಮಿ ವೀರಭದ್ರ



ಸುಪ್ರಿಯ ನವಲಿ



ನಿತ್ಯ ಎನ್. ಗುಜ್ಜರ್

**ಮೈಸೂರಿನ ಜೆಎಸ್‌ಎಸ್ ಕಾನೂನು ಕಾಲೇಜಿನ (ಸ್ವಾಯತ್ತ)** ಏಳು ಮಂದಿ ವಿದ್ಯಾರ್ಥಿಗಳು ಸಿವಿಲ್ ನ್ಯಾಯಾಧೀಶರ ಹುದ್ದೆಗೆ ಆಯ್ಕೆಯಾಗಿದ್ದಾರೆ.

ವಿದ್ಯಾರ್ಥಿಗಳ ಸಾಧನೆಯು ಕಾಲೇಜಿನ ಶೈಕ್ಷಣಿಕ ಶ್ರೇಷ್ಠತೆ, ವೃತ್ತಿಪರ ತರಬೇತಿ ಹಾಗೂ ನ್ಯಾಯಾಂಗ ಸೇವೆಗೆ ನೀಡುತ್ತಿರುವ ಮಾರ್ಗದರ್ಶನವನ್ನು ಪ್ರತಿಬಿಂಬಿಸುತ್ತಿದೆ. ಅಧ್ಯಾಪಕರ ಸಮರ್ಪಣ ಮನೋಭಾವ ಮತ್ತು ವಿದ್ಯಾರ್ಥಿಗಳ ಪರಿಶ್ರಮದಿಂದ ಕಾಲೇಜು ಮತ್ತೊಮ್ಮೆ ಕೀರ್ತಿ ಗಳಿಸಿದೆ.

ಎಲ್ಲಾ ವಿದ್ಯಾರ್ಥಿಗಳಿಗೆ ಜೆಎಸ್‌ಎಸ್ ಕಾನೂನು ಕಾಲೇಜಿನ ಆಡಳಿತ ಮಂಡಳಿ ಹಾಗೂ ಸಿಬ್ಬಂದಿವರ್ಗವು ಹೃತ್ಪೂರ್ವಕ ಅಭಿನಂದನೆಗಳನ್ನು ತಿಳಿಸುತ್ತದೆ.



ಜಾತ್ರಾ ಮಹೋತ್ಸವದಲ್ಲಿ ಕೃಷಿಮೇಳವನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಉದ್ಘಾಟಿಸಲಾಯಿತು. ಶ್ರೀಮತಿ ಶಿಲ್ಪಾ ಜಗದೀಶ್ ಶೆಟ್ಟರ್, ಶ್ರೀ ಜಗದೀಶ್ ಎಸ್. ಶೆಟ್ಟರ್, ಡಾ. ಬಿ.ಎನ್. ಜ್ಞಾನೇಶ್, ಶ್ರೀ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಶ್ರೀ ಎಸ್. ಉಕೇಶ್‌ಕುಮಾರ್ ಮೊದಲಾದವರಿದ್ದಾರೆ. (15 ಜನವರಿ 2026)




ಜಾತ್ರಾ ಮಹೋತ್ಸವದಲ್ಲಿ ಡ್ರಮ್ಸ್ ವಾದನವನ್ನು ನೀಡಿದ ಖ್ಯಾತ ಕಲಾವಿದ ಕಲೈಮಾಮಣಿ ಶಿವಮಣಿಯವರನ್ನು ಪರಮಪೂಜ್ಯ ಜಗದ್ಗುರುಗಳವರು ಸನ್ಮಾನಿಸಿ ಆಶೀರ್ವದಿಸುತ್ತಿರುವುದು. (16 ಜನವರಿ 2026)




ಜಾತ್ರಾ ಮಹೋತ್ಸವದಲ್ಲಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ನಡೆದ ರಾಜ್ಯಮಟ್ಟದ ಭಜನಾಮೇಳ, ದೇಸಿ ಆಟಗಳು, ಸೋಬಾನೆ ಪದ ಹಾಗೂ ರಂಗೋಲಿ ಸ್ಪರ್ಧೆಗಳ ಉದ್ಘಾಟನೆ ಕಾರ್ಯಕ್ರಮದಲ್ಲಿ ಸಿದ್ಧಗಂಗಾ ಮಠದ ಶ್ರೀಗಳು ಆಶೀರ್ವಚನ ನೀಡುತ್ತಿರುವುದು. ಶ್ರೀ ಪ್ರಭುದೇವ್, ಶ್ರೀ ಪಿ. ಮರಿಸ್ವಾಮಿ, ಕನಕಪುರ ಕಿರಿಯ ಶ್ರೀಗಳು, ಶ್ರೀ ಸೋದೆ ಮಠದ ಶ್ರೀಪಾದಂಗಳು, ಡಾ. ಕುಮಾರ, ಶ್ರೀ ಕೆ.ಬಿ. ಲಿಂಗರಾಜು ಹಾಗೂ ಶ್ರೀ ಹೆಚ್.ಎಸ್. ರಾಘವೇಂದ್ರರವರುಗಳಿದ್ದಾರೆ. (16 ಜನವರಿ 2026)



ಜಾತ್ರಾ ಮಹೋತ್ಸವದಲ್ಲಿ ಐವತ್ತೈದನೆಯ ದನಗಳ ಜಾತ್ರೆಯನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಉದ್ಘಾಟಿಸಲಾಯಿತು. ಶ್ರೀ ಪಿ.ಎಂ. ನರೇಂದ್ರಸ್ವಾಮಿ, ಶ್ರೀ ಸಿ.ಕೆ. ರಾಮಮೂರ್ತಿ, ದೇವನೂರು ಹಾಗೂ ರಬಕವಿ ಶ್ರೀಗಳು ಮೊದಲಾದವರಿದ್ದಾರೆ. (17 ಜನವರಿ 2026)



ಜಾತ್ರಾ ಮಹೋತ್ಸವದಲ್ಲಿ ಡ್ರಮ್ಸ್ ವಾದಕರಾದ ಕಲೈಮಾಮಣಿ ಶಿವಮಣಿಯವರೊಂದಿಗೆ ಡ್ರಮ್ಸ್ ವಾದನ ಕಾರ್ಯಕ್ರಮದಲ್ಲಿ ಪರಮಪೂಜ್ಯ ಜಗದ್ಗುರುಗಳವರು ನುಡಿಸುತ್ತಿರುವುದು. (16 ಜನವರಿ 2026)



ಜಾತ್ರಾ ಮಹೋತ್ಸವದಲ್ಲಿ ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ರಥೋತ್ಸವಕ್ಕೆ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಚಾಲನೆ ನೀಡಲಾಯಿತು. ಶ್ರೀ ಎಸ್.ಪಿ. ಮಂಜುನಾಥ್, ಶ್ರೀ ಜಯರಾಜೇಂದ್ರರು, ಶ್ರೀ ರಾಜಣ್ಣ ಕೊರವಿ, ಡಾ. ಸಿ.ಜಿ. ಬೆಟಸೂರಮಠ, ಶ್ರೀ ನಿತೇಶ್ ಪಾಟೀಲ್, ಡಾ. ಸಿ. ಸೋಮಶೇಖರ್, ಸಿದ್ಧಗಂಗಾ ಮಠದ ಕಿರಿಯ ಶ್ರೀಗಳು ಮೊದಲಾದವರಿದ್ದಾರೆ. (17 ಜನವರಿ 2026)



ಜಾತ್ರಾ ಮಹೋತ್ಸವದಲ್ಲಿ ಕೆಸರುಗದ್ದೆ ಓಟದ ಸ್ಪರ್ಧೆಯನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಶ್ರೀ ಪಿ.ಎಂ. ನರೇಂದ್ರಸ್ವಾಮಿಯವರು ಉದ್ಘಾಟಿಸಿದರು. ರಬಕವಿ ಶ್ರೀಗಳು, ಶ್ರೀ ಸಿ.ಕೆ. ರಾಮಮೂರ್ತಿ ಮೊದಲಾದವರಿದ್ದಾರೆ. (17 ಜನವರಿ 2026)



ಜಾತ್ರಾ ಮಹೋತ್ಸವದಲ್ಲಿ ಲಕ್ಷದೀಪೋತ್ಸವ ಕಾರ್ಯಕ್ರಮವನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯಸಾನ್ನಿಧ್ಯದಲ್ಲಿ ಜ್ಯೋತಿ ಬೆಳಗಿಸುವ ಮೂಲಕ ಉದ್ಘಾಟಿಸಲಾಯಿತು. (18 ಜನವರಿ 2026)




ಜಾತ್ರಾ ಮಹೋತ್ಸವದಲ್ಲಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ನಡೆದ ಚಿತ್ರಕಲೆ, ಗಾಳಿಪಟ ಸ್ಪರ್ಧೆ ಮತ್ತು ಐವತ್ತೈದನೆಯ ದನಗಳ ಜಾತ್ರೆ ಉದ್ಘಾಟನೆ ಕಾರ್ಯಕ್ರಮದಲ್ಲಿ ಚಲನಚಿತ್ರ ಕಲಾವಿದರಾದ ಶ್ರೀ ಡಾಲಿ ಧನಂಜಯರವರು ಮಾತನಾಡುತ್ತಿರುವುದು. ಶ್ರೀ ನರೇಂದ್ರ, ಶ್ರೀಮತಿ ಬಿ.ವಿ. ಗೀತಾ, ಶ್ರೀ ಶಿವಶಂಕರಪ್ಪ ಸಾಹುಕಾರ್, ಶ್ರೀ ರುದ್ರಪ್ಪ ಮಾನಪ್ಪ ಲಮಾಣಿ, ಶ್ರೀ ಬಸವಮೂರ್ತಿ ಮಾದಾರ ಚನ್ನಯ್ಯ ಸ್ವಾಮಿಗಳು, ಕನಕಪುರ ಹಿರಿಯ ಶ್ರೀಗಳು, ದೇವನೂರು ಹಾಗೂ ರಬಕವಿ ಶ್ರೀಗಳು, ಶ್ರೀ ನೀನಾಸಂ ಸತೀಶ್, ಶ್ರೀ ಎನ್.ಎಸ್. ನಾಗಭೂಷಣ್ ಹಾಗೂ ಶ್ರೀ ವಾಸುಕಿ ವೈಭವ್ ಮೊದಲಾದವರಿದ್ದಾರೆ. (17 ಜನವರಿ 2026)




ಜಾತ್ರಾ ಮಹೋತ್ಸವದ ಅಂಗವಾಗಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ನಡೆದ ಕೃಷಿ ವಿಚಾರಸಂಕಿರಣ ಉದ್ಘಾಟನೆಯಲ್ಲಿ ಸಚಿವರಾದ ಡಾ. ಎಂ.ಸಿ. ಸುಧಾಕರ್‌ರವರು ಮಾತನಾಡುತ್ತಿರುವುದು. ಶ್ರೀ ಪಿ. ಮರಿಸ್ವಾಮಿ, ಶ್ರೀ ಹೆಚ್.ಎಂ. ಗಣೇಶ್‌ಪ್ರಸಾದ್, ಶ್ರೀ ಯಶವಂತರಾಯಗೌಡ ಪಾಟೀಲ್, ಶ್ರೀಮತಿ ಲಕ್ಷ್ಮೀ ಆರ್. ಹೆಬ್ಬಾಳ್ಕರ್, ವಾಟಾಳು ಮತ್ತು ಕನಕಪುರ ಕಿರಿಯ ಶ್ರೀಗಳು, ಡಾ. ಶರಣಪ್ರಕಾಶ್ ಆರ್. ಪಾಟೀಲ್, ಡಾ. ಪುಷ್ಪಾ ಅಮರನಾಥ್ ಹಾಗೂ ಶ್ರೀ ಎಂ.ಕೆ. ಸೋಮಶೇಖರ್‌ರವರಿದ್ದಾರೆ. (18 ಜನವರಿ 2026)




ಜಾತ್ರಾ ಮಹೋತ್ಸವದ ಅಂಗವಾಗಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ನಡೆದ ಕೃಷಿ ವಿಚಾರಸಂಕಿರಣ ಸಮಾರೋಪದಲ್ಲಿ ಬಿಜೆಪಿ ರಾಜ್ಯಾಧ್ಯಕ್ಷರು ಹಾಗೂ ಶಾಸಕರಾದ ಶ್ರೀ ಬಿ.ವೈ. ವಿಜಯೇಂದ್ರರವರು ಮಾತನಾಡುತ್ತಿರುವುದು. ಶ್ರೀ ಎಸ್. ಗುರುಸ್ವಾಮಿ, ಪ್ರೊ. ಎಂ. ಗಂಗಾಧರ್, ಶ್ರೀ ಸ್ವಾಮಿ ಪ್ರಭಾಕರಾನಂದ ಸರಸ್ವತಿ ಮಹಾರಾಜ್, ಶ್ರೀ ಅರ್ಜುನ್ ಅವಧೂತ ಗುರೂಜಿ, ಶ್ರೀ ಎಂ. ರುದ್ರೇಶ್, ಶ್ರೀ ಎಲ್. ನಾಗೇಂದ್ರ ಮೊದಲಾದವರಿದ್ದಾರೆ. (18 ಜನವರಿ 2026)




ಜಾತ್ರಾ ಮಹೋತ್ಸವದಲ್ಲಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ನಡೆದ ಭಜನಾಮೇಳ ಸಮಾರೋಪದಲ್ಲಿ ಶ್ರೀ ಅವಧೂತ ದತ್ತ ಪೀಠದ ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮಿಗಳು ಮಾತನಾಡುತ್ತಿರುವುದು. ಶ್ರೀ ಜನಾರ್ದನ, ಶ್ರೀ ಸುರೇಶ ಬಾಬು, ಹೂವಿನಹಡಗಲಿ, ಸಿಂದಗಿ ಮತ್ತು ಕನಕಪುರ ಶ್ರೀಗಳಿದ್ದಾರೆ. (19 ಜನವರಿ 2026)



ಸುತ್ತೂರು ಶ್ರೀಕ್ಷೇತ್ರದ ಕಪಿಲಾ ನದಿಯಲ್ಲಿ ವಿಜೃಂಭಣೆಯಿಂದ ಜರುಗಿದ ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ತೆಪ್ಪೋತ್ಸವಕ್ಕೆ ಪರಮಪೂಜ್ಯ ಜಗದ್ಗುರುಗಳವರು ಮತ್ತು ಆದಿಚುಂಚನಗಿರಿ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಚಾಲನೆ ನೀಡಲಾಯಿತು. (19 ಜನವರಿ 2026)



ಸುತ್ತೂರು ಶ್ರೀಕ್ಷೇತ್ರದ ಕಪಿಲಾ ನದಿಯಲ್ಲಿ ವಿಜೃಂಭಣೆಯಿಂದ ಜರುಗಿದ ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ತೆಪ್ಪೋತ್ಸವ (19 ಜನವರಿ 2026)



ಜಾತ್ರಾ ಮಹೋತ್ಸವದಲ್ಲಿ ಜೆಎಸ್ಎಸ್ ಸಂಚಾರಿ ಗ್ರಂಥಮಾಲೆಯನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಶ್ರೀ ಪಿ.ಎಂ. ನರೇಂದ್ರಸ್ವಾಮಿಯವರು ಉದ್ಘಾಟಿಸಿ ವೀಕ್ಷಿಸುತ್ತಿರುವುದು. ಚಿತ್ರದಲ್ಲಿ ಶ್ರೀ ಸಿ.ಕೆ. ರಾಮಮೂರ್ತಿಯವರಿದ್ದಾರೆ. (17 ಜನವರಿ 2026)




ಜಾತ್ರಾ ಮಹೋತ್ಸವದ ಅಂಗವಾಗಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಏರ್ಪಡಿಸಿದ್ದ ಸಾಂಸ್ಕೃತಿಕ ಮೇಳ ಮತ್ತು ವಸ್ತುಪ್ರದರ್ಶನ ಸಮಾರೋಪದಲ್ಲಿ ವಿಜೇತ ತಂಡಗಳಿಗೆ ಬಹುಮಾನ ವಿತರಿಸಲಾಯಿತು. ಶ್ರೀ ಸಂಜಯ್ ಪಾಟೀಲ್, ಶ್ರೀ ತೋಂಟದಾರ್ಯ, ಪ್ರೊ. ಜಿ. ಹೇಮಂತಕುಮಾರ್, ಶ್ರೀ ಟಿ.ಎಸ್. ಶ್ರೀವತ್ಸ, ಶ್ರೀ ಎ.ಆರ್. ಕೃಷ್ಣಮೂರ್ತಿ, ಶ್ರೀ ಎಸ್.ಟಿ. ಸೋಮಶೇಖರ್, ಪಾಂಡೋಮಟ್ಟಿ , ಹೆಬ್ಬಾಳು ಮತ್ತು ಸಾಲೂರು ಮಠದ ಶ್ರೀಗಳು, ಶ್ರೀ ಜಿ. ಮರಿಸ್ವಾಮಿ, ಶ್ರೀ ಹೆಚ್.ವಿ. ರಾಜೀವ್ ಹಾಗೂ ಶ್ರೀ ಟಿ.ಡಿ. ಸುಬ್ರಹ್ಮಣ್ಯರವರಿದ್ದಾರೆ. (20 ಜನವರಿ 2026)

## ಸರ್ವರ ಸಹಕಾರದಿಂದ ಜಯಂತಿ ಮಹೋತ್ಸವವು ಯಶಸ್ವಿಯಾಗಿದೆ




ಮಳವಳ್ಳಿಯಲ್ಲಿ ನೆರವೇರಿದ ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ 1066ನೆಯ ಜಯಂತಿ ಮಹೋತ್ಸವದ ಸಮಿತಿ ಹಾಗೂ ಕಾರ್ಯಕರ್ತರಿಗೆ ಸುತ್ತೂರಿನಲ್ಲಿ ನಡೆದ ಅಭಿನಂದನಾ ಕಾರ್ಯಕ್ರಮದಲ್ಲಿ ಪರಮಪೂಜ್ಯ ಜಗದ್ಗುರುಗಳವರು ಆಶೀರ್ವಚನ ನೀಡುತ್ತಿರುವುದು. (5 ಜನವರಿ 2026)

ಸರ್ವರ ಸಹಕಾರದಿಂದ ಮಳವಳ್ಳಿಯಲ್ಲಿ ನಡೆದ ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ 1066ನೆಯ ಜಯಂತಿ ಮಹೋತ್ಸವವು ಯಶಸ್ವಿಯಾಗಿದೆ ಎಂದು ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು ನುಡಿದರು.

ಸಮಿತಿ ಹಾಗೂ ಕಾರ್ಯಕರ್ತರಿಗೆ ಸುತ್ತೂರು ಶ್ರೀಕ್ಷೇತ್ರದಲ್ಲಿ ದಿನಾಂಕ 5.1.2026 ರಂದು ಆಯೋಜಿಸಿದ್ದ ಅಭಿನಂದನಾ ಕಾರ್ಯಕ್ರಮದ ದಿವ್ಯಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದ ಪರಮಪೂಜ್ಯರು, ಈ ಜಯಂತಿ ಮಹೋತ್ಸವವು ಇತಿಹಾಸದ ಪುಟಗಳಲ್ಲಿ ಸೇರಿದೆ. ಎಂದೂ ಮಾತನಾಡಿಸದಂತಹ ರಾಜಕೀಯ ವ್ಯಕ್ತಿಗಳು ಜಯಂತಿಯ ಕಾರ್ಯಕ್ರಮದಲ್ಲಿ ಪರಸ್ಪರ ಮುಖಾಮುಖಿಯಾಗಿ ಮಾತನಾಡಿಸಿದ್ದಾರೆ. ಪ್ರತಿದಿನ ಬೆಳಗಿನ ಜಾವದಲ್ಲಿ ನಡೆಯುತ್ತಿದ್ದ ಪ್ರಭಾತ್‌ಪೇರಿ ಕಾರ್ಯಕ್ರಮದಲ್ಲಿ ಬಡಾವಣೆಗಳ ಜನರು ತಮ್ಮ ಮನೆಯ ಕಾರ್ಯಕ್ರಮದಂತೆ ಶ್ರದ್ಧಾ ಭಕ್ತಿ, ಶಿಸ್ತು ಮತ್ತು ಆಸಕ್ತಿಯಿಂದ ಭಾಗವಹಿಸಿ ಸಂಭ್ರಮಿಸಿ, ಹೃದಯ ಶ್ರೀಮಂತಿಕೆಯನ್ನು ಮೆರೆದಿದ್ದಾರೆ ಎಂದು ತಿಳಿಸಿದರು.

ಕನಕಪುರ ಶ್ರೀ ದೇಗುಲಮಠದ ಕಿರಿಯ ಶ್ರೀಗಳಾದ ನಿ.ಪ್ರ.ಸ್ವ ಪೂಜ್ಯ ಡಾ. ಶ್ರೀ ಚನ್ನಬಸವಸ್ವಾಮಿಗಳವರು ಶುಭಸಂದೇಶ ನೀಡಿ, ಪ್ರತಿಯೊಬ್ಬರ ಶ್ರಮದಿಂದ ಈ ಜಯಂತಿ ಮಹೋತ್ಸವವು ಅತ್ಯಂತ ಅರ್ಥಪೂರ್ಣವಾಗಿ, ಅಚ್ಚುಕಟ್ಟಾಗಿ ಎಲ್ಲರ ಪರಿಶ್ರಮದಿಂದ ನಡೆದಿರುವುದರ ಹಿಂದೆ ಪ್ರತಿಯೊಬ್ಬ ಸಹಕಾರ ಅತ್ಯಮೂಲ್ಯವಾಗಿದೆ ಎಂದರು.

ಬೆಂಗಳೂರಿನ ಶ್ರೀ ಆದಿಚುಂಚನಗಿರಿ ಶಾಖಾ ಮಠದ ಶ್ರೀ ಸೌಮ್ಯನಾಥ ಸ್ವಾಮಿಗಳು ಶುಭಸಂದೇಶ ನೀಡಿ, ಭಾರತ ದೇಶವು ಪವಿತ್ರ ದೇಶವಾಗಿದೆ. ಮನುಕುಲದಲ್ಲಿ ಸಾರ್ಥಕ ಪಡೆಯಬೇಕಾದರೆ ಮಠಮಾನ್ಯಗಳ ಸೇವೆ ಅನನ್ಯ. ಜಾತ್ಯತೀತವಾಗಿ ಮಠಗಳು ಸೇವೆಯನ್ನು ನೀಡುತ್ತಿವೆ. ಸಂಸ್ಕೃತಿ, ಧಾರ್ಮಿಕತೆ ಉಳಿಸಿ ಬೆಳೆಸುವಲ್ಲಿ ಮಠಗಳ ಪಾತ್ರ ಅತ್ಯಮೂಲ್ಯವಾಗಿವೆ. ಆದರೆ ಯುವಕರು ಇಂದಿನ ದಿನಗಳಲ್ಲಿ ಸಂಸ್ಕೃತಿ, ಮಾನವೀಯ ಮೌಲ್ಯಗಳನ್ನು ಮರೆಯುತ್ತಿದ್ದಾರೆ. ಈ ಜಯಂತಿಯ ಮೂಲಕ ಸುತ್ತೂರು ಶ್ರೀಮಠವು ಮಾನವ ಜನಾಂಗಕ್ಕೆ ಉತ್ತಮ ಸಂದೇಶಗಳನ್ನು ನೀಡುತ್ತಿದೆ. ಅಧಿಕಾರ, ಹಣ, ಐಶ್ವರ್ಯ ಇವು ಯಾವುವು ಕೂಡ ಶಾಶ್ವತವಲ್ಲ. ಸಮಾಜಕ್ಕೆ ನೀಡಿದಂತಹ ನಿಸ್ವಾರ್ಥ ಸೇವೆಯು ಜನಮಾನಸದಲ್ಲಿ ಶಾಶ್ವತವಾಗಿ ಉಳಿಯುತ್ತದೆ. ಉತ್ತಮ ಕೆಲಸಗಳನ್ನು ಮಾಡಿದರೆ, ದೇವರೆ ನಮ್ಮನ್ನು ಹುಡಿಕಿಕೊಂಡು ಬರುತ್ತಾರೆ. ಸುತ್ತೂರು ಶ್ರೀಮಠವು ಶಿಕ್ಷಣ ಕ್ಷೇತ್ರದಲ್ಲಿ ದೊಡ್ಡ ಕ್ರಾಂತಿಯನ್ನೆ ಮಾಡಿದೆ ಎಂದರು.

ಮಾಜಿ ಸಚಿವರು ಹಾಗೂ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಅಧ್ಯಕ್ಷರು, ಶಾಸಕರಾದ ಶ್ರೀ ಪಿ.ಎಂ. ನರೇಂದ್ರಸ್ವಾಮಿಯವರು ಮಾತನಾಡಿ, ತಮಗೆ ಹಂಚಿದಂತಹ ಕಾರ್ಯಗಳನ್ನು ಪ್ರಾಮಾಣಿಕತೆ, ಶ್ರದ್ಧೆಯಿಂದ ನಿರ್ವಹಿಸಿದ್ದಾರೆ. ಮಳವಳ್ಳಿ ತಾಲ್ಲೂಕಿನಲ್ಲಿ ಇಂತಹ ಕಾರ್ಯಕ್ರಮಗಳು ಮುಂದೆ ನಡೆಯುತ್ತದೆಯೋ ಗೊತ್ತಿಲ್ಲ ಎಂಬಂತೆ ಬಹಳ ಅಚ್ಚುಕಟ್ಟಾಗಿ ಪರಮಪೂಜ್ಯರ ಆಶೀರ್ವಾದದಿಂದ ಅರ್ಥಪೂರ್ಣವಾಗಿ ಜರುಗಿದೆ. ಜನರಲ್ಲಿ ಹೊಂದಾಣಿಕೆ, ಸಮಾನತೆ, ಸಂಸ್ಕೃತಿ, ಮಾನವೀಯ ಮೌಲ್ಯಗಳು ಬೆಳೆಯುವಲ್ಲಿ ಇಂತಹ ಕಾರ್ಯಕ್ರಮಗಳು ಸಹಕಾರಿಯಾಗಿವೆ. ಪರಮ ಪೂಜ್ಯರ ಆಶೀರ್ವಾದವಿದ್ದರೆ, ಒಣಹುಲ್ಲು ಕೂಡ ಚಿಗುರುತ್ತದೆ ಎಂಬುದಕ್ಕೆ ಈ ಜಯಂತಿ ಮಹೋತ್ಸವವು ಸಾಕ್ಷಿಯಾಗಿದೆ. ಶ್ರೀಗಳವರ ದೂರದೃಷ್ಟಿ ಮತ್ತು ದಣಿವರಿಯದ ಕಾಯಕದಿಂದ ಶ್ರೀಮಠವು ವಿಶ್ವವಿಖ್ಯಾತಿ ಪಡೆದಿದೆ. ಜಯಂತಿ ಮಹೋತ್ಸವದ ಸ್ವಾಗತ ಸಮಿತಿಯ ಅಧ್ಯಕ್ಷರನ್ನಾಗಿ ಆಯ್ಕೆಮಾಡಿ, ಸೇವೆ ಮಾಡಿರುವುದಕ್ಕೆ ಅವಕಾಶ ಸಿಕ್ಕಿದ್ದು ನನ್ನ ಪುಣ್ಯ ಎಂದು ನುಡಿದರು.

ಮಾಜಿ ಸಚಿವರಾದ ಶ್ರೀ ಸಿ.ಎಸ್. ಪುಟ್ಟರಾಜುರವರು ಮಾತನಾಡಿ, ಸುತ್ತೂರು ಮಠಕ್ಕೂ ನನಗೂ ಅವಿನಾಭಾವ ಸಂಬಂಧವಿದೆ. ತನ್ನ ಕ್ಷೇತ್ರದಲ್ಲಿ ಮಾತ್ರ ಜಯಂತಿ ಮಹೋತ್ಸವವನ್ನು ಆಚರಿಕೊಂಡರು ಎಂದು ಜನರು ಹೇಳುತ್ತಿದ್ದರು. ಆದರೆ ಜಯಂತಿ ಮಹೋತ್ಸವವು ಮಳವಳ್ಳಿಯಲ್ಲಿ ಅದ್ದೂರಿಯಾಗಿ ನಡೆದಿರುವುದು ನನಗೆ ತುಂಬಾ ಸಂತೋಷವನ್ನುಂಟು ಮಾಡಿದೆ ಎಂದರು.

ಮಾಜಿ ಶಾಸಕರಾದ ಡಾ. ಕೆ. ಅನ್ನದಾನಿರವರು ಮಾತನಾಡಿ, ಮಳವಳ್ಳಿಗೆ ರಾಷ್ಟ್ರಪತಿಗಳು ಆಗಮಿಸಿದ್ದುದು ಇತಿಹಾಸವನ್ನು ಸೃಷ್ಟಿಸಿದೆ. ಈ ಜಯಂತಿ ಮಹೋತ್ಸವವು ಯಶಸ್ವಿಯಾಗಿ ನಡೆದಿರುವುದಕ್ಕೆ ಅಭಿನಂದನಾ ಸಮಾರಂಭವನ್ನು ಆಯೋಜನೆ ಮಾಡಿರುವುದು ಪರಮಪೂಜ್ಯರಲ್ಲಿರುವ ಹೃದಯ ಶ್ರೀಮಂತಿಕೆಯನ್ನು ತಿಳಿಸುತ್ತದೆ. ಇಂತಹ ಕಾರ್ಯಕ್ರಮಗಳು ದೇಶದಾದ್ಯಂತ ನಡೆಯಬೇಕೆಂಬುದು ನನ್ನ ಆಶಯ ಎಂದರು.

ಮಂಡ್ಯ ಜಿಲ್ಲಾಧಿಕಾರಿಗಳಾದ ಶ್ರೀ ಕುಮಾರ್‌ರವರು ಮಾತನಾಡಿ, ಮಳೆ ನಿಂತರೂ ಮಳೆ ಹನಿ ನಿಂತಿಲ್ಲ ಎಂಬ ನುಡಿಯಂತೆ ಇಂದಿಗೂ ತಾಲ್ಲೂಕಿನಾದ್ಯಂತ ಜನರು ಜಯಂತಿ ಕಾರ್ಯಕ್ರಮದ ಬಗ್ಗೆ ಮಾತನಾಡಿಕೊಳ್ಳುತ್ತಿದ್ದಾರೆ. ಈ ಕಾರ್ಯಕ್ರಮದ ಯಶಸ್ಸಿನ ಹಿಂದೆ ಬಹಳಷ್ಟು ಜನರ ಪರಿಶ್ರಮವಿದೆ. ಪೂಜ್ಯ ಶ್ರೀಗಳವರ ಸಲಹೆ ಮತ್ತು ಮಾರ್ಗದರ್ಶನದಂತೆ ಅಚ್ಚುಕಟ್ಟಾಗಿ ನಡೆದಿದೆ. ಮಂಡ್ಯ ಜಿಲ್ಲೆಯ ಜನರು ನೀರು ಕೇಳಿದರೆ, ಪಾನಕ ಕೊಡುವಂತವರು ಎನ್ನುವಂತೆ ಮಳವಳ್ಳಿಯಲ್ಲಿ ಜಯಂತಿ ಮಹೋತ್ಸವವನ್ನು ಆಚರಿಸಿ ಸೈ ಎನಿಸಿಕೊಂಡಿದ್ದಾರೆ. ಸಮಾಜಕ್ಕೆ ಜ್ಞಾನದ ಬೆಳಕು, ಶಾಂತಿಯನ್ನು ಬೋಧಿಸಿದಂತಹ ಮಹಾನ್ ಸಂತರು ಶಿವರಾತ್ರೀಶ್ವರರು ಎಂದು ನುಡಿದರು.

ಕಾರ್ಯಕ್ರಮದಲ್ಲಿ ಮಳವಳ್ಳಿ ತಾಲ್ಲೂಕಿನ ಹರಗುರು ಚರಮೂರ್ತಿಗಳು, ಮಾಜಿ ಉಪಸಭಾಪತಿಗಳಾದ ಶ್ರೀ ಮರಿತಿಬ್ಬೇಗೌಡ, ಮಾಜಿ ಜಿಲ್ಲಾ ಪಂಚಾಯತ್‌ನ ಅಧ್ಯಕ್ಷರಾದ ಶ್ರೀ ಮರಿಗೌಡ, ಉದ್ಯಮಿಗಳಾದ ಶ್ರೀ ಎಂ.ಆರ್. ಉಮಾಪತಿ, ಶ್ರೀ ಎಸ್. ನಿಶಾಂತ್, ಬಿಜೆಪಿ ಮುಖಂಡರಾದ ಶ್ರೀ ಎಸ್. ಸಚ್ಚಿದಾನಂದ, ಎಡಿಜಿಪಿ ಶ್ರೀ ನಂಜುಂಡಸ್ವಾಮಿ, ಎ.ಡಿ.ಸಿ ಶ್ರೀ ಶಿವಾನಂದಮೂರ್ತಿ, ತಹಶೀಲ್ದಾರ್ ಶ್ರೀ ಲೋಕೇಶ್, ಪುರಸಭೆಯ ಶ್ರೀಮತಿ ನಾಗರತ್ನ ಮತ್ತು ಅಧಿಕಾರಿಗಳು, ಚೆಸ್ಕಾಂ, ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳು, ಜೆಎಸ್‌ಎಸ್ ಮಹಾವಿದ್ಯಾಪೀಠದ ಅಧಿಕಾರಿಗಳು, ಮಳವಳ್ಳಿ ತಾಲ್ಲೂಕಿನ ಸಾವಿರಾರು ಕಾರ್ಯಕರ್ತರು, ಸಮಿತಿಯ ಸದಸ್ಯರು ಹಾಗೂ ಭಕ್ತರು ಉಪಸ್ಥಿತರಿದ್ದರು.

ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಡಾ. ಸಿ. ಸೋಮಶೇಖರ್ ಅಭಿನಂದನಾ ನುಡಿಗಳನ್ನಾಡಿದರು. ಶಾಲಾ ಮಕ್ಕಳು ಹಾಗೂ ಸಂಗೀತ ಶಿಕ್ಷಕರು ಪ್ರಾರ್ಥನೆ ಸಲ್ಲಿಸಿದರು. ಶ್ರೀ ಪಿ.ಎಂ. ಮಹದೇವಸ್ವಾಮಿ ಸ್ವಾಗತಿಸಿದರು. ಶ್ರೀ ಬಿ. ನಿರಂಜನಮೂರ್ತಿ ವಂದಿಸಿದರು. ಡಾ. ರೇಚಣ್ಣ ನಿರೂಪಿಸಿದರು.

## ಚಿನ್ನದ ಪದಕ ವಿಜೇತರು

### ಕು. ಕೀರ್ತನಾ



**ನಂಜನಗೂಡಿನ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನ** ವಿಜ್ಞಾನ ನಿಕಾಯದ ಪದವಿ ವಿದ್ಯಾರ್ಥಿನಿ ಕು. ಕೀರ್ತನಾ ಇವರು ರಸಾಯನಶಾಸ್ತ್ರ ವಿಷಯದಲ್ಲಿ ವ್ಯಾಸಂಗ ಮಾಡಿ 2400 ಅಂಕಗಳಿಗೆ 2276 ಅಂಕಗಳನ್ನು ಪಡೆದು ದಿನಾಂಕ 5.1.2026ರಂದು ನಡೆದ ಮೈಸೂರು ವಿಶ್ವವಿದ್ಯಾನಿಲಯು ಘಟಿಕೋತ್ಸವ ಸಮಾರಂಭದಲ್ಲಿ ಚಿನ್ನದ ಪದಕ ಪಡೆದು ಕಾಲೇಜಿಗೆ ಕೀರ್ತಿ ತಂದಿದ್ದಾರೆ. ದಿನಾಂಕ 13.1.2026ರಂದು ಕಾಲೇಜಿನಲ್ಲಿ ಕು. ಕೀರ್ತನಾರವರನ್ನು ಅಭಿನಂದಿಸಲಾಯಿತು. ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಶ್ರೀ ಕೆ.ಎನ್. ಶಿವಕುಮಾರ್ ಮಾತನಾಡಿ ಸಾಧನೆಯ ಹಾದಿಯಲ್ಲಿ ಸಾಗುವ ಪ್ರತಿಯೊಬ್ಬ ಸಾಧಕರಿಗೆ ಯಶಸ್ಸು ಎನ್ನುವುದು ಅವಿರತ ಶ್ರಮದಿಂದ ಸಿದ್ಧಿಯಾಗುತ್ತದೆ. ಈ ನಿಟ್ಟಿನಲ್ಲಿ ಕು. ಕೀರ್ತನಾ ಗುರಿಯನ್ನು ಮುಟ್ಟಿದ್ದಾರೆ ಎಂದರು. ರಸಾಯನಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಡಾ. ಬಿ.ಕೆ. ಕೆಂಡಗಣ್ಣಸ್ವಾಮಿ, ಸಾಧಕ ವಿದ್ಯಾರ್ಥಿನಿಯ ಶಿಸ್ತು, ಸಮಯ ಪ್ರಜ್ಞೆ ಹಾಗೂ ಕಲಿಕಾಸಕ್ತಿಯ ಬಗ್ಗೆ ಮೆಚ್ಚುಗೆಯ ಮಾತುಗಳನ್ನಾಡಿದರು. ಕಾಲೇಜಿನ ಪ್ರಾಂಶುಪಾಲರಾದ ಡಾ. ಸಿ.ಎಸ್. ಹೊನ್ನೇಗೌಡರವರು ಅನುಭವದಿಂದ ಗಳಿಸಿದ ಜ್ಞಾನ ವಿವೇಕ ಕಲಿಸುತ್ತದೆ, ಕಲಿತ ವಿವೇಕ ಸರಳತೆಯನ್ನು ರೂಪಿಸುತ್ತದೆ, ಸರಳತೆ ವಿನಮ್ರತೆಯ ಅರಿವನ್ನು ಮೂಡಿಸುತ್ತದೆ. ಈ ಎಲ್ಲಾ ಸದ್ಗುಣಗಳು ಕೀರ್ತಿ ತಂದಿರುವ ಕೀರ್ತನಾಳ ವ್ಯಕ್ತಿತ್ವದಲ್ಲಿ ರೂಪುಗೊಂಡಿದ್ದವು. ಶ್ರದ್ಧೆ, ವಿವೇಕ ಹಾಗೂ ವಿನಮ್ರತೆಯ ಆಧಾರದಲ್ಲಿ ಕಲಿತ ವಿದ್ಯಾರ್ಥಿನಿ ಸಾಧನೆಯ ಹಾದಿಯಲ್ಲಿ ಸಾಗಿ ಕಾಲೇಜಿನ ವಿದ್ಯಾರ್ಥಿಗಳಿಗೆ ಮಾದರಿಯಾಗಿದ್ದಾರೆ. ವಿದ್ಯಾರ್ಥಿಗಳು ಸಾಧನೆಯ ಹಾದಿಯಲ್ಲಿ ಸಾಗಿ ಶಿಕ್ಷಣ ಸಂಸ್ಥೆಗೆ, ಪೋಷಕರಿಗೆ ಹಾಗೂ ದೇಶಕ್ಕೆ ಕೀರ್ತಿ ತರಬೇಕು ಎಂದು ಆಶಿಸಿದರು. ಕನ್ನಡ ವಿಭಾಗದ ಮುಖ್ಯಸ್ಥರಾದ ಶ್ರೀಮತಿ ಎಂ.ಎನ್. ಜಯಶೀಲ ಕಾರ್ಯಕ್ರಮ ನಿರೂಪಿಸಿದರು.

### ಕು. ಬಿ. ಚಂದನ



**ಕೊಳ್ಳೇಗಾಲದ ಜೆಎಸ್‌ಎಸ್ ಕಾಲೇಜು** ವಿದ್ಯಾರ್ಥಿನಿ **ಕು. ಬಿ. ಚಂದನರವರು** 2024–25ನೆಯ ಸಾಲಿನ ಮೈಸೂರು ವಿಶ್ವವಿದ್ಯಾನಿಲಯದ ಬಿ.ಎ. ಪದವಿ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಗಳಿಸಿ 106ನೆಯ ಘಟಿಕೋತ್ಸವದಲ್ಲಿ ಒಂದು ಚಿನ್ನದ ಪದಕ, ಎರಡು ನಗದು ಬಹುಮಾನಗಳನ್ನು ಪಡೆದಿದ್ದಾರೆ.

## ದೂರದರ್ಶಕದ ಕಾರ್ಯಾಗಾರ




**ಸುತ್ತೂರಿನ ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ಜ್ಞಾನಸಂಪನ್ಮೂಲ ಕೇಂದ್ರದ ವತಿಯಿಂದ** ಹಮ್ಮಿಕೊಂಡಿದ್ದ ದೂರದರ್ಶಕದ ಕಾರ್ಯಾಗಾರದಲ್ಲಿ ಸುತ್ತೂರಿನ ಜೆಎಸ್‌ಎಸ್ ಪ್ರೌಢಶಾಲೆಯ 50 ವಿದ್ಯಾರ್ಥಿಗಳು ಭಾಗವಹಿಸಿದ್ದರು. ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಭರತ್‌ರವರು ದೂರದರ್ಶಕವನ್ನು ತಯಾರಿಸುವ ವಿಧಾನ, ಅದನ್ನು ಬಳಸುವ ಬಗೆ, ಖಗೋಳ ವಿಜ್ಞಾನದ ವಿಷಯ, ನಕ್ಷತ್ರಗಳ ಹೆಸರು, ನಕ್ಷತ್ರಪುಂಜ, ಅವುಗಳ ಹೆಸರು ಹಾಗೂ ಅದನ್ನು ಗುರುತಿಸುವ ವಿಧಾನವನ್ನು ವಿದ್ಯಾರ್ಥಿಗಳಿಗೆ ವಿವರಿಸಿದರು. ಕಾರ್ಯಾಗಾರದಲ್ಲಿ ಬಳಸಿರುವ ದೂರದರ್ಶಕವು ವಕ್ರೀಭವಿತ ದೂರದರ್ಶಕವಾಗಿದ್ದು ಇದರ ದೃಶ್ಯಂಗಾ ಮಸೂರದ ವ್ಯಾಸವು 40 ಮಿ.ಮೀ., 500ಮಿ.ಮೀ. ಸಂಗಮ ದೂರವನ್ನು ಹೊಂದಿವೆ. ಇದರ ಸಹಾಯದಿಂದ ಆಕಾಶ ಕಾಯಗಳಾದ ಚಂದ್ರ, ನಕ್ಷತ್ರ ಮತ್ತು ಗ್ರಹಗಳನ್ನು 20 ಪಟ್ಟು ದೊಡ್ಡದಾಗಿ ತೋರಿಸುವ ಸಾಮರ್ಥ್ಯ ಇದಕ್ಕಿದೆ. ದೂರದರ್ಶಕದ ಬಿಡಿಭಾಗಗಳನ್ನು ಸುಲಭವಾಗಿ ತೆಗೆದು ಬೇಕಾದಾಗ ಜೋಡಿಸಿಕೊಳ್ಳಬಹುದು. ಒಟ್ಟಾರೆ 50 ದೂರದರ್ಶಕಗಳು ಅದರ ಜೊತೆಗೆ ಆಕಾಶ ಕಾಯಗಳನ್ನು ಗುರುತಿಸುವ 50 ಕೈಪಿಡಿಗಳನ್ನು ಮಕ್ಕಳು ಪಡೆದಿರುತ್ತಾರೆ.

**ಜೆಎಸ್‌ಎಸ್ ವಾರ್ತಾಪತ್ರಕ್ಕೆ ಕಳುಹಿಸುವ ವರದಿಗಳು ಮತ್ತು ಛಾಯಚಿತ್ರಗಳನ್ನು ಕಡ್ಡಾಯವಾಗಿ varthapathra@jssonline.org ಗೆ ಮಾತ್ರ ಕಳುಹಿಸುವುದು.**

**ಬೇರೆ ಯಾವುದೇ ಇಮೇಲ್‌ಗೆ ಕಳುಹಿಸಬಾರದು.**

**ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ**
**ಪ್ರಕಟಣ ವಿಭಾಗ, ಜೆಎಸ್‌ಎಸ್ ಮಹಾವಿದ್ಯಾಪೀಠ, ಮೈಸೂರು**
**ದೂರವಾಣಿ : 9663151846, 9480771995**
**8861654566, 9964161363**

## ಅಕ್ಷರ ಮತ್ತು ಅನ್ನ ದಾಸೋಹಕ್ಕೆ ಜೆಎಸ್‌ಎಸ್ ಸಂಸ್ಥೆಯ ಕೊಡುಗೆ ಅಪಾರ




ಮೈಸೂರಿನ ಸರಸ್ವತಿಪುರಂನಲ್ಲಿರುವ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ನಡೆದ ಹಿರಿಯ ವಿದ್ಯಾರ್ಥಿನಿಯರ ಸಭೆಯಲ್ಲಿ ಶಿವಮೊಗ್ಗದ ಪಿಇಎಸ್ ಟ್ರಸ್ಟ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಶ್ರೀಮತಿ ಎಸ್.ವೈ. ಉಮಾದೇವಿಯವರು ಮಾತನಾಡುತ್ತಿರುವುದು. (10 ಜನವರಿ 2026)

ಜೆಎಸ್‌ಎಸ್ ಸಂಸ್ಥೆಯ ಅಕ್ಷರ ಮತ್ತು ಅನ್ನದಾಸೋಹಕ್ಕೆ ಮಹತ್ವವಾದ ಕೊಡುಗೆಯನ್ನು ನೀಡಿದೆ ಎಂದು ಶಿವಮೊಗ್ಗ ಪಿಇಎಸ್ ಟ್ರಸ್ಟ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಶ್ರೀಮತಿ ಎಸ್.ವೈ. ಉಮಾದೇವಿಯವರು ಅಭಿಪ್ರಾಯಪಟ್ಟರು.

**ಮೈಸೂರಿನ ಸರಸ್ವತಿಪುರಂನಲ್ಲಿರುವ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ** ದಿನಾಂಕ 10.1.2026ರಂದು ನಡೆದ ಹಿರಿಯ ವಿದ್ಯಾರ್ಥಿನಿಯರ ಸಭೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು. ಇಲ್ಲಿ ವ್ಯಾಸಂಗ ಮಾಡಿದ ಕ್ಷಣಗಳು ಅವಿಸ್ಮರಣೀವಾದುದು. ನಾನು ಓದಿದ ಈ ಕಾಲೇಜು ನನ್ನ ಜೀವನದಲ್ಲಿ ಬಹಳಷ್ಟು ಅವಕಾಶಗಳನ್ನು ನೀಡಿದೆ. ಜೆಎಸ್‌ಎಸ್ ಶಿಕ್ಷಣ ಸಂಸ್ಥೆ ಅಕ್ಷರ ಮತ್ತು ಅನ್ನ ದಾಸೋಹವನ್ನು ನೀಡುವ ಮೂಲಕ ಸಮಾಜಕ್ಕೆ ಗುರುತರ ಕೊಡುಗೆಯನ್ನು ನೀಡಿದೆ. ಹೆಣ್ಣು ಮಕ್ಕಳಿಗೆ ವಸತಿ ನಿಲಯ ಒದಗಿಸುವುದರ ಜೊತೆಗೆ ವಿದ್ಯಾವಂತರಾಗಲು ಈ ಕಾಲೇಜು ಶ್ರಮಿಸುತ್ತಿದೆ. ಸಮಾಜದಲ್ಲಿ ಗುರುತರ ಸ್ಥಾನ ಹೊಂದಲು ಕಾಲೇಜು ಸಹಕಾರಿಯಾಗಿದೆ ಎಂದರು.

ಮುಖ್ಯ ಅತಿಥಿಗಳಾಗಿ ಆಗಮಿಸಿ ಮಾತನಾಡಿದ ನಿವೃತ್ತ ಪ್ರಾಧ್ಯಾಪಕರಾದ ಡಾ. ಎಚ್.ಎಂ. ಕಲಾಶ್ರೀಯವರು, ನಾನು ಈ ಕಾಲೇಜಿನ ಹಿರಿಯ ವಿದ್ಯಾರ್ಥಿ ಎನ್ನಲು ಹೆಮ್ಮೆಯಾಗುತ್ತಿದೆ. ಗುರು ಮತ್ತು ಶಿಷ್ಯರ ಪರಂಪರೆಯನ್ನು ಈ ಮಹಿಳಾ ಕಾಲೇಜು ಕಲಿಸಿದೆ. ಪರಮಪೂಜ್ಯರು ಈ ಮಹಿಳಾ ಕಾಲೇಜು ತೆರೆಯಲು ಅಪಾರ ಶ್ರಮ ವಹಿಸಿದ್ದಾರೆ ಎಂದರು.

ಹಿರಿಯ ವಕೀಲರಾದ ಶ್ರೀಮತಿ ಎಂ.ಎನ್. ಸುಮನ ರವರು ತಾವು ರಾಜ್ಯಮಟ್ಟದಲ್ಲಿ ಚರ್ಚಾಪಟುವಾಗಿ ಬೆಳೆಯಲು ಈ ಕಾಲೇಜು ಸಹಕರಿಸಿದೆ. ನನ್ನ ಶೈಕ್ಷಣಿಕ ಬೆಳವಣಿಗೆಯಲ್ಲಿ ಮಹತ್ತರ ಪಾತ್ರ ವಹಿಸಿದೆ. ಜೆಎಸ್‌ಎಸ್ ಸಂಸ್ಥೆ ನಮಗೆ ಜಾತ್ಯತೀತ ಮನೋಭಾವನೆಯ ದೃಷ್ಟಿಯನ್ನು ಕಲಿಸಿಕೊಟ್ಟಿದೆ ಎಂದರು.

ಕೆಎಎಸ್ ಅಧಿಕಾರಿ ಶ್ರೀಮತಿ ಜೆ.ಪಿ. ಸುಷ್ಮಾರವರು, ತಮಗೆ ಮಹಿಳಾ ಕಾಲೇಜು ಸಂಸ್ಕೃತಿ ಮತ್ತು ಸಂಸ್ಕಾರಗಳೆಲ್ಲವನ್ನು ಕಲಿಸಿಕೊಟ್ಟಿದೆ. ತಾವು ಭಾಷೆಯ ಮೇಲಿನ ಹಿಡಿತ ಮತ್ತು ವಿಷಯ ಮಂಡನೆಯ

ಕೌಶಲ್ಯಗಳೆಲ್ಲವನ್ನು ಕಾಲೇಜಿನಿಂದ ಕಲಿತೆ ಎಂದು ಹೇಳಿದರು.

ಪವರ್ ಟಿವಿ ಸುದ್ದಿವಾಹಿನಿಯ ನಿರೂಪಕರ ವಿಭಾಗದ ಮುಖ್ಯಸ್ಥರಾದ ಶ್ರೀಮತಿ ಸಿಂಧೂರ ಗಂಗಾಧರರವರು ನಾನು ಈ ಕಾಲೇಜಿನ ವಿದ್ಯಾರ್ಥಿ ಎನ್ನಲು ಹೆಮ್ಮೆ ಇದೆ. ವಿದ್ಯಾರ್ಥಿಗಳು ಸ್ಪಷ್ಟ ಗುರಿ ಹೊಂದಿ ಸತತ ಪರಿಶ್ರಮದಿಂದ ಬೆಳವಣಿಗೆಯನ್ನು ಕಾಣಬೇಕು. ಉತ್ತಮ ಶಿಕ್ಷಣವನ್ನು ಜೆಎಸ್‌ಎಸ್ ಸಂಸ್ಥೆಯು ನೀಡುವ ಮೂಲಕ ಸಮಾಜದ ಏಳ್ಗೆಗಾಗಿ ಶ್ರಮಿಸುತ್ತಿದೆ ಎಂದರು.

ಪ್ರಾಚಾರ್ಯರಾದ ಡಾ. ರೇಚಣ್ಣ ಮಾತನಾಡಿ, ನಮ್ಮ ಕಾಲೇಜು ಮೈಸೂರಿನ ಹೃದಯ ಭಾಗದಲ್ಲಿದ್ದು, ಶೈಕ್ಷಣಿಕ ಅಭಿವೃದ್ಧಿಯುತ್ತ ಮುನ್ನುಗ್ಗುತ್ತಿದೆ. ಹಿರಿಯ ವಿದ್ಯಾರ್ಥಿನಿಯರು ನಮ್ಮ ಕಾಲೇಜಿನ ರಾಯಭಾರಿಗಳಾಗಿ ಕಾಲೇಜಿನ ಅಭಿವೃದ್ಧಿಗೆ ಸಹಕರಿಸಬೇಕು ಎಂದರು.

ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾಲೇಜು ಶಿಕ್ಷಣ ವಿಭಾಗದ ನಿರ್ದೇಶಕರಾದ ಪ್ರೊ. ಮೊರಬದ ಮಲ್ಲಿಕಾರ್ಜುನರವರು ಮಾತನಾಡಿ, ಪರಮಪೂಜ್ಯ ರಾಜೇಂದ್ರ ಶ್ರೀಗಳವರು ಮಹಿಳೆಯರ ಸಬಲೀಕರಣಕ್ಕೆ ಮಹತ್ತರವಾದ ಕೊಡುಗೆಗಳನ್ನು ನೀಡಿದ್ದಾರೆ. ಮಹಿಳೆಯು ಶಿಕ್ಷಿತರಾದರೆ ಸಮಾಜವು ಶಿಕ್ಷಿತವಾದಂತೆ. ಗುರು ಶಿಷ್ಯರ ಸಂಬಂಧ ಹಸು ಕರುವಿನ ಸಂಬಂಧದಂತೆ ಶ್ರೇಷ್ಠವಾದದ್ದು ಎಂದರು.

ಹಿರಿಯ ವಿದ್ಯಾರ್ಥಿನಿಯರು ಕಾಲೇಜಿನ ಬಗ್ಗೆ ತಮ್ಮ ಪ್ರೀತಿಯ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು. ಸಭಾ ಕಾರ್ಯಕ್ರಮದ ನಂತರ ಹಿರಿಯ ಮತ್ತು ಕಿರಿಯ ವಿದ್ಯಾರ್ಥಿನಿಯರಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು.

ಕು. ಧಾತ್ರಿ ಹಾಗೂ ವೃಂದದವರು ಪ್ರಾರ್ಥಿಸಿದರು. ಕನ್ನಡ ವಿಭಾಗದ ಮುಖ್ಯಸ್ಥರಾದ ಶ್ರೀ ಆರ್.ಎಸ್. ಕುಮಾರ್ ಸ್ವಾಗತಿಸಿದರು. ಭೌತಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಶ್ರೀಮತಿ ಸೌಮ್ಯ ವಂದಿಸಿದರು. ಕನ್ನಡ ವಿಭಾಗದ ಸಹಾಯಕ ಪ್ರಾಧ್ಯಾಪಕಿ ಶ್ರೀಮತಿ ಜೆ. ಪುಷ್ಪಲತಾ ಕಾರ್ಯಕ್ರಮ ನಿರೂಪಿಸಿದರು.

## ರಾಷ್ಟ್ರಮಟ್ಟಕ್ಕೆ ಆಯ್ಕೆ



ಕರ್ನಾಟಕ ಸರ್ಕಾರದ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ರಾಜ್ಯ ಶಿಕ್ಷಣ ಮತ್ತು ಸಂಶೋಧನಾ ತರಬೇತಿ ಇಲಾಖೆ, ಉರ್ದು ಮತ್ತು ಇತರೆ ಭಾಷಾ ಅಲ್ಪಸಂಖ್ಯಾತ ಶಾಲೆಗಳ ನಿರ್ದೇಶನಾಲಯ, ಆಯುಕ್ತರ ಕಚೇರಿ ಮತ್ತು ವಿಶ್ವೇಶ್ವರಯ್ಯ ಕೈಗಾರಿಕಾ ಮತ್ತು ತಾಂತ್ರಿಕ ವಸ್ತು ಸಂಗ್ರಹಾಲಯ ಇವರುಗಳ ಸಹಯೋಗದಲ್ಲಿ

ಧಾರವಾಡದ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಯ ವತಿಯಿಂದ ದಿನಾಂಕ 6.1.2026 ರಂದು ರಾಜ್ಯಮಟ್ಟದ ವಿಜ್ಞಾನ ವಸ್ತು ಪ್ರದರ್ಶನ ಸ್ಪರ್ಧೆಯನ್ನು ಪ್ರೌಢಶಾಲಾ ಶಿಕ್ಷಕರಿಗೆ ಧಾರವಾಡದಲ್ಲಿ ಆಯೋಜಿಸಲಾಗಿತ್ತು.

ಈ ಸ್ಪರ್ಧೆಯಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ಭೌತಶಾಸ್ತ್ರ, ರಸಾಯನಶಾಸ್ತ್ರ, ಗಣಿತ, ಇಂಜಿನಿಯರಿಂಗ್ ತಂತ್ರಜ್ಞಾನ, ಕೃತಕ ಬುದ್ಧಿಮತ್ತೆ, ರೋಬೋಟಿಕ್ ಹಾಗೂ ಜೆನೆಟಿಕ್ ತಂತ್ರಜ್ಞಾನ ಹೀಗೆ ಹಲವು ವಿಭಾಗಗಳಿಗೆ ವಿವಿಧ ಜಿಲ್ಲೆಗಳಿಂದ ಹಲವಾರು ಶಿಕ್ಷಕರು ವಿವಿಧ ಮಾದರಿಗಳೊಂದಿಗೆ ಭಾಗವಹಿಸಿದ್ದರು. ಈ ಸ್ಪರ್ಧೆಯಲ್ಲಿ ಸುತ್ತೂರಿನ ಜೆಎಸ್‌ಎಸ್ ವಸತಿಶಾಲೆಯ ಭೌತ ವಿಜ್ಞಾನ ಶಿಕ್ಷಕರಾದ ಶ್ರೀ ವಿ. ವಿನೋದ್‌ಕುಮಾರ್‌ರವರು ಭೌತವಿಜ್ಞಾನದಲ್ಲಿನ ಸೃಜನಾತ್ಮಕ ಮಾದರಿಗಳು ಹಾಗೂ ವಿಶೇಷ ಚೇತನರ ಸ್ನೇಹಿ ಎಂಬ ಮಾದರಿಯನ್ನು ಪ್ರದರ್ಶಿಸಿದರು. ಭೌತಶಾಸ್ತ್ರದಲ್ಲಿ ಕ್ಲಿಷ್ಟಕರವಾದ ಪಾಠಗಳನ್ನು ವಿವಿಧ ಸೃಜನಾತ್ಮಕ ಮಾದರಿಗಳೊಂದಿಗೆ ಸರಳ ಮಾದರಿಯಲ್ಲಿ ಬೋಧಿಸುವ ವಿಧಾನ ಹಾಗೂ ವಯಸ್ಸಾದವರಿಗೆ ಮತ್ತು ವಿಶೇಷ ಚೇತನರಿಗೆ ಅವರು ಮಲಗಿರುವ ಸ್ಥಳದಲ್ಲಿಯೇ ಎಲೆಕ್ಟ್ರಿಕ್ ಉಪಕರಣಗಳಾದ ದೂರದರ್ಶನ, ಎಲಕ್ಟ್ರಿಕ್ ಬಲ್ಬ್, ಫ್ಯಾನ್, ಎಸಿ ಹೀಗೆ ಹಲವು ಉಪಕರಣಗಳನ್ನು ಒಂದೇ ರಿಮೋಟ್ ಮೂಲಕವೇ ಕಂಟ್ರೋಲ್ ಮಾಡುವ ಸಾಧನವನ್ನು ಪ್ರಸ್ತುತಪಡಿಸಿ, ಹೈದರಾಬಾದ್‌ನಲ್ಲಿ ಜನವರಿ 18 ರಿಂದ 23ರವರೆಗೆ ನಡೆದ ರಾಷ್ಟ್ರಮಟ್ಟದ ದಕ್ಷಿಣ ಭಾರತ ವಿಜ್ಞಾನ ಮೇಳ ಸ್ಪರ್ಧೆಗೆ ಆಯ್ಕೆಯಾದರು.

ಸತತ ಮೂರನೇ ಬಾರಿಗೆ ರಾಷ್ಟ್ರಮಟ್ಟಕ್ಕೆ ಆಯ್ಕೆಯಾಗಿರುವ ಶ್ರೀ ವಿ. ವಿನೋದ್‌ಕುಮಾರ್‌ರವರ ಸಾಧನೆಯನ್ನು ಸಂಸ್ಥೆಯ ಆಡಳಿತಾಧಿಕಾರಿಗಳು, ಮುಖ್ಯೋಪಾಧ್ಯಾಯರು ಹಾಗೂ ಶಿಕ್ಷಕರು ಅಭಿನಂದಿಸಿದ್ದಾರೆ.

## ವಿಶೇಷಚೇತನರಿಗೆ ಕೃತಕ ಅಂಗಗಳ ವಿತರಣೆ

**ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಯಲ್ಲಿ** ದಿನಾಂಕ 29.1.2026ರಂದು ಮೈಸೂರು ಲಯನ್ಸ್ ಕ್ಲಬ್, ಬನ್ನಾಲಿ ಗ್ರೂಪ್ ಮತ್ತು ಜೆಎಸ್‌ಎಸ್ ಆಸ್ಪತ್ರೆ ವತಿಯಿಂದ 40 ಮಂದಿ ವಿಶೇಷಚೇತನರಿಗೆ ಉಚಿತವಾಗಿ ಕೃತಕ ಅಂಗಗಳನ್ನು ವಿತರಿಸಲಾಯಿತು.

ಜೆಎಸ್‌ಎಸ್ ಆಸ್ಪತ್ರೆಯ ಸಂದರ್ಶಕ ಸಮಿತಿ ಸದಸ್ಯರಾದ ಲಯನ್ ಶ್ರೀ ಜೈ ಪ್ರಕಾಶ್‌ರವರು ಮಾತನಾಡಿ, ಲಯನ್ಸ್ ಕ್ಲಬ್ ವತಿಯಿಂದ ಸಮಾಜಮುಖಿ ಕಾರ್ಯಕ್ರಮಗಳನ್ನು ಮಾಡಲಾಗುತ್ತಿದೆ. ಈ ಬಾರಿ ಲಯನ್ಸ್ ಸಂಸ್ಥೆಯ ಸದಸ್ಯರುಗಳು ಮತ್ತು ದಾನಿಗಳಿಂದ ಅರ್ಹ ಫಲಾನುಭವಿಗಳಿಗೆ ಜೆಎಸ್‌ಎಸ್ ಆಸ್ಪತ್ರೆಯಲ್ಲಿ ಕೃತಕಾಂಗಗಳನ್ನು ತಯಾರಿಸಿ ವಿಶೇಷಚೇತನರಿಗೆ ಉಚಿತವಾಗಿ ನೀಡಲು ತೀರ್ಮಾನಿಸಿದ್ದೆವು. ದಾನಿಗಳ ಸಹಾಯದಿಂದ ಇಂದು 40 ಫಲಾನುಭವಿಗಳಿಗೆ ಕೃತಕ ಕಾಲುಗಳನ್ನು ನೀಡಿದ್ದೇವೆ ಎಂದರು.

ಜೆಎಸ್‌ಎಸ್ ಮಹಾವಿದ್ಯಾಪೀಠದ ವೈದ್ಯಕೀಯ ವಿಭಾಗದ ನಿರ್ದೇಶಕರಾದ ಶ್ರೀ ಆರ್. ಮಹೇಶ್‌ರವರು ಮಾತನಾಡಿ, ಇಂದು ಮೈಸೂರಿನ ಲಯನ್ಸ್ ಕ್ಲಬ್ ಮತ್ತು ಬನ್ನಾಲಿ ಗ್ರೂಪ್ ವತಿಯಿಂದ ಅರ್ಹರಿಗೆ ಕೃತಕ ಅಂಗಗಳನ್ನು ನೀಡುತ್ತಿರುವುದು ಸಂತೋಷದ ಸಂಗತಿ. ಲಯನ್ಸ್ ಸಂಸ್ಥೆಯವರು ಮಾಡುತ್ತಿರುವ ಸಮಾಜಸೇವೆ ಶ್ಲಾಘನೀಯ. ಕೋವಿಡ್ ಸಮಯದಲ್ಲಿ ಆಹಾರ ಕಿಟ್ ವಿತರಣೆ, ಪ್ರತಿ ತಿಂಗಳು ಉಚಿತ ಆರೋಗ್ಯ ತಪಾಸಣಾ ಶಿಬಿರ ಮತ್ತು ಇನ್ನೂ ಮುಂತಾದ ಉತ್ತಮ ಸಮಾಜಮುಖಿ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ. ಅವಶ್ಯಕತೆ ಇರುವವರಿಗೆ ಮುಂದೆಯು ಇವರ ಸೇವೆ ದೊರೆಯುವಂತಾಗಲಿ ಎಂದರು.

ಬನ್ನಾಲಿ ಗ್ರೂಪ್‌ನ ಶ್ರೀ ಹೇಮಂತ್ ಕುಮಾರ್ ಬನ್ನಾಲಿಯವರು ನಮ್ಮ ತಂದೆ ಹಾಕಿಕೊಟ್ಟ ಸಮಾಜ ಸೇವಾ ಕಾರ್ಯವನ್ನು ಅವರ ಮಾರ್ಗದರ್ಶನದಲ್ಲಿ



ಮುನ್ನಡೆಸುತ್ತಿದ್ದೇನೆ. ಯಾರಿಗಾದರು ಉಚಿತ ಕೃತಕ ಅಂಗಗಳ ಅವಶ್ಯಕತೆ ಇದ್ದರೆ ಯಾವಾಗಬೇಕಾದರು ನಮ್ಮ ಕಛೇರಿಯನ್ನು ಸಂಪರ್ಕಿಸಬಹುದು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಜೆಎಸ್‌ಎಸ್ ಆಸ್ಪತ್ರೆಯ ಮುಖ್ಯ ಹಣಕಾಸು ಅಧಿಕಾರಿಗಳಾದ ಶ್ರೀ ಕೆ.ಎಂ. ಭಗವಾನ್, ಲಯನ್ಸ್ ಸಂಸ್ಥೆಯ ಶ್ರೀ ಪುಟ್ಟೆಗೌಡ, ಶ್ರೀ ಪಿ. ಹೊನ್ನರಾಜು, ಶ್ರೀ ಹೆಚ್.ಎಸ್. ರಾಜು, ಶ್ರೀ ಜಯಕುಮಾರ್, ಶ್ರೀ ಧನಂಜಯ್, ದಾನಿಗಳಾದ ಡಾ. ರಮೇಶ್, ಜೆಎಸ್‌ಎಸ್ ಆಸ್ಪತ್ರೆಯ ಪ್ರಭಾರ ಆಡಳಿತಾಧಿಕಾರಿಯಾದ ಶ್ರೀ ಎಂ. ಭಾನುಮೂರ್ತಿ, ಸಾರ್ವಜನಿಕ ಸಂಪರ್ಕಾಧಿಕಾರಿಗಳಾದ ಶ್ರೀ ಎಸ್. ಜೀವನ್ ಹಾಗೂ ಕೃತಕ ಅಂಗಗಳ ವಿಭಾಗದ ಮುಖ್ಯಸ್ಥರಾದ ಶ್ರೀ ಸಂಜೀವ್ ಕುಮಾರ್ ಮತ್ತು ಸಿಬ್ಬಂದಿಗಳು ಉಪಸ್ಥಿತರಿದ್ದರು.

## ಸರ್ವಿಕಲ್ ಕ್ಯಾನ್ಸರ್ ಮತ್ತು ಸ್ತನ ಕ್ಯಾನ್ಸರ್ ಬಗ್ಗೆ ಅರಿವು

**ಮೈಸೂರಿನ ಜೆಎಸ್‌ಎಸ್ ಜನಶಿಕ್ಷಣ ಸಂಸ್ಥೆಯು** ಜೆಎಸ್‌ಎಸ್ ನಗರ ಆರೋಗ್ಯ ಕೇಂದ್ರದ ಸಹಯೋಗದೊಂದಿಗೆ ಗರ್ಭಕೋಶ ಮತ್ತು ಗರ್ಭಕೋಶಕೊರಳಿನ ಕ್ಯಾನ್ಸರ್ ಹಾಗೂ ಸ್ತನ ಕ್ಯಾನ್ಸರ್ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮವನ್ನು ದಿನಾಂಕ 28.1.2026 ರಂದು ಆಯೋಜಿಸಲಾಗಿತ್ತು.

ಜೆಎಸ್‌ಎಸ್ ನಗರ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಯಾದ ಡಾ. ರಮಾರವರು ಮಾತನಾಡಿ, ಪ್ರತಿ 8 ನಿಮಿಷಕ್ಕೊಮ್ಮೆ ಗರ್ಭಕೋಶ ಬಾಯಿ ಕ್ಯಾನ್ಸರ್‌ನಿಂದ ಸಾವು ಸಂಭವಿಸುತ್ತಿದೆ. ದೇಹದಲ್ಲಿ ಹೆಚ್‌ಪಿವಿ ವೈರಸ್ ಇದೆಯೇ ಇಲ್ಲವೇ ಎಂದು ಪರೀಕ್ಷಿಸಲಾಗುತ್ತದೆ. ದೇಹದಲ್ಲಿ ಹೆಚ್‌ಪಿವಿ ವೈರಸ್ 1–2 ವರ್ಷಗಳ ನಂತರ ಕ್ಷೀಣವಾಗುತ್ತದೆ, ಇದು ಉತ್ತಮವಾದ ವಿಚಾರವಾಗಿದೆ. ಪಿತ್ತಕೋಶದ ಸಮಸ್ಯೆಯಿಂದ ರೋಗಗಳು ಹರಡುತ್ತವೆ. ಪ್ರತಿಯೊಬ್ಬ ಮಹಿಳೆಯು ವರ್ಷಕ್ಕೊಮ್ಮೆ ಗರ್ಭಕೋಶ ಕ್ಯಾನ್ಸರ್ ಪರೀಕ್ಷೆ ಮಾಡಿಸಿಕೊಳ್ಳಬೇಕು. ಮದುವೆ ಆಗದ ಹೆಣ್ಣು ಮಕ್ಕಳು ವ್ಯಾಕ್ಸಿನ್ ಹಾಕಿಸಿಕೊಳ್ಳಬೇಕು. 9–14 ವರ್ಷದ ಹೆಣ್ಣು ಮಕ್ಕಳಿಗೆ 2ಡೋಸ್ ಹಾಗೂ 15–40 ವಯಸ್ಸಿನವರು 3ಡೋಸ್ ಗರ್ಭಕೋಶ ರೋಗ ತಡೆಗಟ್ಟುವ ವ್ಯಾಕ್ಸಿನ್ ಹಾಕಿಸಿಕೊಳ್ಳಬೇಕು. ವಿಶ್ವ ಆರೋಗ್ಯ ಸಂಸ್ಥೆಯು ಒಂದು ಡೋಸ್ ವ್ಯಾಕ್ಸಿನನ್ನು ಕಡ್ಡಾಯವಾಗಿ ಹಾಕಿಸಿಕೊಳ್ಳಬೇಕು ಎಂದು ತಿಳಿಸಿದೆ. ಸ್ಕ್ರೀನಿಂಗ್ ಟೆಸ್ಟ್




ಮೂಲಕ ರೋಗ ಪತ್ತೆ ಹಚ್ಚಬಹುದಾಗಿದೆ. ಒಳ್ಳೆಯ ಆಹಾರ, ನಿಗದಿತವಾಗಿ ಯೋಗ–ವ್ಯಾಯಾಮ ಮಾಡಿ ರೋಗ ನಿರೋಧಕ ಶಕ್ತಿಯನ್ನು ಹೆಚ್ಚಿಸಿಕೊಳ್ಳುವ ಮುಖಾಂತರ ಯಾವುದೇ ರೋಗವನ್ನು ತಡೆಯಬಹುದಾಗಿದೆ.

ಸಮುದಾಯ ವೈದ್ಯಕೀಯ ವಿಭಾಗದ ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರಾದ ಡಾ. ಮಧುರವರು ಮಾತನಾಡಿ, ದಿನದಿಂದ ದಿನಕ್ಕೆ ಕ್ಯಾನ್ಸರ್ ರೋಗಿಗಳ ಸಂಖ್ಯೆ ಹೆಚ್ಚಾಗುತ್ತಿದೆ. ಪ್ರಚಲಿತ ದಿನಗಳಲ್ಲಿ ಮನೆಯಲ್ಲಿ ಒಬ್ಬರಿಗೆ ಕ್ಯಾನ್ಸರ್ ಬಂದರೆ ಇನ್ನುಳಿದ ಸದಸ್ಯರ ಮನೋಬಲವು ಕ್ಷೀಣಿಸುತ್ತದೆ. ಅಂತಹ ಒಂದು ಭಯಾನಕ ಪರಿಸ್ಥಿತಿಯನ್ನು ಇದು ಸೃಷ್ಟಿಸುತ್ತಿದೆ. ತರಬೇತಿ ಪಡೆಯುತ್ತಿರುವ ನೀವು ಯಾವ ಸ್ವಂತ ಉದ್ಯಮ ಸ್ಥಾಪಿಸಬೇಕು ಎಂಬ ಹಂಬಲವಿದೆಯೋ ಅದೇ ರೀತಿ ನಮ್ಮ ಆರೋಗ್ಯವು ಅಷ್ಟೇ ಮುಖ್ಯವಾಗಿರುತ್ತದೆ. ಈ ಮೊದಲು ಕುಟುಂಬ ವ್ಯವಸ್ಥೆಯಲ್ಲಿ 4–5ಕ್ಕಿಂತ ಹೆಚ್ಚು ಮಕ್ಕಳಿದ್ದರು. ಯಾವುದಾದರೂ ಮಗು ಸತ್ತರೂ ಉಳಿದೆರಡು ಮಕ್ಕಳು ಉಳಿಯುತ್ತಿದ್ದವು. ಈಗ ಕುಟುಂಬ ವ್ಯವಸ್ಥೆ ಚಿಕ್ಕದಾಗಿದ್ದು, ಎಲ್ಲರೂ ಆರೋಗ್ಯವಂತರಾಗಿರುವುದು ಮುಖ್ಯವಾಗಿರುತ್ತದೆ. ವಿಶ್ವ ಆರೋಗ್ಯ ಸಂಸ್ಥೆಯು ಜನವರಿ ತಿಂಗಳಿನಲ್ಲಿ ಆರೋಗ್ಯದ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮ ಹಮ್ಮಿಕೊಳ್ಳಬೇಕೆಂದು ತಿಳಿಸಿದೆ. ಕ್ಯಾನ್ಸರ್ ತಡೆಗಟ್ಟಲು ವ್ಯಾಕ್ಸಿನ್, ಸ್ಕ್ರೀನಿಂಗ್ ಟೆಸ್ಟ್ ಮುಖ್ಯವಾದವುಗಳಾಗಿವೆ ಎಂದು ತಿಳಿಸಿದರು.

ಭಾರತೀಯ ಕುಟುಂಬ ಯೋಜನಾ ಸಂಘದ ಡಾ. ವಿಜಯಲಕ್ಷ್ಮಿ ಶ್ರೀನಿವಾಸ್‌ರವರು ಮಾತನಾಡಿ, ನಮ್ಮ ದೇಶದಲ್ಲಿ ಪ್ರತಿ ವರ್ಷ 1ಲಕ್ಷದ 23 ಸಾವಿರ ಗರ್ಭಕೋಶಬಾಯಿ ಕ್ಯಾನ್ಸರ್ ರೋಗಿಗಳ ಕೇಸ್‌ಗಳು ದಾಖಲಾಗುತ್ತಿವೆ. 72 ಸಾವಿರ ಮಹಿಳೆಯರು ಪ್ರತಿವರ್ಷ ಸಾವನ್ನಪ್ಪುತ್ತಿದ್ದಾರೆ. 8 ನಿಮಿಷಕ್ಕೊಮ್ಮೆ ಒಬ್ಬ ಮಹಿಳೆ ಕ್ಯಾನ್ಸರ್‌ನಿಂದ ಸಾಯುತ್ತಿದ್ದಾರೆ ಎಂಬುದಾಗಿ ಇನ್ನೊಂದು ವರದಿ ತಿಳಿಸುತ್ತದೆ. ಇದಕ್ಕೆ ಕಾರಣ ಸರ್ವಿಕಲ್ ಕ್ಯಾನ್ಸರ್ ಮತ್ತು ಸ್ತನ ಕ್ಯಾನ್ಸರ್. ಗರ್ಭಕೋಶ ಬಾಯಿ ಕ್ಯಾನ್ಸರ್

ಬರಲು ಮುಖ್ಯ ಕಾರಣಗಳೆಂದರೆ: ಈ ಕ್ಯಾನ್ಸರ್‌ಗೆ ಮುಖ್ಯವಾಗಿ 200 ವೈರಸ್‌ಗಳಿರುತ್ತವೆ, ಅದರಲ್ಲಿನ 16 ಹಾಗೂ 18 ನೇ ವೈರಸ್‌ನಿಂದಾಗಿ ಈ ಖಾಯಿಲೆ ಬರುತ್ತದೆ. ಈ ಕ್ಯಾನ್ಸರ್ ಮುಖ್ಯವಾಗಿ ಹ್ಯುಮನ್ ಪ್ಯಾಪಿಲೋಮ ವೈರಸ್ (ಹೆಚ್‌ಪಿವಿ) ಈ ಖಾಯಿಲೆಗೆ ಯಾವುದೇ ಸೂಚನೆ, ಗುರುತು ಹಾಗೂ ಚಿಹ್ನೆಗಳಿಲ್ಲ. ಕ್ಯಾನ್ಸರ್‌ಗೆ ಇದುವರೆಗೆ ಔಷಧಿಯನ್ನು ಕಂಡು ಹಿಡಿದಿಲ್ಲ. ಆದರೆ ಗರ್ಭಕೋಶಬಾಯಿ ಕ್ಯಾನ್ಸರ್‌ಗೆ ಔಷಧಿ ಇದೆ.

ಕ್ಯಾನ್ಸರ್ ಬರದೇ ಇರುವ ಹಾಗೇ ನೋಡಿಕೊಳ್ಳಬಹುದು. ಅಪ್ರಾಪ್ತ ವಯಸ್ಸಿಗೆ ವಿವಾಹ ಮಾಡದಿರುವುದು, ಅಪ್ರಾಪ್ತ ವಯಸ್ಸಿನಲ್ಲಿ ಮಕ್ಕಳಾಗುವುದನ್ನು ತಡೆಗಟ್ಟುವುದು, ಸುರಕ್ಷಿತ ಲೈಂಗಿಕ ಸಂಪರ್ಕ, ಗರ್ಭಕೋಶ ಕ್ಯಾನ್ಸರ್ ಪರೀಕ್ಷೆ ಮಾಡಿಸಿಕೊಳ್ಳುವುದು. ಮುಖ್ಯವಾಗಿ ಈ ಕ್ರಮಗಳನ್ನು ಅನುಸರಿಸಬೇಕು. ಕ್ಯಾನ್ಸರ್ ಏಕಾಏಕಿ ಬರುವುದಿಲ್ಲ, ಅದು ಹಂತ ಹಂತವಾಗಿ ಪ್ರಿ–ಕ್ಯಾನ್ಸರ್, ಮೈಲ್ಡ್, ಮಾಡರೇಟ್, ಸಿವೀಯರ್ ಹೀಗೆ ಬರುತ್ತದೆ. ಅಂದರೆ ಕೊನೆಯ ಹಂತ ತಲುಪಲು ಅಂದರೆ ಸುಮಾರು ಹತ್ತು ವರ್ಷಗಳಾಗಬಹುದು. ಈ ಖಾಯಿಲೆ ಬಂದ ಮೇಲೆ ರೇಡಿಯೇಷನ್ ಕಿಮೋಥೇರಪಿ ಮೊದಲಾದವುಗಳನ್ನು ಮಾಡಿಸಿಕೊಂಡರೂ ರೋಗಿಯನ್ನು ಬದುಕಿಸಿಕೊಳ್ಳಲು ಸಾಧ್ಯವಿಲ್ಲ, ಆ ನಡುವೆ ನಾವು ಹಲವು ಮುಂಜಾಗ್ರತೆಗಳನ್ನು ತೆಗೆದುಕೊಳ್ಳಬಹುದು. ಪ್ರತಿಯೊಬ್ಬ ಮಹಿಳೆಯು ವರ್ಷಕ್ಕೊಮ್ಮೆ ಗರ್ಭಕೋಶ ಕ್ಯಾನ್ಸರ್ ಪರೀಕ್ಷೆ ಮಾಡಿಸಿಕೊಳ್ಳಬೇಕು. ಮಿತ ಆಹಾರ ಸೇವನೆ, ಹೆಚ್ಚು ಹೆಚ್ಚು ತರಕಾರಿಗಳ ಸೇವನೆ, ವ್ಯಾಯಾಮ, ಯೋಗ, ಧ್ಯಾನ ಮೊದಲಾದವುಗಳ ಮೂಲಕ ಜೀವನ ಶೈಲಿಯನ್ನು ಬದಲಾಯಿಸಿಕೊಳ್ಳುವುದರಿಂದ ಹೆಚ್ಚುಕಾಲ ಬದುಕಬಹುದು ಎಂದು ತಿಳಿಸಿದರು. ಈ ಬಗ್ಗೆ ಹೆಚ್ಚಿನ ಜನರಿಗೆ ಮಾಹಿತಿ ನೀಡಿ, ಸ್ಕ್ರೀನಿಂಗ್‌ಗೆ ಹೆಸರು ನೋಂದಾಯಿಸಿಕೊಂಡರೆ, ಉಚಿತವಾಗಿ ತಪಾಸಣೆ ಮಾಡುವುದಾಗಿ ತಿಳಿಸಿದರು.

ಜೆಎಸ್‌ಎಸ್ ಜನಶಿಕ್ಷಣ ಸಂಸ್ಥೆಯ ನಿರ್ದೇಶಕರಾದ ಶ್ರೀ ಸಿ. ರಮೇಶ್‌ರವರು ಮಾತನಾಡಿ, ಕ್ಯಾನ್ಸರ್‌ನಲ್ಲಿ ಹಲವು ರೀತಿಯ ಕ್ಯಾನ್ಸರ್‌ಗಳಿದ್ದು, ಇವುಗಳಿಗೆ ಔಷಧಿಯನ್ನು ಕಂಡು ಹಿಡಿಯಲು ಸಾಧ್ಯವಾಗಿಲ್ಲ, ಈಗಾಗಲೇ ವೈದ್ಯರು ತಿಳಿಸಿರುವಂತೆ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳಬೇಕು. ಪ್ರತಿಯೊಬ್ಬ ಮಹಿಳೆ ಸ್ಕ್ರೀನಿಂಗ್, ಟೆಸ್ಟ್ ಮಾಡಿಸಿಕೊಳ್ಳಬೇಕು. ಆರೋಗ್ಯದ ಬಗ್ಗೆ ಹೆಚ್ಚಿನ ಗಮನ ಹರಿಸಬೇಕು. ಹೆಣ್ಣು ಕುಟುಂಬಕ್ಕೆ ಆಧಾರಸ್ತಂಭವಾಗಿರುವುದರಿಂದ ಹೆಚ್ಚಿನ ಕಾಳಜಿಯನ್ನು ವಹಿಸಬೇಕಿದೆ. ನೀವು ತೆಗೆದುಕೊಳ್ಳುವ ತರಬೇತಿಯ ಮುಖ್ಯ ಉದ್ದೇಶ ಆರ್ಥಿಕವಾಗಿ ಸಬಲೀಕರಣವಾಗುವುದು. ಅದೇ ರೀತಿ ಇದರಿಂದ ಬರುವ ಹಣದಲ್ಲಿ ಸ್ವಲ್ಪ ಹಣವನ್ನು ಆರೋಗ್ಯ ಕಾಪಾಡಿಕೊಳ್ಳಲು ಮೀಸಲಿಟ್ಟುಕೊಳ್ಳಬೇಕೆಂದು ತಿಳಿಸಿದರು.

ನೇತ್ರ ಮತ್ತು ತಂಡದವರು ಪ್ರಾರ್ಥನೆ ಸಲ್ಲಿಸಿದರು. ಜೆಎಸ್‌ಎಸ್ ನಗರ ಆರೋಗ್ಯ ಕೇಂದ್ರದ ವೈದ್ಯಕೀಯ ಸಮಾಜಕಾರ್ಯಕರ್ತರಾದ ಶ್ರೀ ಸಂತೋಷ್‌ರವರು ಸ್ವಾಗತಿಸಿದರು.

ಕಾರ್ಯಕ್ರಮದಲ್ಲಿ ಜೆಎಸ್‌ಎಸ್ ನಗರ ಆರೋಗ್ಯ ಕೇಂದ್ರದ ಸಿಬ್ಬಂದಿ ವರ್ಗ, ನರ್ಸಿಂಗ್ ಕಾಲೇಜಿನ ವಿದ್ಯಾರ್ಥಿನಿಯರು, ಹೌಸ್ ಸರ್ಜನ್ಸ್, ಜೆಎಸ್‌ಎಸ್ ಜನಶಿಕ್ಷಣ ಸಂಸ್ಥೆಯ ಕಾರ್ಯಕ್ರಮ ಅಧಿಕಾರಿ ಶ್ರೀಮತಿ ಸೌಭಾಗ್ಯ, ಮೇದರ್ ಬ್ಲಾಕ್‌ನ ಸರ್ಕಾರಿ ಪ್ರೌಢಶಾಲೆಯ ಮುಖ್ಯ ಶಿಕ್ಷಕರಾದ ಶ್ರೀಮತಿ ಪುಷ್ಪವತಿ, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕಿ ಶ್ರೀಮತಿ ಭಾಗ್ಯಲಕ್ಷ್ಮಿ ಜೆಎಸ್‌ಎಸ್ ಜನಶಿಕ್ಷಣ ಸಂಸ್ಥೆಯ ವೃತ್ತಿ ಬೋಧಕರಾದ ಶ್ರೀಮತಿ ಗಿರಿಜಾ ಹಾಗೂ ಹೊಲಿಗೆ ತರಬೇತಿಯ ಕಲಿಕಾರ್ಥಿಗಳು ಮತ್ತು ಸಿಬ್ಬಂದಿವರ್ಗದವರು ಭಾಗವಹಿಸಿದ್ದರು.

□

## ರಾಷ್ಟ್ರೀಯ ಹೆಣ್ಣುಮಕ್ಕಳ ದಿನಾಚರಣೆ ಹಾಗೂ ಬ್ಯೂಟಿಷಿಯನ್ ತರಬೇತಿ ಸಮಾರೋಪ




**ಜೆಎಸ್‌ಎಸ್ ಜನ ಶಿಕ್ಷಣ ಸಂಸ್ಥೆಯ** ವತಿಯಿಂದ ಎಸ್‌ಎಸ್ ಟ್ರಸ್ಟ್‌ನ ಸಹಯೋಗದೊಂದಿಗೆ ಮೈಸೂರಿನ ಸಿದ್ಧಲಿಂಗಪುರದಲ್ಲಿ ರಾಷ್ಟ್ರೀಯ ಹೆಣ್ಣು ಮಕ್ಕಳ ದಿನ ಹಾಗೂ ಬ್ಯೂಟಿಷಿಯನ್ ತರಬೇತಿಯ ಸಮಾರೋಪ ಸಮಾರಂಭವನ್ನು ದಿನಾಂಕ 24.1.2026ರಂದು ಹಮ್ಮಿಕೊಳ್ಳಲಾಗಿತ್ತು.

ಜೆಎಸ್‌ಎಸ್ ಜನ ಶಿಕ್ಷಣ ಸಂಸ್ಥೆಯ ನಿರ್ದೇಶಕರಾದ ಶ್ರೀ ಸಿ. ರಮೇಶರವರು ಮಾತನಾಡುತ್ತಾ, ಜೆಎಸ್‌ಎಸ್ ಮಹಾವಿದ್ಯಾಪೀಠದ ಬಗ್ಗೆ, ಜನ ಶಿಕ್ಷಣ ಸಂಸ್ಥೆಯ ಉದ್ದೇಶ, ವೃತ್ತಿ ತರಬೇತಿಗಳ ಬಗ್ಗೆ ಹಾಗೂ ಮುಂದಿನ ದಿನಗಳಲ್ಲಿ ಕೈಗೊಳ್ಳಬಹುದಾದ ಆರ್ಥಿಕ ಚಟುವಟಿಕೆಗಳ ಬಗ್ಗೆ, ಬ್ಯಾಂಕ್‌ನ ಸಾಲ–ಸೌಲಭ್ಯದ ಬಗ್ಗೆ ವಿವರವಾದ ಮಾಹಿತಿಯನ್ನು ಒದಗಿಸಿದರು. ಅಲ್ಲದೇ ಬ್ಯೂಟಿಷಿಯನ್ ತರಬೇತಿ ಮುಗಿಸಿದ ನಂತರ ಫಲಾನುಭವಿಗಳು ಯಾವ ರೀತಿ ಉದ್ಯೋಗವನ್ನು ಕೈಗೊಳ್ಳಬಹುದು ಹಾಗೂ ಸಂಪಾದನೆಯನ್ನು ಮಾಡಬಹುದು ಎಂಬುದರ ಬಗ್ಗೆ ತಿಳಿಸಿದರು.

ಜೆಎಸ್‌ಎಸ್ ಜನ ಶಿಕ್ಷಣ ಸಂಸ್ಥೆಯ ಕಾರ್ಯಕ್ರಮ ಅಧಿಕಾರಿಯಾದ ಶ್ರೀಮತಿ ಸೌಭಾಗ್ಯರವರು ಮಾತನಾಡುತ್ತಾ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯವು 2008ರಲ್ಲಿ ಈ ಕಾರ್ಯಕ್ರಮವನ್ನು ಪ್ರಾರಂಭಿಸಿತು. 1966 ಜನವರಿ 24 ರಂದು ಇಂದಿರಾ ಗಾಂಧಿಯವರು ಭಾರತದ ಮೊದಲ ಮಹಿಳಾ ಪ್ರಧಾನಿಯಾಗಿ ಪ್ರಮಾಣವಚನ ಸ್ವೀಕರಿಸಿದ ದಿನದ ನೆನಪಿಗಾಗಿ ಜನವರಿ 24ನ್ನು ಆಯ್ಕೆ ಮಾಡಲಾಗಿದೆ.

ಭಾರತದಲ್ಲಿ ಪ್ರತಿ ವರ್ಷ ಜನವರಿ 24 ರಂದು ರಾಷ್ಟ್ರೀಯ ಹೆಣ್ಣು ಮಕ್ಕಳ ದಿನವನ್ನು ಆಚರಿಸಲಾಗುತ್ತದೆ. ಹೆಣ್ಣು ಮಕ್ಕಳ ಹಕ್ಕುಗಳು, ಶಿಕ್ಷಣ, ಆರೋಗ್ಯ ಮತ್ತು ಸಬಲೀಕರಣದ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುವುದು ಹಾಗೂ ಸಮಾಜದಲ್ಲಿನ ಲಿಂಗ ತಾರತಮ್ಯವನ್ನು ಹೋಗಲಾಡಿಸುವುದು ಮುಖ್ಯ ಉದ್ದೇಶವಾಗಿದೆ. ಅಲ್ಲದೇ ಈ ದಿನವು ಹೆಣ್ಣು ಮಕ್ಕಳ ಭದ್ರತೆ ಹಾಗೂ ಸಮಾನ

ಅವಕಾಶಗಳ ಮಹತ್ವವನ್ನು ಒತ್ತಿ ಹೇಳುತ್ತದೆ. ಎಷ್ಟೋ ಶತಮಾನಗಳು ಕಳೆದರೂ ಸಮಾಜದಲ್ಲಿ ಇಂದಿಗೂ ಹೆಣ್ಣಿಗೆ, ಪುರುಷರಿಗೆ ಸಿಕ್ಕಷ್ಟು ಪ್ರಾಧಾನ್ಯತೆ ಸಿಕ್ಕಿಲ್ಲ. ಈ ನಿಟ್ಟಿನಲಿ ಹೆಣ್ಣು ಮನೆಯ ನಂದಾದೀಪವೆಂದು ಹೇಳುವ ನಾವೇ ನಮ್ಮ ಮನೆಯಲ್ಲಿ ಹೆಣ್ಣು ಮಗು ಹುಟ್ಟಿದರೆ ತಲೆ ಮೇಲೆ ಕೈಹೊತ್ತು ಕೂರುವ ಪರಿಸ್ಥಿತಿ ಇದೆ. ಹಾಗಾಗಿ ಸಮಾಜದಲ್ಲಿ ಜರುಗುತ್ತಿರುವ ಭ್ರೂಣಹತ್ಯೆ, ಹೆಣ್ಣು ಗಂಡೆಂಬ ತಾರತಮ್ಯ, ಹೆಣ್ಣು ಮಕ್ಕಳ ಮೇಲಿನ ದೌರ್ಜನ್ಯ, ಶೋಷಣೆ, ಸಾಮಾಜಿಕ ಅಸಮಾನತೆಯನ್ನು ಹೋಗಲಾಡಿಸಿ ಹೆಣ್ಣು ಮಕ್ಕಳಿಗೆ ಅವರ ಸಾಮಾಜಿಕ ಹಕ್ಕುಗಳು, ಸುರಕ್ಷತೆ, ಸಾಮಾಜಿಕ ಸಮಾನತೆ, ಗೌರವ, ಸಾಮಾಜಿಕ ಭದ್ರತೆ, ಸಮಾನ ಅವಕಾಶ, ಪೋಷಣೆ, ಆರೋಗ್ಯ ಮತ್ತು ಶಿಕ್ಷಣವನ್ನು ಒದಗಿಸುವುದು ಈ ಕಾರ್ಯಕ್ರಮದ ಉದ್ದೇಶವಾಗಿದೆ ಎಂದು ತಿಳಿಸಿದರು.

ಗ್ರಾಮ ಪಂಚಾಯಿತಿಯ ಮಾಜಿ ಸದಸ್ಯರಾದ ಶ್ರೀಮತಿ ಆಶಾರವರು ಮಾತನಾಡುತ್ತಾ, ಹೆಣ್ಣು ಮಕ್ಕಳು ಶಿಕ್ಷಣದ ಜೊತೆಗೆ ಕೌಶಲ ತರಬೇತಿಯನ್ನು ಪಡೆದುಕೊಳ್ಳುವುದರ ಮೂಲಕ ಸಮಾಜದಲ್ಲಿ ಸಬಲೀಕರಣಗೊಳ್ಳಬೇಕೆಂದು ತಿಳಿಸಿದರು.

ಮಂಗಳೂರು ಕ್ಯಾಂಪಸ್ ಎಸ್‌ಎಸ್ ಟ್ರಸ್ಟ್‌ನ ಕಾರ್ಯದರ್ಶಿಗಳಾದ ಶ್ರೀಮತಿ ರೇಖಾರವರು ಮಾತನಾಡುತ್ತಾ, ಜೆಎಸ್‌ಎಸ್ ಜನ ಶಿಕ್ಷಣ ಸಂಸ್ಥೆಯು ಸಮಾಜದಲ್ಲಿ ನಿರುದ್ಯೋಗ ಯುವಕ ಯುವತಿಯರಿಗೆ, ಅವಿದ್ಯಾವಂತರಿಗೆ ಹಾಗೂ ಆರ್ಥಿಕವಾಗಿ ಹಿಂದುಳಿದವರಿಗೆ ಕೌಶಲ ತರಬೇತಿಯನ್ನು ನೀಡುವುದರ ಮೂಲಕ ಅವರನ್ನು ಆರ್ಥಿಕವಾಗಿ ಸಬಲರನ್ನಾಗಿ ಮಾಡುತ್ತಿದೆ. ಈ ನಿಟ್ಟಿನಲ್ಲಿ ಸಮಾಜಕ್ಕೆ ಅವರ ಕೊಡುಗೆ ಅಪಾರ. ನಮ್ಮ ಟ್ರಸ್ಟ್‌ನ ಸಹಯೋಗದೊಂದಿಗೆ ಈ ಗ್ರಾಮದಲ್ಲಿ ಹಲವಾರು ತರಬೇತಿಗಳನ್ನು ನೀಡುವ ಮೂಲಕ ಸಮುದಾಯದ ಜನರನ್ನು ಆರ್ಥಿಕವಾಗಿ ಸಬಲರನ್ನಾಗಿ ಮಾಡಲು ಸಾಧ್ಯವಾಗಿದೆ. ಈ ಕಾರ್ಯಕ್ರಮ ಹೀಗೆ ಮುಂದುವರಿಯಲಿ ಎಂದು ತಿಳಿಸಿದರು.

ಮೇಘನಾ ಮತ್ತು ತಂಡದವರು ಪ್ರಾರ್ಥನೆ ಸಲ್ಲಿಸಿದರು. ಬ್ಯೂಟಿಷಿಯನ್ ತರಬೇತಿಯ ಎಲ್ಲಾ ಫಲಾನುಭವಿಗಳು ತಮ್ಮ ಅನಿಸಿಕೆಯನ್ನು ವ್ಯಕ್ತಪಡಿಸಿದರು. ಇವರಲ್ಲಿ ಕೆಲವು ಕಲಿಕಾರ್ಥಿಗಳು ಸ್ವತ: ಬ್ಯೂಟಿಪಾರ್ಲರ್ ತೆರೆಯುವುದಾಗಿ ಮತ್ತೆ ಕೆಲವರು ಮನೆಯಿಂದಲೇ ಉದ್ಯೋಗ ಪ್ರಾರಂಭಿಸುವುದಾಗಿ ತಿಳಿಸಿದರು.

ಈ ಕಾರ್ಯಕ್ರಮದಲ್ಲಿ ವೃತ್ತಿಬೋಧಕರಾದ ಶ್ರೀಮತಿ ಯಶೋಧ, ಬ್ಯೂಟಿ ಕೇರ್ ಅಸಿಸ್ಟೆಂಟ್ ತರಬೇತಿಯ ಕಲಿಕಾರ್ಥಿಗಳು, ಮಕ್ಕಳು ಹಾಗೂ ಗ್ರಾಮಸ್ಥರು ಭಾಗವಹಿಸಿದ್ದರು.

## ಯುವ ಪ್ರತಿಭೆಗಳನ್ನು ಬೆಳೆಸಲು ಕಾಲೇಜು ಉತ್ಸವಗಳು ಅದ್ಭುತ ವೇದಿಕೆಯಾಗಿವೆ

ಯುವ ಪ್ರತಿಭೆಗಳನ್ನು ಬೆಳೆಸಲು ಕಾಲೇಜು ಉತ್ಸವಗಳು ಅದ್ಭುತ ವೇದಿಕೆಯಾಗಿದೆ ಎಂದು ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾಲೇಜು ಶಿಕ್ಷಣ ವಿಭಾಗದ ಸಹಾಯಕ ನಿರ್ದೇಶಕರಾದ ಶ್ರೀ ಬಿ. ನಿರಂಜನಮೂರ್ತಿಯವರು ಅಭಿಪ್ರಾಯಪಟ್ಟರು.

**ಮೈಸೂರಿನ ಸರಸ್ವತಿಪುರಂನ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ** ದಿನಾಂಕ 29.1.2026ರಂದು ವಾಣಿಜ್ಯ ಮತ್ತು ನಿರ್ವಹಣಶಾಸ್ತ್ರ ವಿಭಾಗದ ವತಿಯಿಂದ ನಡೆದ ರಾಜ್ಯ ಮಟ್ಟದ ಮ್ಯಾನ್. ಕಾಮ್. ಫೆಸ್ಟ್ ಆವಿಷ್ಕಾರ – 2026 ಉದ್ಘಾಟನೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ವಿದ್ಯಾರ್ಥಿಗಳಲ್ಲಿ ನಾಯಕತ್ವದ ಗುಣ, ಸಂವಹನ ಕೌಶಲ ಮತ್ತು ಜ್ಞಾನ ವೃದ್ಧಿಸಲು ಇಂತಹ ಉತ್ಸವಗಳು ಪ್ರಮುಖ ಪಾತ್ರವಹಿಸುತ್ತವೆ ಎಂದರು.



ಚಲನಚಿತ್ರ ಕಲಾವಿದರಾದ ಶ್ರೀ ನಿಹಾರ್ ಮುಖೇಶ್‌ರವರು ರಾಜ್ಯ ಮಟ್ಟದ ಮ್ಯಾನೇಜ್‌ಮೆಂಟ್-ಕಾಮರ್ಸ್ ಫೆಸ್ಟ್‌ನ ಲೋಗೋ ಅನಾವರಣಗೊಳಿಸಿದರು.

ಈ ಸಂದರ್ಭದಲ್ಲಿ ಫೆಸ್ಟ್‌ನ ವಿವಿಧ ಸ್ಪರ್ಧಾ ಕಾರ್ಯಕ್ರಮಗಳಾದ ವಿಜ್ಞಾಪನ (ಮಾರ್ಕೆಟಿಂಗ್), ನೇತೃತ್ವ (ಹೆಚ್‌ಆರ್), ಅನ್ವೇಷಣ (ಟ್ರೆಜರ್ ಹಂಟ್), ಶಿಖರ (ಬೆಸ್ಟ್ ಮ್ಯಾನೇಜರ್) ಮತ್ತು ಸಮನ್ವಯ (ಗ್ರೂಪ್ ಡ್ಯಾನ್ಸ್). ಇವುಗಳ ಲಾಂಛನಗಳನ್ನೂ ಅನಾವರಣಗೊಳಿಸಲಾಯಿತು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ರಾಪ್ ಗಾಯಕಿ ಮತ್ತು ಹಿರಿಯ ವಿದ್ಯಾರ್ಥಿನಿಯಾದ ಕು. ಐಶಿರಿ ಶರ್ಮಾ ಅವರು ತಾವು ಜೆಎಸ್‌ಎಸ್ ಮಹಿಳಾ ಕಾಲೇಜಿನ ಹಿರಿಯ ವಿದ್ಯಾರ್ಥಿನಿ ಎಂದು ಹೇಳುವುದಕ್ಕೆ ಹೆಮ್ಮೆಯಾಗುತ್ತಿದೆ ಎಂದರು. ತಮ್ಮ ರಾಪ್ ಹಾಡುಗಳನ್ನು ಹಾಡುವುದರ ಮೂಲಕ ವಿದ್ಯಾರ್ಥಿಗಳನ್ನು ರಂಜಿಸಿದರು.

ಪ್ರಾಂಶುಪಾಲರಾದ ಡಾ. ರೇಚಣ್ಣರವರು ಕಾರ್ಯಕ್ರಮಕ್ಕೆ ಶುಭಕೋರಿದರು.

ವಾಣಿಜ್ಯ ವಿಭಾಗದ ಮುಖ್ಯಸ್ಥರಾದ ಡಾ. ವಿ. ಗಂಗಾಧರಸ್ವಾಮಿ, ವ್ಯಾನ್. ಕಾವ್. ಫೆಸ್ಟ್‌ನ ಸಂಚಾಲಕರಾದ ಕು. ಎಂ.ಕೆ. ಉಷಾರಾಣಿ ಮತ್ತು ಫೆಸ್ಟ್‌ನ ಸಹ-ಸಂಯೋಜಕರಾದ ಡಾ. ಎಸ್. ಗೀತಾರವರು ಉಪಸ್ಥಿತರಿದ್ದರು. ಕಾಲೇಜಿನ ಸಿಬ್ಬಂದಿ ವರ್ಗ ಮತ್ತು ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಕು. ನಿಖಿತಾ ಭಟ್ ಮತ್ತು ತಂಡದವರು ಪ್ರಾರ್ಥಿಸಿದರು. ಕು. ಎಂ ಕವನ ಸ್ವಾಗತಿಸಿದರು. ಕು. ಐಶ್ವರ್ಯ ಶಿವಾನಂದ ವಂದಿಸಿದರು. ಕು. ಎನ್. ಪುಣ್ಯ ಕಾರ್ಯಕ್ರಮ ನಿರೂಪಿಸಿದರು.

## ಅಂತರಂಗವನ್ನು ಬೆಳಗಿಸುವ ಶಕ್ತಿ ಮುದ್ದುರಾಮ ಕಾವ್ಯಕ್ಕಿದೆ

ಅಂತರಂಗವನ್ನು ಬೆಳಗಿಸುವ ಶಕ್ತಿ ಮುದ್ದುರಾಮ ಕಾವ್ಯಕ್ಕಿದೆ ಎಂದು ಖ್ಯಾತ ವಾಗ್ಮಿಗಳು, ಚಿಂತಕರಾದ ಪ್ರೊ. ಎಂ. ಕೃಷ್ಣೇಗೌಡರವರು ಅಭಿಪ್ರಾಯಪಟ್ಟರು.

**ಮೈಸೂರಿನ ಸರಸ್ವತಿಪುರಂನ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ** ಮೈಸೂರು ಜಿಲ್ಲೆಯ ಮುದ್ದುರಾಮ ಬಳಗ ಹಾಗೂ ಕಾಲೇಜಿನ ಕನ್ನಡ ವಿಭಾಗದ




ಸಂಯುಕ್ತಾಶ್ರಯದಲ್ಲಿ ಏರ್ಪಡಿಸಿದ್ದ ಉಪನ್ಯಾಸ ಕಾರ್ಯಕ್ರಮದಲ್ಲಿ 'ಮುದ್ದುರಾಮ – ಒಂದು ಪರಿಮಳದ ಪಯಣ ವಿಷಯ ಕುರಿತು ಅವರು ಮಾತನಾಡಿದರು. ಮುದ್ದುರಾಮ ಕಾವ್ಯ ಅರ್ಥ ಮತ್ತು ನಾದದ ಮಾರ್ಗವನ್ನು ಅನುಭವಿಸುವಂತೆ ಪ್ರೇರೇಪಿಸುತ್ತದೆ. ನಾವು ನಮ್ಮ ಹೊರಗಿನ ಮತ್ತು ಒಳಗಿನ ಲೋಕದೊಂದಿಗೆ ಪಯಣಿಸಬೇಕಿದೆ. ಮುದ್ದುರಾಮನ ಚೌಪದಿಗಳು ದಿವ್ಯತೆಯ ದರ್ಶನವನ್ನು ನೀಡುತ್ತವೆ ಎಂದರು.

ಮುದ್ದುರಾಮ ಬಳಗದ ಸಂಚಾಲಕರಾದ ಡಾ. ಹೆಚ್.ಬಿ. ಬೆಟ್ಟಸ್ವಾಮಿಯವರು ಪ್ರಾಸ್ತಾವಿಕ ನುಡಿಯಲ್ಲಿ ಮನುಷ್ಯ ಜಗತ್ತಿನಲ್ಲಿ ಮೌಲ್ಯಗಳಿಗೆ ಶ್ರೇಷ್ಠ ಸ್ಥಾನವಿದೆ. ಸರ್ವಕಾಲಕ್ಕೂ ಬೇಕಿರುವ ಜ್ಞಾನವನ್ನು ಪಸರಿಸುವ ಆಶಯವನ್ನು ಮುದ್ದುರಾಮ ಬಳಗ ಹೊಂದಿದೆ. ಮನುಷ್ಯ ಕುಲವನ್ನು ಸಂತೈಸುವ ತಾಯ್ತನದ ಶಕ್ತಿ ಮುದ್ದುರಾಮನ ಚೌಪದಿಗಳಿಗಿವೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾಲೇಜು ಶಿಕ್ಷಣ ವಿಭಾಗದ ನಿರ್ದೇಶಕರಾದ ಪ್ರೊ. ವೊರಬದ ಮಲ್ಲಿಕಾರ್ಜುನರವರು ಸೃಜನಶೀಲ ಮನಸ್ಸು ಶ್ರೇಷ್ಠ ಮಟ್ಟದ ಆಲೋಚನೆಯಿಂದ ರೂಪಿತವಾಗುತ್ತದೆ. ಮುದ್ದುರಾಮನ ಚೌಪದಿಗಳು ಭಾರತೀಯ ಜ್ಞಾನ ಪರಂಪರೆಯ ಮುಂದುವರಿಕೆಯಾಗಿದ್ದು, ಪರಂಪರೆಯನ್ನು ವಿಸ್ತರಿಸುವ ಕಾರ್ಯವನ್ನು ಚೌಪದಿಗಳು ಸಾಧಿಸಿವೆ. ಬದುಕಿನಲ್ಲಿ ಸಾರ್ಥಕತೆಯನ್ನು ಸಾಧಿಸುವುದಕ್ಕೆ ಸಾಧ್ಯ ಎಂಬುದನ್ನು ಕಾವ್ಯ ತಿಳಿಸುತ್ತದೆ ಎಂದರು.

ವೇದಿಕೆಯಲ್ಲಿ ಕಾಲೇಜಿನ ಪ್ರಾಚಾರ್ಯರಾದ ಡಾ. ರೇಚಣ್ಣರವರು ಉಪಸ್ಥಿತರಿದ್ದರು. ಕು. ದಿಶಾ ಮತ್ತು ಕು. ಅನಘ ಭಟ್ ಪ್ರಾರ್ಥಿಸಿದರು. ಕು. ಎಸ್.ಎಂ. ಸಹನಾ ಸ್ವಾಗತಿಸಿದರು. ಕು. ವಿನುತ ವಂದಿಸಿದರು. ಕು. ಅಪರಂಜಿ ಕಾರ್ಯಕ್ರಮ ನಿರೂಪಿಸಿದರು. ಅಧ್ಯಾಪಕರು ಮತ್ತು ಅಧ್ಯಾಪಕೇತರ ವರ್ಗದವರು ಭಾಗವಹಿಸಿದ್ದರು.

ಮುದ್ದುರಾಮನ ಚೌಪದಿಗಳನ್ನು ವಿದುಷಿ ಶುಭಾ ರಾಘವೇಂದ್ರ ವಾಚಿಸಿದರು.

## ಗಣರಾಜ್ಯೋತ್ಸವ

### ಜೆಎಸ್‌ಎಸ್ ಕಲಾ ಮತ್ತು ವಾಣಿಜ್ಯ ಕಾಲೇಜು, ಗುಂಡ್ಲುಪೇಟೆ



**ಗುಂಡ್ಲುಪೇಟೆಯ ಜೆಎಸ್‌ಎಸ್ ಕಲಾ ಮತ್ತು ವಾಣಿಜ್ಯ ಕಾಲೇಜಿನಲ್ಲಿ** 77ನೇ ಗಣರಾಜೋತ್ಸವವನ್ನು ಆಚರಿಸಲಾಯಿತು. ಧ್ವಜಾರೋಹಣವನ್ನು ಶಿಕ್ಷಕರಾದ ಶ್ರೀ ಎಸ್. ಮಹೇಶ್ ನೆರವೇರಿಸಿದರು. ರಾಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಡಾ. ಹೆಚ್.ಪಿ. ಪಂಕಜರವರು ಮಾತನಾಡಿ ಗಣ ಎಂದರೆ ಸಮೂಹ. ಅಂದರೆ 1947ಕ್ಕೂ ಹಿಂದೆ ಹಂಚಿ ಹೋಗಿದ್ದ ರಾಜ್ಯಗಳನ್ನು ಒಗ್ಗೂಡಿಸಿ ನಮ್ಮ ದೇಶದ ಆಡಳಿತ ವ್ಯವಸ್ಥೆ ಸುಗಮವಾಗಿ ನಡೆಯಲು ಸಂವಿಧಾನ ಅಸ್ತಿತ್ವಕ್ಕೆ ಬಂತು. ನಮ್ಮ ಸಂವಿಧಾನ ದೊಡ್ಡ ಸಂವಿಧಾನವಾಗಿದ್ದು ಇದನ್ನು 26 ನವೆಂಬರ್ 1949ರಂದು ಅಂಗೀಕರಿಸಿಕೊಂಡಿದ್ದೇವೆ. ಹಾಗೆಯೇ ಜನವರಿ 26 ಅನ್ನು ಸಂವಿಧಾನ ದಿನವಾಗಿ ಆಚರಿಸುತ್ತೇವೆ. ಸಂವಿಧಾನವನ್ನು ಇಂಗ್ಲಿಷ್ ಹಾಗೂ ಹಿಂದಿ ಭಾಷೆಯಲ್ಲಿ ರಚಿಸಲಾಗಿದೆ. ಸಂವಿಧಾನವು ದೇಶದ ಸರ್ವೋಚ್ಚ ಕಾನೂನಾಗಿದ್ದು ಉತ್ತಮ ರೀತಿಯಲ್ಲಿ ಪಾಲಿಸುವ ಮೂಲಕ ಶಾಂತಿ ಸುವ್ಯವಸ್ಥೆ ಕಾಪಾಡಬೇಕೆಂದು ತಿಳಿಸಿದರು.

ವಿದ್ಯಾರ್ಥಿಗಳಾದ ಕು. ಸ್ಫೂರ್ತಿ ಮತ್ತು ಕು. ಕನ್ನಿಕಾ ಗಣರಾಜೋತ್ಸವ ದಿನಾಚರಣೆಯ ಮಹತ್ವ ಕುರಿತು ಭಾಷಣ ಮಾಡಿದರು.

ಪದವಿ ಕಾಲೇಜಿನ ಪ್ರಾಚಾರ್ಯರಾದ ಡಾ. ಪಿ. ಮಹದೇವಮ್ಮ ಮಾತನಾಡಿ ಮಾನವೀಯತೆಯಿಂದ ಬದುಕಬೇಕಾದರೆ ಸಂವಿಧಾನವನ್ನು ಅನುಸರಿಸಬೇಕು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಶ್ರೀ ಮಲ್ಲಪ್ಪ, ಪ್ರೌಢಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ ಹೆಚ್.ಪಿ. ಪಶುಪತಿ, ರಾಷ್ಟ್ರೀಯ ಹಬ್ಬಗಳ ಸಮಿತಿ ಸಂಚಾಲಕರಾದ ಶ್ರೀ ಟಿ.ಎಂ ಮರಿಸ್ವಾಮಿ, ದೈಹಿಕ ಶಿಕ್ಷಣ ವಿಭಾಗ ನಿರ್ದೇಶಕರಾದ ಶೀ ಎನ್. ಮಲ್ಲುಸ್ವಾಮಿ, ಐಕ್ಯೂಎಸಿ ಸಂಚಾಲಕರಾದ ಶ್ರೀ ಸಿ.ಎಂ. ಮಣಿಕಂಠ, ಎನ್‌ಸಿಸಿ ಅಧಿಕಾರಿಗಳಾದ ಕ್ಯಾಪ್ಟನ್ ಹೆಚ್.ಕೆ. ಪ್ರಭುಸ್ವಾಮಿ, ದೈಹಿಕ ಶಿಕ್ಷಣ ಶಿಕ್ಷಕರಾದ ಶ್ರೀ ಹೆಚ್.ಎಸ್. ರಾಜಶೇಖರಪ್ಪ ಹಾಗೂ ಸ್ಕೌಟ್ಸ್ ಮತ್ತು ಗೈಡ್ಸ್‌ನ ರೋವರ್ಸ್ ಲೀಡರ್ಸ್ ಆದ ಶ್ರೀ ಎನ್. ಗುರುಪ್ರಸಾದ್‌ರವರು ಉಪಸ್ಥಿತರಿದ್ದರು. ಅಧ್ಯಾಪಕ, ಅಧ್ಯಾಪಕೇತರ ವರ್ಗದವರು, ಎನ್‌ಸಿಸಿ ಕೆಡೆಟ್‌ಗಳು ಹಾಗೂ ವಿದ್ಯಾರ್ಥಿಗಳು ಹಾಜರಿದ್ದರು.

ಕು. ಯೋಗಿನಿ ಮತ್ತು ತಂಡದವರು ಪ್ರಾರ್ಥನೆಯನ್ನು ನೆರೆವೇರಿಸಿದರು. ಕು. ಮೋನಿಕ ಸ್ವಾಗತಿಸಿದರು. ಕು. ಬಿಂದುಶ್ರೀ ವಂದಿಸಿದರು ಕು. ಅರ್ಚನಾ ಕಾರ್ಯಕ್ರಮವನ್ನು ನಿರೂಪಿಸಿದರು.

## ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು, ನಂಜನಗೂಡು




**ನಂಜನಗೂಡಿನ ಜೆಎಸ್‌ಎಸ್ ಕಾಲೇಜಿನ ಸಮುಚ್ಚಯದಲ್ಲಿ** ನಡೆದ 77ನೇ ಗಣರಾಜ್ಯೋತ್ಸವದ ಧ್ವಜಾರೋಹಣ ನೆರವೇರಿಸಿ ಮಾತನಾಡಿದ ಮೈಸೂರಿನ ಜೆಎಸ್‌ಎಸ್ ವೈದ್ಯಕೀಯ ಕಾಲೇಜಿನ ನ್ಯೂರೋ ಸರ್ಜರಿ ವಿಭಾಗದ ಮುಖ್ಯಸ್ಥರು ಹಾಗೂ ಪ್ರಾಧ್ಯಾಪಕರಾದ ಕರ್ನಲ್ ಡಾ. ಟಿ.ಎಸ್. ವಾಸನ್‌ರವರು, 26 ಜನವರಿ 1950ರಂದು ಡಾ. ಬಿ.ಆರ್. ಅಂಬೇಡ್ಕರ್ ನೇತೃತ್ವದಲ್ಲಿ ಸಿದ್ಧವಾದ ಸಂವಿಧಾನವು ಜಾರಿಗೆ ಬಂದಿತು. ದೇಶವು ಸಾರ್ವಭೌಮ ಪ್ರಜಾಸತ್ತಾತ್ಮಕ ಗಣರಾಜ್ಯವಾಗಿ ಪರಿವರ್ತಿತವಾದ ಐತಿಹಾಸಿಕ ದಿನದ ನೆನಪನ್ನು ಗಣರಾಜ್ಯೋತ್ಸವ ಮಾಡಿಕೊಡುತ್ತದೆ. ದೇಶದ ಸೇನೆಯು ಅತ್ಯಂತ ದಕ್ಷ ಹಾಗೂ ಪ್ರಾಮಾಣಿಕತೆಯಿಂದ ಸೇವೆ ಸಲ್ಲಿಸುತ್ತಾ ದೇಶದ ಸಾರ್ವಭೌಮತ್ವ ಹಾಗೂ ಸಮಗ್ರತೆಯನ್ನು ಎತ್ತಿ ಹಿಡಿಯುವಲ್ಲಿ ಪ್ರಧಾನ ಪಾತ್ರ ವಹಿಸುತ್ತಿದೆ. ಸಂವಿಧಾನದಲ್ಲಿ ದೇಶದ ಜನರೇ ತಮ್ಮ ಸರ್ಕಾರವನ್ನು ಆಯ್ಕೆ ಮಾಡಿ ಪ್ರಾಜಾಪ್ರಭುತ್ವ ವ್ಯವಸ್ಥೆಯ ಅಡಿಪಾಯವನ್ನು ಸದಾ ಭದ್ರವಾಗಿಸಿದ್ದಾರೆ. ವಿವಿಧತೆಯಲ್ಲಿ ಏಕತೆಯನ್ನು ಸಾರುವ ಅಖಂಡ ಭಾರತದ ಎಲ್ಲಾ ಪ್ರಜೆಗಳು ಸೇವಾ ಮನೋಭಾವನೆಯಿಂದ ನಿಸ್ವಾರ್ಥ ಸೇವೆ ಸಲ್ಲಿಸಿ ಆನಂತರ ಸ್ವಾತಂತ್ರ್ಯವನ್ನು ಅನುಭವಿಸಿ ದೇಶ ಸೇವೆಯನ್ನು ಮಾಡಬೇಕೆಂದು ಹೇಳಿದರು.

ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಶ್ರೀ ಕೆ.ಎನ್. ಶಿವಕುಮಾರ್‌ರವರು, ದೇಶದ ಸ್ವಾತಂತ್ರ್ಯಕ್ಕಾಗಿ ತ್ಯಾಗ ಬಲಿದಾನ ಮಾಡಿದ ಅನೇಕ ಮಹನೀಯರ ಕನಸು ನನಸಾಗಬೇಕಾದರೆ ಇಂದಿನ ಯುವ ಜನತೆ ದೇಶದ ಸಮಗ್ರತೆಯ ಪರಿಕಲ್ಪನೆಯನ್ನು ಮನಗಾಣಬೇಕು. ಪ್ರಜ್ಞಾ ಪೂರಕವಾದ ಮತದಾರರಾಗಿ ಸುಭದ್ರ ದೇಶವನ್ನು ನಿರ್ಮಾಣ ಮಾಡುವಲ್ಲಿ ಹೆಚ್ಚಿನ ಜವಾಬ್ದಾರಿಯನ್ನು ನಿರ್ವಹಿಸಬೇಕೆಂದು ಅಭಿಪ್ರಾಯಪಟ್ಟರು.

ಪ್ರಾಂಶುಪಾಲರಾದ ಡಾ. ಸಿ.ಎಸ್. ಹೊನ್ನೇಗೌಡರವರು ಮಾತನಾಡುತ್ತಾ ಭಾರತದ ಸಂವಿಧಾನ ವಿಶ್ವದ ಎಲ್ಲ ರಾಷ್ಟ್ರಗಳಿಗೆ ಮಾದರಿಯಾಗಿದೆ. ಇಂದಿನ ಯುವ ಜನತೆ ಸಂವಿಧಾನವನ್ನು ಅಧ್ಯಯನ ಮಾಡಿ ಪ್ರಜಾಪ್ರಭುತ್ವ ವ್ಯವಸ್ಥೆಯ ಅಗತ್ಯತೆಯನ್ನು ಮನಗಾಣಬೇಕು. ಸರ್ವಧರ್ಮಗಳನ್ನು ಗೌರವಿಸಬೇಕು. ದೇಶದ ಸಮಗ್ರತೆ ಹಾಗೂ ಐಕ್ಯತೆಗಾಗಿ ಶ್ರಮಿಸಬೇಕು ಎಂದರು.

ಎನ್‌ಸಿಸಿ ಅಧಿಕಾರಿ ಶ್ರೀ ಕೆ.ಜೆ. ಶಶಿಕುಮಾರ್, ಪದವಿಪೂರ್ವ ಮತ್ತು ಪದವಿ ವಿಭಾಗದ ರಾಷ್ಟ್ರೀಯ ಹಬ್ಬಗಳ ಸಮಿತಿ ಸಂಚಾಲಕರುಗಳಾದ ಶ್ರೀ ಜಿ. ಗೂಳಪ್ಪಸ್ವಾಮಿ ಮತ್ತು ಶ್ರೀ ಪಿ.ಎಂ. ವಿಕ್ರಂ ಉಪಸ್ಥಿತರಿದ್ದರು.

ಅಧ್ಯಾಪಕರು, ಅಧ್ಯಾಪಕೇತರರು, ಎನ್‌ಸಿಸಿ ಕೆಡೆಟ್‌ಗಳು ಹಾಗೂ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು. ಅಂತಿಮ ಬಿಬಿಎ ವಿದ್ಯಾರ್ಥಿನಿ ಕು. ಬಿಂದು ಮತ್ತು ತಂಡದವರು ದೇಶ ಭಕ್ತಿಗೀತೆಯನ್ನು ಹಾಡಿದರು. ಪದವಿಪೂರ್ವ ಕಾಲೇಜಿನ ರಾಜ್ಯಶಾಸ್ತ್ರ ಉಪನ್ಯಾಸಕರಾದ ಶ್ರೀಮತಿ ಬಿ. ರೂಪ ಸ್ವಾಗತಿಸಿದರು. ಭೌತಶಾಸ್ತ್ರ ಸಹಾಯಕ ಪ್ರಾಧ್ಯಾಪಕರಾದ ಶ್ರೀ ಆರ್. ರವಿತೇಜ ವಂದಿಸಿದರು. ಹಾಗೂ ಕನ್ನಡ ಉಪನ್ಯಾಸಕರಾದ ಕು. ಯಶೋಧರವರು ಕಾರ್ಯಕ್ರಮ ನಿರೂಪಿಸಿದರು.

## ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು, ಮೈಸೂರು

ಭಾರತೀಯ ಸಂವಿಧಾನ ಶ್ರೇಷ್ಠವಾದ ಸಂವಿಧಾನವಾಗಿದೆ. ಇದರ ರಚನೆಯ ಹಿಂದೆ ಹಲವರ ಪರಿಶ್ರಮವಿದೆ. ಸಂವಿಧಾನದ ರಚನೆಯ ಇತಿಹಾಸ ಅವಿಸ್ಮರಣೀಯವಾದದ್ದು. ಇಂದಿನವರಿಗೆ ಈ ಇತಿಹಾಸದ ಅರಿವಿರಬೇಕು. ಗಣರಾಜ್ಯೋತ್ಸವದ ದಿನ ಕೇವಲ ಆಚರಣೆಗೆ ಸೀಮಿತವಾಗದೆ, ರಾಷ್ಟ್ರನಾಯಕರ ತ್ಯಾಗ ಬಲಿದಾನಗಳನ್ನು ಸ್ಮರಿಸಬೇಕು. ಅವರ ಆದರ್ಶಗುಣಗಳನ್ನು ಅಳವಡಿಸಿಕೊಳ್ಳಬೇಕು ಎಂದು ಮೈಸೂರಿನ ನಿವೃತ್ತ ಇತಿಹಾಸ ಪ್ರಾಧ್ಯಾಪಕರಾದ ಪ್ರೊ. ಬಿ. ಪರಮೇಶ್ವರರವರು ಹೇಳಿದರು.

**ಮೈಸೂರಿನ ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಕಾಲೇಜಿನಲ್ಲಿ** ನಡೆದ 77ನೆಯ ಗಣರಾಜ್ಯೋತ್ಸವ ದಿನಾಚರಣೆಯ ಮುಖ್ಯ ಅತಿಥಿಗಳಾಗಿ ಆಗಮಿಸಿ ಅವರು ಮಾತನಾಡಿದರು. ಭಾರತವನ್ನು ಇನ್ನೂರು ವರ್ಷಗಳವರೆಗೆ ಆಳಿದ ಬ್ರಿಟೀಷರು ಊಹಿಸಲಾಗದಂತೆ ಉತ್ತಮ ಸಂವಿಧಾನ ನೀಡಿದ ಹೆಗ್ಗಳಿಕೆ ಭಾರತೀಯರದ್ದು. ಈ ಸಂವಿಧಾನದ ರಚನೆಯ ಹಿಂದೆ ಕರ್ನಾಟಕದ ಬೆನಗಲ್ ನರಸಿಂಗರಾವ್ ಅವರ ಕೊಡುಗೆಯೂ ಸ್ಮರಣೀಯವಾದದ್ದು. ಡಾ. ಬಿ.ಆರ್. ಅಂಬೇಡ್ಕರ್ ಅವರನ್ನು ಸಂವಿಧಾನ ಶಿಲ್ಪಿ ಎಂದು ಕರೆಯುವ ಅನ್ವರ್ಥಕ್ಕೆ ತಕ್ಕಂತೆ ಅವರ ಪರಿಶ್ರಮ ಗುರುತರವಾದದ್ದು ಎಂದರು.

ಕಾಲೇಜಿನ ಮುಖ್ಯ ಕಾರ್ಯನಿರ್ವಾಹಕರಾದ ಪ್ರೊ. ಬಿ.ವಿ. ಸಾಂಬಶಿವಯ್ಯನವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಧ್ವಜಾರೋಹಣ ನೆರವೇರಿಸಿದರು. ಪದವಿ ಕಾಲೇಜಿನ ಪ್ರಾಂಶುಪಾಲರಾದ ಡಾ. ಎಂ. ಪ್ರಭುರವರು ಸ್ವಾಗತಿಸಿದರು. ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಶ್ರೀ ಎಚ್.ಪಿ. ಮಹದೇವಸ್ವಾಮಿ ವಂದಿಸಿದರು. ಭೌತಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಕ್ಯಾಪ್ಟನ್. ಡಾ. ಎಲ್. ವಿನಯ್‌ಕುಮಾರ್ ನಿರೂಪಿಸಿದರು. ವಿದ್ಯಾರ್ಥಿನಿ ಕು. ಅದಿತಿ ಹೆಗ್ಡೆ ಪ್ರಾರ್ಥಿಸಿದರು.

## ಕೃತಕ ಬುದ್ಧಿಮತ್ತೆಯು ಶಿಕ್ಷಣ ಕ್ರಾಂತಿ ಸಾಧಿಸಿದೆ

**ಮೈಸೂರಿನ ಸರಸ್ವತಿಪುರಂನಲ್ಲಿರುವ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ** ಸಂಸ್ಥೆಯ ನಾವೀನ್ಯತಾ ಮಂಡಳಿ ಹಾಗೂ ಐಕ್ಯುಎಸಿ ಇವರ ಸಂಯುಕ್ತಾಶ್ರಯದಲ್ಲಿ ದಿನಾಂಕ 24.1.2026ರಂದು "ಸ್ಮಾರ್ಟ್ ಟೀಚಿಂಗ್: ತರಗತಿಯಲ್ಲಿ ಎಐ ಉಪಕರಣಗಳ ಸಂಯೋಜನೆ" ಎಂಬ ವಿಷಯದ ಬಗ್ಗೆ ಒಂದು ದಿನದ ಕಾರ್ಯಾಗಾರವನ್ನು ಆಯೋಜಿಸಲಾಗಿತ್ತು.

ಕಾರ್ಯಾಗಾರದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿ ಉಪನ್ಯಾಸ ಮಾಡಿದ ಮೈಸೂರಿನ ಎಸ್‌ಜೆಸಿಇ ಗಣಕ ವಿಜ್ಞಾನ ಮತ್ತು ಇಂಜಿನಿಯರ್ ವಿಭಾಗದ ಪ್ರಾಧ್ಯಾಪಕಿಯಾದ ಡಾ. ಎಂ.ಎ. ಅನುಸೂಯರವರು ತಂತ್ರಜ್ಞಾನದೊಂದಿಗೆ ಶಿಕ್ಷಣವು ಗಣನೀಯವಾಗಿ ಬೆಳವಣಿಗೆ ಸಾಧಿಸಿದ್ದು ಅದರ ಪರಿಣಾಮಕಾರಿತ್ವವನ್ನು ಹೆಚ್ಚಿಸಿದೆ ಶಿಕ್ಷಣದಲ್ಲಿ ತಂತ್ರಜ್ಞಾನದ ಪಾತ್ರ ಮಹತ್ವವಾದುದು.



ಕೃತಕ ಬುದ್ಧಿಮತ್ತೆ (ಎಐ) ಶಿಕ್ಷಣ ಹಾಗೂ ಸಂಶೋಧನೆ ಎರಡನ್ನೂ ಬೆಂಬಲಿಸುತ್ತದೆ. ಶಿಕ್ಷಣವನ್ನು ಹೆಚ್ಚು ಆಕರ್ಷಕ ಮತ್ತು ಪರಿಣಾಮಕಾರಿಯಾಗಿಸಲು ಎಐಯನ್ನು ಜವಾಬ್ದಾರಿಯುತ ಮತ್ತು ನೈತಿಕವಾಗಿ ಬಳಸಬೇಕಿದೆ ಎಂದರು.

ಮತ್ತೋರ್ವ ಸಂಪನ್ಮೂಲ ವ್ಯಕ್ತಿಗಳಾದ ಮೈಸೂರಿನ ಎಸ್‌ಜೆಸಿಇ ಇನ್ಫರ್ಮೇಶನ್ ಸೈನ್ಸ್ ಅಂಡ್ ಎಂಜಿನಿಯರಿಂಗ್ ವಿಭಾಗದ ಸಹಾಯಕ ಪ್ರಾಧ್ಯಾಪಕಿ ಡಾ. ಎಚ್.ವೈ. ವಾಣಿಯವರು ಮಾತನಾಡುತ್ತಾ, ಎಐಯು ಶಿಕ್ಷಣ ಕಲಿಕಾ ಪ್ರಕ್ರಿಯೆಯನ್ನು ಸಂಪೂರ್ಣವಾಗಿ ಬದಲಾಯಿಸಿದೆ. ಕಲಿಕೆಯ ಫಲಿತಾಂಶಗಳನ್ನು ಸುಧಾರಿಸಲು ಇದನ್ನು ಸರಿಯಾದ ರೀತಿಯಲ್ಲಿ ಬಳಸಬೇಕು ಎಂದರು. ತರಗತಿಗಳ ಬಳಕೆಗೆ ಸೂಕ್ತವಾದ ಹಲವು ಉಪಯುಕ್ತ ಎಐ ಉಪಕರಣಗಳನ್ನು ಪ್ರಾತ್ಯಕ್ಷಿಕೆ ಮೂಲಕ ತಿಳಿಸಿದರು.

ವೇದಿಕೆಯಲ್ಲಿ ಪ್ರಾಂಶುಪಾಲರಾದ ಡಾ. ರೇಚಣ್ಣ ರವರು, ಐಕ್ಯುಎಸಿ ಸಂಚಾಲಕರಾದ ಶ್ರೀ ಹೆಚ್.ಜಿ. ಪ್ರದೀಪ್ ಹಾಗೂ ಸಂಸ್ಥೆಯ ನಾವೀನ್ಯತಾ ಮಂಡಳಿ ಸಂಚಾಲಕರಾದ ಡಾ. ಡುಕನ್ಯ ಉಪಸ್ಥಿತರಿದ್ದರು.

ಕಾಲೇಜಿನ ಅಧ್ಯಾಪಕರು ಕಾರ್ಯಾಗಾರದಲ್ಲಿ ಭಾಗವಹಿಸಿದ್ದರು. ಕು. ದಿಶಾ ಪ್ರಾರ್ಥಿಸಿದರು. ಸ್ನಾತಕೋತ್ತರ ವಾಣಿಜ್ಯ ವಿಭಾಗದ ಮುಖ್ಯಸ್ಥರಾದ ಡಾ. ಎಸ್. ಶಿಲ್ಪಾ ಸ್ವಾಗತಿಸಿದರು. ಆಂಗ್ಲವಿಭಾಗದ ಸಹಾಯಕ ಪ್ರಾಧ್ಯಾಪಕಿ ಶ್ರೀಮತಿ ಎಂ.ಬಿ. ಲಲಿತಾಂಬ ವಂದಿಸಿದರು. ಗಣಕ ವಿಜ್ಞಾನ ವಿಭಾಗದ ಸಹಾಯಕ ಪ್ರಾಧ್ಯಾಪಕಿ ಶ್ರೀಮತಿ ಎಚ್.ಯು. ಪ್ರೀತಿ ಕಾರ್ಯಕ್ರಮ ನಿರೂಪಿಸಿದರು.

## ವಧು–ವರದಕ್ಷಿಣೆ ಸ್ವೀಕಾರ ಶಿಕ್ಷಾರ್ಹ ಅಪರಾಧ

**ಕೊಳ್ಳೇಗಾಲದ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ** ದಿನಾಂಕ 27.1.2026ರಂದು ರಾಜ್ಯಶಾಸ್ತ್ರ ವಿಭಾಗದ ವತಿಯಿಂದ 'ವಧು–ವರದಕ್ಷಿಣೆ ವಿರೋಧಿ ಅರಿವು' ಎಂಬ ವಿಷಯ ಕುರಿತು ವಿಶೇಷ ಉಪನ್ಯಾಸ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಕೊಳ್ಳೇಗಾಲದ ಹಿರಿಯ ವಕೀಲರಾದ ಶ್ರೀಮತಿ ನಿರ್ಮಲ ಮಧುಸೂದನರವರು ಮಾತನಾಡಿ, ವರದಕ್ಷಿಣೆ ಎನ್ನುವುದು ಮದುವೆಯ ಸಂದರ್ಭದಲ್ಲಿ ವಧುವಿನ ಕುಟುಂಬವು ವರನಿಗೆ ಹಣ, ಆಸ್ತಿ ಅಥವಾ ಉಡುಗೊರೆಗಳನ್ನು ನೀಡುವುದಾಗಿದೆ. ಇದು ಸಾಮಾಜಿಕ ಪಿಡುಗಾಗಿದ್ದು ಹೆಣ್ಣು ಮಕ್ಕಳ ಮೇಲೆ ನಡೆಯುತ್ತಿರುವ ದೌರ್ಜನ್ಯವಾಗಿದೆ. ಹೆಣ್ಣುಮಕ್ಕಳು ಕೌಟುಂಬಿಕ ಹಿಂಸೆಗೆ ಒಳಗಾಗುತ್ತಿದ್ದಾರೆ. ಇಂತಹ ಮಾನಸಿಕ ಹಾಗೂ ದೈಹಿಕ ಕಿರುಕುಳವನ್ನು ತಪ್ಪಿಸುವ ಸಲುವಾಗಿ 1961ರಲ್ಲಿ ವರದಕ್ಷಿಣೆ ನಿಷೇಧ ಕಾಯ್ದೆ ಜಾರಿಗೆ




ಕೊಳ್ಳೇಗಾಲದ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ನಡೆದ 'ವಧು–ವರದಕ್ಷಿಣೆ ವಿರೋಧಿ ಅರಿವು' ಕಾರ್ಯಕ್ರಮದಲ್ಲಿ ಕೊಳ್ಳೇಗಾಲದ ಹಿರಿಯ ವಕೀಲರಾದ ಶ್ರೀಮತಿ ನಿರ್ಮಲ ಮಧುಸೂದನರವರು ಮಾತನಾಡುತ್ತಿರುವುದು. (27 ಜನವರಿ 2026)

ಬಂದಿದೆ. ವರದಕ್ಷಿಣೆ ನೀಡುವುದು ಮತ್ತು ತೆಗೆದುಕೊಳ್ಳುವುದು ಎರಡೂ ಶಿಕ್ಷಾರ್ಹ ಅಪರಾಧವಾಗಿದೆ. ನೀವು ವರದಕ್ಷಿಣೆ ಕೊಡುವುದಾಗಲಿ ಪಡೆಯುವುದಾಗಲಿ ಮಾಡಬಾರದೆಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಂಶುಪಾಲರಾದ ಡಾ. ಹೆಚ್.ಎಸ್. ಕೊಂಗಳಪ್ಪರವರು ವರದಕ್ಷಿಣೆ ಪಿಡುಗು ನಿವಾರಣೆಯಾಗಬೇಕಾದರೆ ಪ್ರತಿ ಕುಟುಂಬದಲ್ಲಿ ಜಾಗೃತಿ ಮೂಡಿಸುವುದು ಅನಿವಾರ್ಯ. ವಿದ್ಯಾರ್ಥಿನಿಯರು ಆ ಕೆಲಸ ನಿರ್ವಹಿಸಬೇಕೆಂದು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ರಾಜ್ಯಶಾಸ್ತ್ರ ಸಹಾಯಕ ಪ್ರಾಧ್ಯಾಪಕರಾದ ಡಾ. ಜಿ.ಎಸ್. ಸುಮ, ಅಧ್ಯಾಪಕರು, ಅಧ್ಯಾಪಕೇತರರು ಹಾಗೂ ವಿದ್ಯಾರ್ಥಿನಿಯರು ಉಪಸ್ಥಿತರಿದ್ದರು.




ಮೈಸೂರಿನ ಶ್ರೀ ಸುತ್ತೂರು ಮಠದಲ್ಲಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಜರುಗಿದ 287ನೇ ಬೆಳದಿಂಗಳ ಸಂಗೀತ ಕಾರ್ಯಕ್ರಮದಲ್ಲಿ ವಿದ್ವಾನ್ ಶಶಾಂಕ್ ಸುಬ್ರಹ್ಮಣ್ಯಂರವರು ವೇಣುವಾದನ ಪ್ರಸ್ತುತಿ ಪಡಿಸಿದರು. ವಯೊಲಿನ್‌ನಲ್ಲಿ ವಿದ್ವಾನ್ ನಿಶಾಂತ್ ಚಂದ್ರನ್, ಘಟಂನಲ್ಲಿ ವಿದ್ವಾನ್ ಜಿ.ಎಸ್. ರಾಮಾನುಜಂ ಹಾಗೂ ಮೃದಂಗದಲ್ಲಿ ವಿದ್ವಾನ್ ಅರ್ಜುನ್ ಕುಮಾರ್‌ರವರುಗಳು ಪಕ್ಕವಾದ್ಯ ಸಹಕಾರ ನೀಡಿದರು. (3 ಜನವರಿ 2026)

## MoU Signed




Dr. C. Nataraju, Principal, SJCE, JSS STU; Dr. B. Suresh, Director, Technical Education Division, JSS MVP; Sri Ravikiran Ramaswamy, Chief Human Resources Officer, Bajaj Auto Ltd.; Dr. S.A. Dhanaraj, Registrar, JSS STU; Dr. C.G. Betsurmath, Executive Secretary, JSSMVP; Dr. A.N. Santosh Kumar, Vice-Chancellor, JSS STU, Ms. Vidhyaa Lakshmi, CSR, Bajaj Auto Ltd., Sri Sudhakar Gudipati, Vice-President (CSR), Bajaj Auto Ltd.; Dr. B. Manjunath, Skill Development Co-ordinator, JSS STU.

**JSS Science and Technology University, Mysuru,** entered into an MoU with Bajaj Auto Ltd., one of India's leading automobile manufacturers and a reputed organization committed to excellence, values, and social responsibility, marking a significant step towards strengthening industry-academia collaboration and enhancing the employability of engineering graduates.

With a strong legacy of contributing to societal development, Bajaj Auto Ltd., has initiated a flagship Corporate Social Responsibility project, under which it has established dedicated centres known as Bajaj Engineering Skills Training (BEST). The BEST program is designed to upskill engineering graduates to enables them employment-ready, with a special focus on encouraging and promoting the participation of female students. The training program will equip them with relevant technical skills, industry-aligned knowledge, extensive hands-on practice, and the professional mindset required for employment in the manufacturing sector. The curriculum has been carefully designed to meet

current and future industry demands, with a specific focus on Electronics Manufacturing Systems and Firmware Development. The program will jointly be offered by JSS Science and Technology University and Bajaj Auto Ltd., for graduate engineers and will be conducted in their campus, strictly in accordance with the BEST framework. The scope of the MoU will cover the key areas including Industry-Oriented Projects, Guest Lectures, Exposure Visits to Industries and Placements. Interested Engineering, Diploma students from other institutes will also be trained with certification.

## JSS University System Vice-Chancellors' Leadership Conclave



The 1st JSS University System - Vice Chancellors' Leadership Conclave was held on the 12.1.2026 at **JSS Medical College, JSS Academy of Higher Education and Research (JSS AHER), Mysuru.** The theme of the conclave was "Navigating Global Transformation in Higher Education: Governance, Leadership, and System-Level Strategy in a Multinational University Ecosystem".

The meeting was chaired by Dr C.G. Betsurmath, Executive Secretary of JSS Mahavidyapeetha and guided by Dr. B. Suresh, Pro Chancellor of JSS AHER, Mysuru. The delegation from across the JSS University Systems actively participated, sharing their perspectives

on progressive growth through mutual collaborations towards a common shared vision, guided by collective leadership while respecting the autonomy of individual institutions.

Overview and Purpose: The JSS University System Vice-Chancellors' Leadership Conclave was convened as a strategic, forward-looking dialogue rather than an administrative review. Recognizing the profound transformations in global higher education, the conclave focused on shared reflection, institutional dynamism, and long-term planning. The core premise established was that the universities can no longer thrive in isolation, and, sustainable growth requires a collaborative ecosystem rooted in shared values and ethical leadership.

Core Philosophy: Unity with Diversity Operating under the guiding principle of "One Vision, Many Expressions," the conclave embraced the diverse identities, contexts, and strengths of its member institutions ("different flags, different waters"). Uniformity was vetoed in favour of an aligned, enabling university system that respects institutional autonomy while fostering mutual academic excellence.

**Strategic Pillars and Ecosystem Challenges**

- Dynamic Reputation: Institutional prestige is no longer reliant solely on legacy. It must be actively shaped through adaptive innovation, societal relevance, and a strong translation of vision into execution.
- Alignment with NEP 2020: The policy serves as a catalyst for ecosystem-wide transformation, emphasizing multidisciplinarity, Indian Knowledge Systems (IKS), ethical grounding, and collaborative resource sharing over isolated operations.
- Purpose-Driven Technology: Moving beyond mere digitization, the adoption of AI and immersive learning must fundamentally enhance pedagogy, research, and student engagement.
- Quality Over Scale: Acknowledging the broader Indian higher education landscape, the system is committed to pursuing depth, academic maturity, and rigorous governance to organically achieve global rankings and accreditations.

**Institutional Roles within the JSS Ecosystem:** The conclave delineated distinct, complementary strategic roles for its core institutions to maximize the system's global and national footprint:

- JSS Academy of Higher Education and Research (Mysuru): The system's pivotal mentor, leading in

health sciences, clinical/ interdisciplinary research, and the development of Centres of Excellence.

- JSS Science and Technology University (Mysuru): The strategic technology enabler, focused on research-intensive integration of engineering, digital innovation, and healthcare technologies.

- JSS University (Noida): The strategic Northern Gateway. Situated in the NCR, it leverages proximity to policy-makers, global corporations, and regulatory agencies for industry engagement and international visibility.

- JSS Academy of Higher Education and Research (Mauritius): The gateway to Africa and the Global South, acting as a dynamic testbed for digital experimentation, global outreach, and international faculty mobility.

**Key Outcomes and The Way Forward:** The conclave yielded a mandate for structured yet flexible collaboration, aiming to balance global competitiveness with local relevance.

- System-Level Initiatives: Shared digital platforms, joint doctoral supervision, faculty/student exchange programs, and unified global branding.

- Innovation: Further strengthening the existing incubation ecosystem to bridge teaching, research, and societal impact.

- The Draft Charter: The dialogue culminated in the Draft JSS University System Charter, mapping out a roadmap for trust-based governance and collaborative action.

Under the guidance of H.H. Swamiji, the conclave successfully established a foundation for an ongoing leadership dialogue, aiming for excellence with a multi-decade horizon.



## Annual Day Celebrated



**JSS Public School, J.P. Nagar, Mysuru,** celebrated its Annual Day on 3.1.2026, with enthusiasm and dignity in the presence of eminent dignitaries and parents.

The programme was graced by Sri K.R. Santhanam, Director of Accounts and Audit Divison, JSS Mahavidyapeetha, Mysuru; Sri Uday Kumar, Deputy Director of Public Instruction, Mysuru; Sri D.R. Amith, Reader, College of Teachers' Education, Mysuru; Sri Ashok Palya, Deputy Director, Public School Division, JSS Mahavidyapeetha, Sri Malangi Suresh, Vice-President, Karnataka State Government Employees' Division, Bengaluru; and Sri K. Suresh, Assistant Deputy Co-ordinator, DDPI's Office, Mysuru.

The programme began with a welcome address by the school's faculty, Smt. S. Rajeshwari. Smt. S.N. Archana, Principal, presented the Annual Report and expressed her deep appreciation for the hard work and dedication of everyone. Smt. Sujatha, Co-ordinator of Co-Curricular Activities, presented a comprehensive overview of the school's CCA activities in her report. The Annual

Day culminated in a motivating prize distribution ceremony, where awards were presented to academic achievers, sports champions, and winners of CCA competitions, inspiring other students to strive for excellence in their endeavours.

Sri Uday Kumar, Deputy Director of Public Instruction, appreciated the school for its consistent achievements under the guidance of Swamiji. He emphasized that education goes beyond marks and focuses on performance, values, kindness, and empathy. He advised the teachers to nurture moral values among the students and urged the parents not to compare their children, quoting Dr. A.P.J. Abdul Kalam to highlight the importance of humanity.

Sri D.R. Amith highlighted the vital role of parents in a child's development and stressed the need for a balance between discipline and affection. He cautioned against over-pampering and excessive strictness and advised the parents to avoid making comparisons, limit the mobile usage of their children and allow them to discover their real potential.

Sri Ashok Palya appreciated the school and emphasized the importance of guiding students towards the right courses, learning pathways, and career opportunities. He encouraged students to make effective use of available opportunities to shape their future and cited JSS institutions as examples of committed to quality education.

Sri K.R. Santhanam stated that knowledge is both joyful and transformative. Explaining that Abhivyakthothsava means expression, he emphasized that modern education should encourage self-expression along with academic learning. He motivated the students to dream big, trust their values, and view failures as stepping stones to success.

The programme concluded with a vote of thanks by Grade 10 student, Kum. Chaithanya Mahesh.

The function was followed by a vibrant cultural programme presented by students from LKG to Grade 10, showcasing their talents and creativity, making the event a memorable one.

□

## ICAR JSS Krishi Vigyan Kendra, Suttur



A one-day workshop on "Scientific Cultivation Practices, Marketing Facilities and Export Opportunities of Traditional Crops with Geographical Indication" was organized on 7.1.2026 at ICAR **JSS Krishi Vigyan Kendra, Suttur,** in association with Agricultural and Processed Food Products Export Development Authority (APEDA), Bengaluru.

Sri U. Dharma Rao, Regional Assistant Managing Director, APEDA, said that the basic objective of APEDA is to create an international market for agricultural products of traditional crops with geographical indication. He was also of the opinion that suitable guidance should be provided to the farmers through APEDA to sell their agricultural products of traditional importance.

Sri C.S. Chandru, Assistant Director of Horticulture, Nanjangud, informed the farmers that cultivation of Nanjangud Rasabale has drastically come down and it should be cultivated more and more as it fetches good price in the market. He also said that special incentives would be given for cultivating GI crops of Mysuru District.

Smt. Madhumathi Andrews, Manager, APEDA, Bengaluru said that, if farmers register themselves with APEDA through Horticulture Department and cultivate traditional crops with geographical indication of Mysuru district, APEDA will provide assistance up to Rs. 5 lakhs. Farmer

Producer Organisations and Self-Help Groups can also register with the APEDA and get subsidy for their crops and sell their produce globally.

Dr. B.K. Pooja, Assistant Manager, APEDA, who spoke on the occasion, said that agricultural products can be categorized as scheduled and non-scheduled products and registered with APEDA to sell high quality products. Every country has its own rules in the international market and according to those rules, agricultural products can be sold, with the guidance of APEDA, she opined.

The event was presided over by Dr. B.N. Gnanesh, who called upon the farmers to cultivate different crops according to the season, instead of growing the same crop in every season and to maintain the fertility of the soil. He also discussed the difference between natural farming and organic farming and its pros and cons. The traditional crops of Mysore District like Nanjangud Rasabale, Mysore Betel leaf, Mysore Vilyadele, and Eeranagere Badanekayi have good market value. He advised the farmers to evince more interest in cultivating these crops. KVK will provide all the technical guidance for growing these GI crops with the support of APEDA. GI Banana and Mysuru Betel Leaf will be exported to foreign countries shortly. At the same time, the farmers should know more about the Central Government's scheme Vikasit Bharat Ji Ram Ji.

Dr. G.M. Vinay and Dr. Y.P. Prasad, Subject Specialists, provided information about methods of cultivation of traditional crops of the district. Dr. G.M. Vinay delivered the introductory speech, whereas Dr. Prasad welcomed the audience and also compered the programme. Dr. Deepak delivered vote of thanks. More than 120 farmers - men and women - participated in the programme.

## Youth Dialogue and Community Engagement

The Social Responsibility Cell (ARPAN), **JSS Science and Technology University, Mysuru** conducted an "Open Space for Youth Dialogue and Community Engagement" on 10.1.2026 at the IS Seminar Hall. The event was held in collaboration with M/s. Reap Benefit Organization.

There were 86 participants in the event, providing an inclusive platform to share skills, ideas, live experiences and social initiatives. Diverse themes




such as sustainability, urban mobility, self-motivation, public health, culture, arts and community problem-solving were discussed through youth-led presentations and performances.

The programme encouraged civic awareness, leadership, creativity and social responsibility, aligning strongly with the university's vision of holistic education and community engagement. The active participation and vibrant discussions reflected the growing interest of youth in contributing meaningfully to society.

## JSS Science and Technology University, Mysuru



An Awareness Programme on "Intellectual Property : Patents and Designs" was held on 10.1.2026 by the Department of CSE, **JSS Science and Technology University, Mysuru**, focusing on CSE faculties to help the students to understand patent process. Sri M. Madan Kumar (Cognizant Technology Solutions, Bengaluru), Sri M.G. Nagarjun (IPTel, IISc Bengaluru), and Dr. H.R. Chennamma (IPM Cell, JSS STU) were the resource-persons.

## Orientation Program Conducted



The Internal Complaints Committee - Women's Grievance Cell at **JSS Dental College & Hospital, Mysuru**, organized an orientation programme titled "Workplace Sexual Harassment - Issues and Challenges" on 14.1.2026 for 1st Year students of BDS/MDS and the newly joined faculty.

The session was conducted by Dr. C.P. Nandini, Professor of Law and Former Registrar, Damodaram Sanjivayya National Law University (DSNLU), Vishakhapatnam, who provided an in-depth and practical overview of workplace sexual harassment. She explained the concept, various forms and consequences of sexual harassment, with special emphasis on its relevance in academic and healthcare institutions. Key issues such as lack of awareness, under-reporting of complaints, power dynamics, and the importance of maintaining professional conduct were also highlighted.

The provisions of the Sexual Harassment of Women at Workplace (Prevention, Prohibition and Redressal) Act, 2013 were discussed in detail, including preventive measures, role and functions of the Internal Complaints Committee, and the procedures for complaint redressal. Emphasis should be placed on confidentiality, institutional accountability, and the shared responsibility of all stakeholders in creating a safe working environment for women. The event effectively enhanced awareness, promoted gender sensitivity, and reinforced the institution's commitment to ensuring a safe, respectful, and inclusive workplace.

When I did not know myself
What were You then, tell me, O Lord.
Then, You were silent.
This I came to see through Your eyes.
After I came to know myself
You spoke, opening your mouth.
Seeing that with my eyes, I was abashed.
I who see You, and You who see me,
Between us there is only
one sight that unites us.
The mysterious glory of yours,
O Guheshwara, I came to realize.

## Republic Day Celebrated

### JSS Public School, SJCE Campus, Mysuru

**JSS Public School, SJCE Campus, Mysuru,** celebrated the Republic Day on 26.1.2026, with a patriotic spirit. The programme commenced with a ceremonial march by the School Band, welcoming the dignitaries and the Principal. This was followed by hoisting of the National Flag and the singing of the National Anthem.

The faculty members rendered the patriotic song "Jhanda Uncha Rahe Hamara," adding solemnity to the occasion. The welcome address was delivered by Smt. Kathyayini of the IT Department. The significance of the day was explained by Ms. Kavita of Social Science Department, emphasizing constitutional values and national unity. A patriotic dance was presented by students of Grades 6, 7 and 8.

The Presidential Address was delivered by Smt. K.B. Suma, Principal, highlighted the importance of unity, discipline, and responsible citizenship. The programme concluded with vote of thanks by Smt. Vidyashree of Social Science Department. The programme was anchored by Smt. Shyla of Social Science Department.

### JSS Public School, Siddhartha Nagar, Mysuru

The 77th Republic Day was celebrated on 26.1.2026 with patriotic fervour at **JSS Public School, Siddhartha Nagar, Mysuru**. The celebration focused on the theme "Vande Matharam", commemorating the 150th Anniversary of India's National Song.

The programme commenced with an invocation by the School Choir, setting a patriotic tone for the occasion. Smt. B. Latha, Principal, welcomed the Chief Guest and the gathering.

The Chief Guest, Sri B. Niranjana Murthy, Assistant Director, College Education Division, JSS Mahavidyapeetha, unfurled the National Flag, followed by the National Anthem.

The cultural segment featured a patriotic dance, a melodious patriotic song, and a spectacular yoga display, all presented by the students, captivating the audience. Ms. Monisha of Class IX 'A' delivered a speech about the

significance of the day, highlighting the importance of Indian Constitution, Fundamental Rights and Duties, and Responsible Citizenship.

A major highlight of the celebration was the award ceremony, wherein the prize winners in academics, co-curricular activities, and sports were honoured by the chief guest.

In his address, Sri B. Niranjana Murthy emphasized the importance of Republic Day as a reminder of adoption of the Constitution, and, urged everyone to uphold their responsibilities towards the nation, including initiatives like Swachh Bharat, preservation of cultural identity, and adherence to the constitutional values.

The programme concluded with vote of thanks proposed by Ms. K.S. Ritisha of Class IX 'A'. The event was compered by Smt. Anuradha Singh.

## JSS Public School, Mandya



**JSS Public School, Mandya,** celebrated the Republic Day with dignity and patriotic fervor on 26.1.2026. The programme commenced with an invocation by the students of Grade 7, followed by a marchpast that reflected discipline and unity. The National Flag was hoisted by Smt. Nisha Manigandan, Principal, amid singing the National Anthem. Smt. Shruthi, Assistant Teacher, extended a warm welcome to the gathering.

Highlighting the significance of the occasion, Master Kushal Gowda of Grade 9 delivered a speech on the values and ideals enshrined in our Constitution. Speeches in English, Hindi and Kannada were delivered by

students echoing the spirit of unity in diversity and democratic values.

In her address, the principal urged the students to uphold constitutional values and contribute responsibly to the nation's progress.

The cultural segment featured patriotic dance, melodious songs, fancy dress and a yoga presentation, all of which were appreciated by the audience. The event concluded with a vote of thanks by Smt. Kanchana, Assistant Teacher, followed by the Shanti Mantras.

## JSS Dental College & Hospital, Mysuru



Centre for Dental Clinical Research at JSS Dental College and Hospital emerges as a research hub. Inauguration of the Centre was done by Dr. C. G. Betsurmath, Executive Secretary, JSS Mahavidyapeeta, Dr. B. Suresh, Pro Chancellor, JSSAHER. (21 Jan 2026)

The Centre for Dental Clinical Research, **JSS Dental College and Hospital, Mysuru**, a constituent institution of the JSS AHER, was inaugurated with enhanced facilities on 21.1.2026, marking a significant milestone in the Centre's expanding role in clinical and translational dental research.

The new Centre was inaugurated by Dr. C.G. Betsurmath, Executive

Secretary, JSS Mahavidyapeetha. Dr. B. Suresh, Pro-Chancellor, JSS AHER; Dr. B. Manjunatha, Registrar, JSS AHER; Dr. M.R. Dhakshaini, Principal, and Dr. H.P. Jaishankar, Vice-Principal, JSS Dental College and Hospital, were present.

Distinguished guests who graced the occasion included Dr. D. Narayanappa, Principal, JSS Medical College; Dr. C.P. Madhu, Director, JSS Hospital; Dr. K.A. Raveesha, Dean, Faculty of Life Sciences; and Dr. K.S. Nagesh, Former Principal, R. V. Dental College, Bengaluru.

The core researchers of the Centre included Dr. B. Nandlal, Former Dean and Professor of Paediatric Dentistry; Dr. Raghavendra Shanbhog, Professor and Head, Department of Paediatric Dentistry; Dr. M.V.S.S.T. Subba Rao, Professor, Department of Biochemistry; Dr. Sushma Rudraswamy, Reader, Department of Public Health Dentistry; Dr. S. Meenakshi, Reader, Department of Prosthodontics; and Dr. Ramith Ramu, Associate Professor, Department of Biotechnology, Faculty of Life Sciences.

The Centre's growth has been enabled through sustained financial and institutional support from JSS AHER, complemented by research grants from national funding agencies such as the Department of Science and Technology, Indian Council of Medical Research, and Biotechnology Industry Research Assistance Council. The Centre has also been benefited from industry-sponsored clinical trials supported by organizations including Colgate Palmolive, Group Pharma, and Dabur India.

Equipped with state-of-the-art facilities dedicated to dental research, the Centre has developed and established advanced research methodologies in dentistry. It is the first certified centre in India for Quantitative Light-induced Fluorescence (QLF) imaging technology for early caries detection. The Centre also facilitates research in artificial caries models, demineralization-remineralization studies, dental biofilm research, and includes dedicated facilities for microbiology and cell culture studies.

In addition, the Centre supports oral hygiene product development, consultancy services, and interdisciplinary research collaborations. Through these initiatives, it continues to reinforce JSS AHER's commitment to advancing preventive and therapeutic oral health research, addressing both national and global healthcare needs.

## Achievers of JSS Public School, Mandya



**Kum. Shanvi Gowda**, student of Grade 2, JSS Public School, Mandya, secured 7th Place in U-17 TRI Memorial Chess Tournament, organized by The Learning Curve International School, in association with Jyothi Umesh Chess Academy, featuring talented young players from various schools.

She has displayed remarkable presence of mind and strategic skills in the tournament. Competing confidently across nine intense rounds, she secured the 7th place, bringing honour to her school.

***



**Sri Harish Raju**, student of Grade 10, JSS Public School, Mandya won the First Place in Calligraphy Competition organised by Mandya Children's Club, where students of various schools across the district had participated.

Sri Harish Raju impressed the judges with his neat strokes, aesthetic presentation, and originality, and secured First Place in the competition, bringing honour to the school.

## Blessing Ceremony Held




**JSS Public School, Mandya**, organized a Blessing Ceremony for Grade 10 students on 10.1.2026. The programme commenced with the ushering of dignitaries, followed by Saraswati Pooja, to seek divine blessings for wisdom and success. An invocation was rendered by the School Choir set a spiritual tone for the occasion.

The event was graced by Sri V. Ganesha, Motivational Speaker, who was the chief guest. He delivered an inspiring address, motivating the students to face their examinations with confidence, discipline, and a positive mindset. His words encouraged students to believe in their abilities and strive for excellence.

The program was presided over by Smt. Nisha Manigandan, Principal, who addressed the gathering and emphasized the importance of hard work, focus, and values in achieving success. She extended her best wishes to the Grade 10 students in their forthcoming board examinations.

The programme also featured vibrant cultural performances by students of Grade 9, adding colour and energy to the event. Interactive games and prize distribution added more life to the programme. Students of Grade 10 shared their thoughts and experiences, expressing gratitude to the management and teachers for their constant guidance and support. The program concluded with the distribution of mementoes, followed by vote of thanks and chanting of the Shanti Mantras.




ಜಾತ್ರಾ ಮಹೋತ್ಸವದಲ್ಲಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ನಡೆದ ಭಜನಾಮೇಳ ಸಮಾರೋಪದಲ್ಲಿ ಸಿಂದಗಿಯ ಡಾ. ಶ್ರೀ ಪ್ರಭುಸಾರಂಗದೇವ ಶಿವಾಚಾರ್ಯ ಸ್ವಾಮಿಗಳು ಮಾತನಾಡುತ್ತಿರುವುದು. ಶ್ರೀ ಕೆ. ಉಮಾಶಂಕರ್, ಶ್ರೀ ಕೆ. ಈರೇಗೌಡ, ಶ್ರೀ ಜಿ.ಡಿ. ಹರೀಶ್ ಗೌಡ, ಶ್ರೀ ಸಿ.ಎಸ್. ಪುಟ್ಟರಾಜು, ಡಾ. ಕೆ. ಅನ್ನದಾನಿ, ಶ್ರೀ ಕೆ. ವಿವೇಕಾನಂದ ಮೊದಲಾದವರಿದ್ದಾರೆ. (19 ಜನವರಿ 2026)



ಜಾತ್ರಾ ಮಹೋತ್ಸವದ ಅಂಗವಾಗಿ ಏರ್ಪಡಿಸಿದ್ದ ಕುಸ್ತಿ ಪಂದ್ಯಾವಳಿಯನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಉದ್ಘಾಟಿಸಲಾಯಿತು. ಶ್ರೀಮತಿ ಪರಿಮಳ ನಾಗಪ್ಪ, ಡಾ. ದತ್ತೇಶ್‌ಕುಮಾರ್, ಶ್ರೀ ಮಂಜುನಾಥ್, ಶ್ರೀ ಎಂ. ಮುತ್ತುರಾಜ್, ಶ್ರೀ ರಿಜ್ವಾನ್ ಅರ್ಷದ್, ಶ್ರೀ ತನ್ವೀರ್ ಸೇಠ್, ಶ್ರೀ ದೊಡ್ಡಸ್ವಾಮೇಗೌಡ ಹಾಗೂ ಕುಸ್ತಿ ಸಮಿತಿಯ ಸದಸ್ಯರುಗಳು, ಮೊದಲಾದವರಿದ್ದಾರೆ. (19 ಜನವರಿ 2026)

Registered with the Registrar of Newspapers for India No. KARBIL/2014/66470
'JSS Varthapathra' Monthly, Vol. 11, Issue No. 2, February 2026




ಜಾತ್ರಾ ಮಹೋತ್ಸವದ ಅಂಗವಾಗಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಏರ್ಪಡಿಸಿದ್ದ ಸಾಮೂಹಿಕ ವಿವಾಹದಲ್ಲಿ 134 ಜೋಡಿ ವಧೂವರರು ದಾಂಪತ್ಯ ಜೀವನಕ್ಕೆ ಕಾಲಿಟ್ಟರು. ಶ್ರೀ ಅಸಗೋಡು ಜಯಸಿಂಹ, ಶ್ರೀಮತಿ ವಿ. ಸುನಂದ ಅಲ್ಲಂ, ಶ್ರೀ ಅಲ್ಲಂ ವೀರಭದ್ರಪ್ಪ, ಶ್ರೀ ಹಂಪನಗೌಡ ಬಾದರ್ಲಿ, ಶ್ರೀ ಆರ್.ವಿ. ದೇಶಪಾಂಡೆ, ರೆ.ಫಾ. ಡಾ. ಗೇಬ್ರಿಯಲ್ ಮಾರ್ ಗ್ರೆಗೋರಿಯಸ್, ಕನಕಪುರ ಹಿರಿಯ ಶ್ರೀಗಳು, ಪಡುಗೂರು ಶ್ರೀಗಳು, ಶ್ರೀ ಎಂ. ವಿವೇಕ್, ಹರವೆ ಮತ್ತು ಮಾದಹಳ್ಳಿ ಮತ್ತು ಚಿಕಲಪರ್ವಿ ಶ್ರೀಗಳು, ಮೊದಲಾದವರಿದ್ದಾರೆ. (16 ಜನವರಿ 2026)

ಸಂಪಾದಕ: **ಡಾ. ಬಿ. ಪ್ರಭುಸ್ವಾಮಿ ಕಟ್ನವಾಡಿ** * ನೆರವು: **ಆರ್.ಎಸ್. ಪೂರ್ಣಾನಂದ** * ಸಹ ಸಂಪಾದಕ: **ಮ.ಗು. ಬಸವಣ್ಣ**
ಪ್ರಕಾಶಕರು: ಜೆಎಸ್‌ಎಸ್ ಮಹಾವಿದ್ಯಾಪೀಠ, ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತ, ಮೈಸೂರು 570 004
0821-2548212 Extn. 49 * varthapathra@jssonline.org * www.jssonline.org
ಮುದ್ರಣ: ಜೆಎಸ್‌ಎಸ್ ಪ್ರಿಂಟಿಂಗ್ ಪ್ರೆಸ್, ಮೈಸೂರು
**ಬಿಡಿ ಪ್ರತಿ: 10 ರೂ.**